ಪುಸ್ತಕ ಪ್ರಪಂಚ

ಸಂಪುಟ ೩೭   ೧೯೮೨ ಆಗಸ್ಟ್   ಸಂಚಿಕೆ ೧





ವಿಷಯ ಸೂಚಿ

ಮುಖಚಿತ್ರ : ರಾಷ್ಟ್ರಪತಿ ಗಿಯಾನಿ ಜೇಲ್‌ಸಿಂಗ್

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೭ ಅಗಸ್ಟ್ ೧೯೮೨ ಸಂಚಿಕೆ ೧

ಗಿಯಾನಿ ಜೇಲ್‌ಸಿಂಗ್ : ನಮ್ಮ ರಾಷ್ಟ್ರಪತಿ

ಗಿಯಾನಿ ಜೇಲ್‌ಸಿಂಗ್ ನಮ್ಮ ರಾಷ್ಟ್ರದ ಏಳನೆಯ ರಾಷ್ಟ್ರಪತಿ. ೧೯೮೨ ನೇ ಜುಲೈ ೨೫ ರಂದು ಅವರು ರಾಷ್ಟ್ರಪತಿ ಭವನದಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಜಗತ್ತಿನ ಅತ್ಯಂತ ದೊಡ್ಡ ಗಣರಾಜ್ಯವಾದ ೬೮ ಕೋಟಿ ಜನಸಂಖ್ಯೆಯ ಬೃಹತ್‌ಭಾರತದ ಕಲ್ಯಾಣಕ್ಕಾಗಿ ಶ್ರಮಿಸುವ ಜವಾಬ್ದಾರಿಯನ್ನು ವಹಿಸಿಕೊಂಡರು. ವೈಯಕ್ತಿಕ ಪಕ್ಷಪಾತ, ಸ್ವಪಕ್ಷೀಯ ಆಸಕ್ತಿ, ಗುಂಪುಗಾರಿಕೆ ಎಲ್ಲವರ ಸೆರೆ ಬಿಡಿಸಿಕೊಂಡು, ರಾಷ್ಟ್ರದ ಅತ್ಯುನ್ನತ ಹುದ್ದೆಯ ಘನತೆ ಗೌರವಗಳನ್ನು ಕಾಪಿಡುವ ಪ್ರಮಾಣವಚನ ಸ್ವೀಕರಿಸಿದರು.

೧೯೧೬ ರ ಮೇ ೫ ರಂದು ಜನಿಸಿದ ಜೇಲ್‌ಸಿಂಗ್ ಅವರಿಗೆ ಈಗ ೬೬ ವರ್ಷ. ಪಂಜಾಬಿನ ಫರೀದ್‌ಕೋಟ್ ಜಿಲ್ಲೆಯ ಸಾಂಧ್ವಾನ್ ಗ್ರಾಮದಲ್ಲಿ ಜನಿಸಿದರು. ಬಡಗಿಯ ಕುಟುಂಬದವರಾಗಿದ್ದು, ರೈತಜೀವನ ನಡೆಸುತ್ತಿದ್ದ ಇವರ ತಂದೆ ಕಿಶನ್‌ಸಿಂಗ್ ೫೬ ಎಕರೆ ಜಮೀನಿನ ಮಾಲೀಕ. ಗ್ರಾಮೀಣ ಕುಟುಂಬದಲ್ಲಿ ಜನಿಸಿದ ಜೇಲ್‌ಸಿಂಗ್ ಮೆಟ್ರಿಕ್ಯುಲೇಶನ್‌ವರೆಗೆ ಕಷ್ಟಪಟ್ಟು ಓದಿದರು. ಬಟ್ಟೆ ಹೊಲಿಯುವ, ಕಲ್ಲು ಒಡೆಯುವ, ನೆಲ ಉಳುವ, ರಸ್ತೆ ಮಾಡುವ, ಬಾವಿ ತೋಡುವ, ಖಡ್ಗ ಮಾಡುವ ಕಾಯಕಗಳೆಲ್ಲದರಲ್ಲಿ ಪರಿಶ್ರಮವಿರುವ ಇವರಿಗೆ ಸಾಮಾನ್ಯ ಜನರ ಮನೋಧರ್ಮ, ಸಮಸ್ಯೆಗಳು ಹಾಗೂ ಆಕಾಂಕ್ಷೆಗಳ ಬಗ್ಗೆ ಪೂರ್ಣ ಅರಿವಿದೆ.

ಸಿಖ್‌ಮತದ ಪವಿತ್ರ ಗ್ರಂಥವನ್ನು ಓದಿ ಹೇಳುವ ವೃತ್ತಿಯನ್ನು ಮಾಡಬೇಕೆಂದು ಇವರು ಅದರ ಅಧ್ಯಯನ ಮಾಡಿ "ಗ್ರಂಥಿ"ಯಾದರು. ಈ ಕಾರಣದಿಂದ ಇವರ 'ಗಿಯಾನಿ' ಎಂದರೆ ಜ್ಞಾನಿ, ಎಂಬ ಬಿರುದು ಇವರ ಹೆಸರಿಗೆ ಅಂಟಿಕೊಂಡು ಉಳಿದುಬಂದಿದೆ.

ಇವರ ನಿಜವಾದ ಹೆಸರು ಜರ್ನೈಲ್‌ಸಿಂಗ್ ಎಂದು. ಒಮ್ಮೆ ಲಾಹೋರ್ ಜೈಲಿಗೆ ಇವರನ್ನು ಹಾಕಿದ್ದಾಗ, ಜೇಲಿನ ಅಧಿಕಾರಿಗಳಿಗೆ ಇವರು ತಮ್ಮ ಹೆಸರನ್ನು 'ಜೈಲ್‌ಸಿಂಗ್' ಎಂದು ಹೇಳಿದ್ದು ಅದೇ ಉಳಿದುಬಂದಿದೆ.

ಆಗ ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಫರೀದ್‌ಕೋಟ್ ಒಂದು ರಾಜ ಸಂಸ್ಥಾನವಾಗಿತ್ತು. ಆ ಸಂಸ್ಥಾನವನ್ನು ಆಳುತ್ತಿದ್ದ ದೊರೆಯ ವಿರುದ್ಧ ಇವರು ಧರ್ಮ ಸಂರಕ್ಷಣೆಗೆ ಪ್ರಬಲ ಹೋರಾಟವನ್ನೇ ನಡೆಸಿದ್ದರು. ಜೊತೆಗೆ ಆಗ ಪ್ರಚಲಿತವಿದ್ದ ಸ್ವಾತಂತ್ರ್ಯ ಹೋರಾಟದ ಕಾವಿಗೆ ಒಳಗಾಗಿ ಫರೀದ್‌ಕೋಟ್‌ದ ಮಹಾರಾಜನನ್ನು ಪ್ರತಿಭಟಿಸಿ ಆ ಸಂಸ್ಥಾನದಲ್ಲಿ ಕಾಂಗ್ರೆಸ್ ಪಕ್ಷ ಹುಟ್ಟಿಕೊಳ್ಳಲು ಕಾರಣರಾದರು. ೧೯೩೮ ರಲ್ಲಿ ಇವರನ್ನು ಬಂಧಿಸಿ ಫರೀದ್‌ಕೋಟ್ ಜೈಲಿಗೆ ಹಾಕಲಾಯಿತು. ಐದು ವರ್ಷಗಳ ಕಾಲ ಆ ಸೆರೆಮನೆಯಲ್ಲಿ ಇರಬೇಕಾಯಿತು. ಅದೂ ಏಕಾಂತ ಕಾರಾಗೃಹವಾಸ. ಆ ಬಂಧನದ ನೆನಪು ಜೇಲ್‌ಸಿಂಗರಿಗೆ ಇನ್ನೂ ಹಚ್ಚಹಸಿರಾಗಿದೆ. "ಪ್ರಾಣಿಗಳಿಗಿಂತ ಕಡೆಯಾಗಿ ನಾನು ಅಲ್ಲಿ ಜೀವಿಸುತ್ತಿದ್ದೆ" ಎನ್ನುತ್ತಾರೆ.

೧೯೪೬ ರಲ್ಲಿ ಮತ್ತೆ ತೀವ್ರ ಸ್ವಾತಂತ್ರ್ಯ ಹೋರಾಟವನ್ನು ಆರಂಭಿಸಿದರು. ರಾಷ್ಟ್ರಪಿತ ಗಾಂಧೀಜಿ ಹಾಕಿಕೊಟ್ಟ ದಾರಿಯಲ್ಲಿ ಮುನ್ನುಗ್ಗಿದರು. ಈ ಕಾಲದಲ್ಲಿಯೇ ಇವರಿಗೆ ಜವಹರಲಾಲ್ ನೆಹರೂ ಅವರೊಂದಿಗೆ ನಿಕಟ ಸಂಪರ್ಕ ಉಂಟಾಯಿತು.

ಇಡೀ ಸಂಸ್ಥಾನದ ಪ್ರಜೆಗಳು ಇವರ ಹಿಂದೆ ಒಂದಾಗಿ ನಿಂತು ರಾಷ್ಟ್ರಧ್ವಜವನ್ನು ಹಾರಿಸಲು ಯತ್ನಿಸಿದರು. ಪ್ರಜಾಮಂಡಲ ಚಳವಳಿಯನ್ನು ಆರಂಭಿಸಿ, ಸಮಾನಾಂತರ ಸರ್ಕಾರವನ್ನೇ ರಚಿಸಲು ಹೊರಟ ಇವರ ವಿರುದ್ಧ ಸಂಸ್ಥಾನದ ದೊರೆ ಕ್ರೂರ ಕ್ರಮಗಳನ್ನು ಕೈಗೊಂಡ. ಈ ಹೋರಾಟವನ್ನು ಹತ್ತಿಕ್ಕಲು ದಬ್ಬಾಳಿಕೆ ನಡೆಯಿತು. ಆಡಳಿತ ವರ್ಗ ಹಾಗೂ ಪೋಲಿಸರಿಂದ ಜೇಲ್‌ಸಿಂಗರು ತೀವ್ರ ಅವಮಾನ ಹಾಗೂ ಹಿಂಸೆಯನ್ನು ಅನುಭವಿಸಬೇಕಾಯಿತು. ಒಮ್ಮೆ ಪೋಲಿಸ್ ಮುಖ್ಯಸ್ಥ ಇವರ ತಲೆಗೂದಲನ್ನು ಜೀಪಿಗೆ ಕಟ್ಟಿ ಫರೀದ್‌ಕೋಟ್‌ನ ಬೀದಿಗಳಲ್ಲಿ ಎಳೆದಾಡಿಸಬೇಕೆಂದು ಆಜ್ಞೆ ಮಾಡಿದ್ದ. ಕೊನೆಯ ಗಳಿಗೆಯಲ್ಲಿ ಈ ಭಯಂಕರ ಆಜ್ಞೆಯನ್ನು ಹಿಂತೆಗೆದುಕೊಳ್ಳಲಾಯಿತು.

ಸ್ವಾತಂತ್ರ್ಯ ಹೋರಾಟದಲ್ಲಿ ಹೃತ್ಪೂರ್ವಕವಾಗಿ ಭಾಗವಹಿಸಿದ್ದ ಇವರು ಸ್ವಾತಂತ್ರ್ಯಾನಂತರ ಸಹಜವಾಗಿಯೇ ಚುನಾವಣೆಯಲ್ಲಿ ಆಯ್ಕೆಯಾಗಿ ಬಂದರು. ೧೯೪೮ ರಿಂದ ೧೯೫೨ ರವರೆಗೆ ಇವರು ಪಾಟಿಯಾಲ ಮತ್ತು ಪೂರ್ವ

ಪಂಜಾಬ್ ರಾಜ್ಯಗಳ ಸಂಯುಕ್ತ ಸರ್ಕಾರದಲ್ಲಿ ಕಂದಾಯ ಮಂತ್ರಿಯಾಗಿ ನಂತರ ವ್ಯವಸಾಯ ಮಂತ್ರಿಯಾಗಿ ಸೇವೆ ಸಲ್ಲಿಸಿದರು. ಅನಂತರ ಪಾಟಿಯಾಲ ಮತ್ತು ಪೂರ್ವಪಂಜಾಬ್ ಸಂಯುಕ್ತ ರಾಜ್ಯದ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. ಈ ಸಂಯುಕ್ತ ರಾಜ್ಯ ಪಂಜಾಬ್ ರಾಜ್ಯದೊಂದಿಗೆ ಮಿಳಿತ ವಾಗಿ ಏಕ ಪಂಜಾಬ್ ರಾಜ್ಯವಾದಾಗ, ಅಲ್ಲಿಂದ ಜೇಲ್‌ಸಿಂಗ್ ರಾಜ್ಯಸಭೆಗೆ ಆಯ್ಕೆಯಾಗಿ ಬಂದರು.

೧೯೬೨ ರಲ್ಲಿ ಪಂಜಾಬ್ ವಿಧಾನಸಭೆಯ ಚುನಾವಣೆಯಲ್ಲಿ ಗೆದ್ದು ಬಂದರು. ಆಗಿನ ಮುಖ್ಯಮಂತ್ರಿ ಪ್ರತಾಪ್‌ಸಿಂಗ್ ಕೈರಾನರ ಮಂತ್ರಿಮಂಡಲದಲ್ಲಿ ಕ್ಯಾಬಿನೆಟ್ ಸಚಿವರಾದರು. ಕಾಮರಾಜ್ ಪ್ಲಾನಿನ ಪ್ರಕಾರ ಮಂತ್ರಿಮಂಡಲದ ಸಂಖ್ಯೆಯನ್ನು ಕಡಿಮೆಗೊಳಿಸುವ ಕಾರ್ಯಕ್ರಮದ ಅಂಗವಾಗಿ ಇವರು ತಮ್ಮ ಸಚಿವಸ್ಥಾನ ಬಿಟ್ಟುಕೊಟ್ಟರು.

ಜೇಲ್‌ಸಿಂಗರ ರಾಜಕೀಯ ಜೀವನದ ಸ್ವರ್ಣಯುಗ ಎಂದರೆ ೧೯೭೨ ರಿಂದ ೧೯೭೭ ರವರೆಗೆ ಇವರು ಪಂಜಾಬಿನ ಮುಖ್ಯಮಂತ್ರಿಗಳಾಗಿದ್ದ ಅವಧಿ. ತಮ್ಮ ರಾಜಕೀಯ ಕೌಶಲದಿಂದ ಇವರು ಒಳ ರಾಜಕೀಯವನ್ನು ಹತ್ತಿಕ್ಕಿ ಮತೀಯ ದ್ವೇಷಗಳನ್ನು ತಣಿಸಿ, ರಾಜ್ಯದ ಸುಭಿಕ್ಷಕ್ಕೆ ಕಾರಣರಾದರು. ರಾಜ್ಯದಲ್ಲಿ ಹಸಿರು ಕ್ರಾಂತಿಯಾಯಿತು. ಔದ್ಯಮೀಕರಣ ತೀವ್ರಗೊಂಡಿತು.

೧೯೭೭ ರಲ್ಲಿ ಕೇಂದ್ರದ ಜನತಾ ಸರ್ಕಾರ ಪಂಜಾಬಿನ ಕಾಂಗ್ರೆಸ್ ಸರ್ಕಾರ ವನ್ನು ವಜಾ ಮಾಡಿದಾಗ ಇವರು ಮುಖ್ಯಮಂತ್ರಿ ಪದವಿಯನ್ನು ಕಳೆದು ಕೊಂಡರು.

೧೯೮೦ ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಜೇಲ್‌ಸಿಂಗ್ ಅವರು ಹೋಶಿಯಾಪುರ ಕ್ಷೇತ್ರದಿಂದ ಆಯ್ಕೆಯಾಗಿ ಬಂದರು. ಕೇಂದ್ರ ಸರ್ಕಾರದ ಮಂತ್ರಿಮಂಡಲದಲ್ಲಿ ಗೃಹಮಂತ್ರಿಯಾಗಿ, ತಾವು ಅತ್ಯುನ್ನತ ಹುದ್ದೆಗೆ ಹೋಗುವವರೆಗೆ, ಸೇವೆ ಸಲ್ಲಿಸಿದರು.

ತಮ್ಮ ಇಡೀ ರಾಜಕೀಯ ಜೀವನದಲ್ಲಿ ಜೇಲ್‌ಸಿಂಗ್ ಅವರು ತಮ್ಮ ಅಂತಸ್ಸಾಕ್ಷಿಗೆ ವಿರುದ್ಧವಾದ ಕೆಲಸವನ್ನು ಮಾಡಿಲ್ಲ. ತಮ್ಮ ನಿಷ್ಠೆಯನ್ನು ಕಳೆದುಕೊಂಡಿಲ್ಲ. ಪಕ್ಷಾಂತರ ಮಾಡಿಲ್ಲ. ರಾಜಕಾರಣವಾದ ಪ್ರತಿಭಾವಂತ ಮುತ್ಸದ್ದಿಗಳೊಡನೆ,ನೆಹರೂ,ವಲ್ಲಭಬಾಯಿಪಟೇಲ್,ಕೈರಾನ್, ಇಂದಿರಾಗಾಂಧಿ ಮೊದಲಾದವರೊಡನೆ ಸದಾ ಹಾರ್ದಿಕ ಸಂಬಂಧಗಳನ್ನು ಇಟ್ಟುಕೊಂಡು ಬಂದಿದ್ದಾರೆ.

ಇವರ ಖಾಸಗಿ ಜೀವನ ಹಾಗೂ ರಾಜಕೀಯ ಜೀವನ ಸ್ಪಷ್ಟವಾಗಿ ಬೇರೆ ಬೇರೆಯಾದುದು. ಫರೀದ್‌ಕೋಟ್‌ದ ಇವರ ಮತ್ತು ಇವರ ಸೋದರರ ಜಂಟಿ ಆಸ್ತಿಯಾದ ೫೭ ಎಕರೆ ಜಮೀನನ್ನು ಇವರ ಮಗ ನೋಡಿಕೊಳ್ಳುತ್ತಾನೆ. ಇವರು ಹುಟ್ಟಿದ ಮಣ್ಣಿನ ಗುಡಿಸಲು ಅಲ್ಲಿ ಇನ್ನೂ ಇದೆ. ಸರಳ ಹಾಗೂ ಸಂಪ್ರದಾಯಶೀಲೆಯಾದ ಇವರ ಪತ್ನಿ ತಮ್ಮ ಹಳ್ಳಿಯಿಂದ ಈಚೆಗೆ ಬಂದಿರುವುದೇ ಅಪರೂಪ. ಇವರ ಮೂವರು ಹೆಣ್ಣುಮಕ್ಕಳಲ್ಲಿ ಇಬ್ಬರು ವೈದ್ಯೆಯರಾಗಿದ್ದಾರೆ.

೩೫೦೦ ಜನಸಂಖ್ಯೆಯ ಸಾಂಧ್ವಾನ, ಇವರ ಹುಟ್ಟೂರು. ಫರೀದ್‌ಕೋಟ್‌ನಿಂದ ಐದು ಮೈಲು ದೂರವಿದೆ. ಇಲ್ಲಿ ಇರುವ ರೈಲುನಿಲ್ದಾಣಕ್ಕೆ ತಮ್ಮ ಊರಿನ ಬಡಗಿಯ ಮಗನ, ಊರಿಗೆ ಹೆಸರು ತಂದ ಮಗನ, ಗಿಯಾನಿ ಜೇಲ್ ಸಿಂಗ್‌ರ ಹೆಸರನ್ನೇ ಇಡಲಾಗಿದೆ.

ರಾಜೇಂದ್ರಪ್ರಸಾದ್ (೧೯೫೨–೬೨), ರಾಧಾಕೃಷ್ಣನ್ (೧೯೬೨–೬೭), ಜಕೀರ್‌ಹುಸೇನ್ (೧೯೬೭–೬೯), ವರಾಹಗಿರಿ ವೆಂಕಟಗಿರಿ (೧೯೬೯–೭೪), ಫಕ್ರುದ್ದೀನ್‌ಅಲಿಅಹ್ಮದ್ (೧೯೭೪–೭೭), ನೀಲಂಸಂಜೀವರೆಡ್ಡಿ (೧೯೭೭–೮೨) ಈ ಖ್ಯಾತ ಹೆಸರುಗಳ ಜೊತೆ ಜೇಲ್‌ಸಿಂಗರ ಹೆಸರು ಈಗ ಸೇರಿಕೊಂಡಿದೆ.

ಎಸ್. ಶ್ರೀಧರಮೂರ್ತಿ



ಪ್ರತ್ಯಕ್ಷ ಅನುಭವಕ್ಕೆ ವಿರೋಧವಾದ ಯಾವುದೇ ಮಾತು ವೇದ ಅಥವಾ ಶಾಸ್ತ್ರಗಳಲ್ಲಿದ್ದರೂ ಅದನ್ನು ಮಾನ್ಯ ಮಾಡಬೇಕಾಗಿಲ್ಲ.

—ಶಂಕರಾಚಾರ್ಯ

ವಿದೇಶಿ ಪ್ರವಾಸಿಗಳು ಕಂಡ ವಿಜಯನಗರದ ವೈಭವ

"ವಿಜಯನಗರದಂತಹ ಪಟ್ಟಣವನ್ನು ಕಣ್ಣು ಕಂಡಿಲ್ಲ, ಭೂಮಂಡಲದಲ್ಲಿ ಅದಕ್ಕೆ ಸಾಟಿಯಾಗಬಲ್ಲ ಪಟ್ಟಣವೊಂದಿತ್ತೆಂದು ಓದಿ ಕೇಳಿಲ್ಲ." ಈ ಮಾತುಗಳನ್ನು ಬರೆದಾತ ಎಷ್ಟೋ ಕಾಲದ ನಂತರ ಇತಿಹಾಸ ಗ್ರಂಥವೊಂದನ್ನು ರಚಿಸಿದ ಚರಿತ್ರಕಾರನಲ್ಲ; ಅಥವಾ ಕಲ್ಪನೆಯ ಭೃಂಗದ ಬೆನ್ನೇರಿ ವಿಹರಿಸಿದ ಕವಿಯಲ್ಲ. ಅಂದಿನ ಜಗತ್ತಿನ ಅತ್ಯಂತ ಸುಂದರ ನಗರವನ್ನು ಕಣ್ಣಾರೆ ಕಂಡು ಅಲ್ಲಿಯೇ ಆರು ತಿಂಗಳುಗಳಿಗಿಂತಲೂ ಹೆಚ್ಚು ಕಾಲ ವಾಸಿಸಿದ ವಿದೇಶಿ ರಾಯಭಾರಿ, ಪ್ರತ್ಯಕ್ಷದರ್ಶಿ ಅಬ್ದುಲ್ ರಜಾಕ್, ಈ ಮಾತುಗಳನ್ನು ಬರೆದಿಟ್ಟು ಹೋಗಿದ್ದಾನೆ. ವಿಜಯನಗರದ ವೈಭವವನ್ನು ಈ ರೀತಿ ಬಣ್ಣಿಸಿರುವವನು ಆತನೊಬ್ಬನೇ ಅಲ್ಲ. ಆತನಿಗಿಂತ ಮುಂಚಿತವಾಗಿಯೂ ಆತನ ತರುವಾಯವೂ ವಿಜಯನಗರಕ್ಕೆ ಭೇಟಿಯಿತ್ತ ನಿಕಾಲೋಕಾಂಟಿಪೆಯಸ್, ನ್ಯೂನಿಜ್, ಡುಯಾರ್ಟೆ ಬಾರ್ಬೋಸ, ವರ್ತೆಮ ಮುಂತಾದ ವಿದೇಶಿ ಪ್ರವಾಸಿಗಳೆಲ್ಲರೂ ಈ ಮಹಾನಗರದ ವೈಭವವನ್ನು ಕಂಡು ಬೆರಗಾಗಿದ್ದಾರೆ, ಮನಸಾರೆ ಹೊಗಳಿದ್ದಾರೆ, ಮರೆಯಲಾಗದ ಮಾತುಗಳಲ್ಲಿ ಬಣ್ಣಿಸಿದ್ದಾರೆ. ಅವರು ಬರೆದಿಟ್ಟುಹೋಗಿರುವ ವರ್ಣನೆಗಳನ್ನು ಓದಿದರೆ, ಇಂದು ನಮಗೆ ನಂಬುವುದೇ ಕಷ್ಟವಾಗುತ್ತದೆ!

'ಮರೆಯಲಾಗದ ಸಾಮ್ರಾಜ್ಯ'ದ ಮರೆಯಲಾಗದ ಮಹಾರಾಜಧಾನಿ ವಿಜಯನಗರವು ಸುಮಾರು ಕ್ರಿ. ಶ. ೧೩೩೬ ರಲ್ಲಿ ಸ್ಥಾಪಿತಗೊಂಡು, ಕಾಲಕ್ರಮೇಣ ಬೆಳೆದು, ವೈಭವದ ಉತ್ತುಂಗ ಶೃಂಗವನ್ನೇರಿ, "ನ ಭೂತೋ ನ ಭವಿಷ್ಯತಿ" ಎನ್ನುವಂತೆ ಕಂಗೊಳಿಸಿತು. ವಿಸ್ತಾರ-ವೈಶಾಲ್ಯ, ಸಂಪತ್ಸಮೃದ್ಧಿ, ಜನಬಾಹುಳ್ಯ, ಭೋಗವೈಭವ—ಇವೆಲ್ಲವುಗಳ ದೃಷ್ಟಿಯಿಂದ, ಈ ಮಹಾನಗರವು ರೋಂ ಮತ್ತು ವೆನಿಸ್ ಪಟ್ಟಣಗಳನ್ನು ಮೀರಿಸಿದ್ದಿತು! ಈ ಮಹಾನಗರವು ತನ್ನ ಕಾಲದ ಜಗತ್ತಿನ ಕಣ್ಮಣಿಯಾಗಿದ್ದಿತು!

ವೈಶಾಲ್ಯ ಮತ್ತು ಸೌಂದರ್ಯ

ಬೆಟ್ಟ-ಗುಡ್ಡಗಳಿಂದ ಕೂಡಿದ ವಿಶಾಲ ಪ್ರದೇಶವನ್ನಾವರಿಸಿದ್ದ ಈ ಮಹಾನಗರದ ಸುತ್ತಲೂ ಏಳುಸುತ್ತಿನ ಬಲವಾದ ಕೋಟೆ ಇದ್ದಿತು. ಈ ಕೋಟೆಯ ಎರಡು ಮೂರನೆಯ ಸುತ್ತಿನ ಗೋಡೆಗಳ ನಡುವೆ ಅಲ್ಲಲ್ಲಿ ಗದ್ದೆಗಳೂ

ತೋಟಗಳೂ ಉದ್ಯಾನಗಳೂ ಇದ್ದುವು. ಅಲ್ಲಿಂದ ಮುಂದೆ, ನಗರದ ಕಿಕ್ಕಿರಿದ ಪೇಟೆಗಳು; ಕೋಟೆಯ ಕಡೆಯ (ಏಳನೆಯ) ಸುತ್ತಿನ ಪ್ರದೇಶದಲ್ಲಿ ರಾಜನ ಅರಮನೆ, ಡಣಾಯಕನ (ದಂಡನಾಯಕ) ನಿವಾಸ, ಟಂಕಸಾಲೆ ಇದ್ದುವು. ಈ ಮಹಾನಗರದ ಸುತ್ತಳತೆಯು ಸುಮಾರು ೬೦ ಮೈಲಿಗಳಷ್ಟಿತ್ತು. ವೈಭವದ ದಿನಗಳಲ್ಲಿ, ವಿಜಯ ನಗರದ ಸೌಂದರ್ಯವು ನಯನ ಮನೋಹರವಾಗಿದ್ದಿತು, ಭುವನ ಮೋಹಕವಾಗಿದ್ದಿತು. ಗುಡ್ಡವೊಂದನ್ನೇರಿ ನಿಂತು ನೋಡಿದ ಪೆಯಸ್ ತನಗೆ ಕಂಡಷ್ಟು ಭಾಗವೇ ರೋಂನಗರದಷ್ಟು ವಿಶಾಲವಾಗಿದ್ದು, ನೋಡಲು ಬಲು ಸುಂದರವಾಗಿದ್ದಿತು ಎಂದಿದ್ದಾನೆ. ಅಲ್ಲಲ್ಲಿ ಮರಗಳ ದಟ್ಟವಾದ ಸಾಲುಗಳು, ಮನೆಗಳ ಕೈದೋಟಗಳು, ಅವುಗಳ ನಡುವೆ ಹರಿಯುವ ನೀರಿನ ಕಾಲುವೆಗಳು, ಅಲ್ಲೊಂದು ಇಲ್ಲೊಂದು ಸರೋವರ,ಅರಮನೆಯ ಸಮೀಪದಲ್ಲಿಯೇ ತೆಂಗಿನ ತೋಟ, ಫಲಭರಿತವಾದ ಹಣ್ಣಿನ ಮರಗಳು, ಅತ್ತ ಮುಸಲ್ಮಾನರು ವಾಸಿಸುತ್ತಿದ್ದ ಪ್ರದೇಶದಲ್ಲಿ (ಅಥವಾ ಈಗಿನ ಕಡ್ಡಿರಾಮಪುರದಲ್ಲಿ) ಹಲವಾರು ತೋಟಗಳು, ತೋಪುಗಳು, ಅವುಗಳಲ್ಲಿ ಮಾವು, ಅಡಕೆ, ಹಲಸು, ಕಿತ್ತಳೆ, ನಿಂಬೆ, ಬಿಳಿಯ ದ್ರಾಕ್ಷಿ ಮುಂತಾದ ಫಲವೃಕ್ಷಗಳೂ ಹಸಿರು ಬಳ್ಳಿಗಳೂ ಕಂಗೊಳಿಸುತ್ತಿದ್ದುವು. ಈ ಮರ-ಬಳ್ಳಿಗಳೆಲ್ಲವೂ ಎಷ್ಟು ದಟ್ಟವಾಗಿ ಬೆಳೆದಿದ್ದುವೆಂದರೆ, ಅದೊಂದು ಅರಣ್ಯದಂತೆ ಭಾಸವಾಗುತ್ತಿದ್ದಿತಂತೆ!

ವಿಜಯನಗರದ ಜನಸಂಖ್ಯೆ ಅಪಾರವಾಗಿದ್ದು, ಯಾವ ಬೀದಿಯಲ್ಲಿ, ಯಾವ ರಸ್ತೆಯಲ್ಲಿ ನೋಡಿದರೂ ಜನರು ಕಿಕ್ಕಿರಿದಿರುತ್ತಿದ್ದರು. ಈ ಅಪಾರ ಜನಸ್ತೋಮದ ನಡುವೆ ಸೈನಿಕರಾಗಲಿ, ಅಶ್ವಾರೋಹಿಗಳಾಗಲಿ ಹಾದು ಹೋಗುವುದೇ ದುಸ್ಸಾಧ್ಯವಾಗಿದ್ದಿತು!

ಭವ್ಯ ಸುಂದರ ಪ್ರಾಸಾದಗಳು

ಈ ಮಹಾನಗರದಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚು ಮನೆಗಳಿದ್ದುವು. ಬೆಟ್ಟಗುಡ್ಡಗಳ ಕೊರಕಲು ಪ್ರದೇಶಗಳಲ್ಲಿ ಸಾಮಾನ್ಯ ಜನರ ವಸತಿಗೃಹಗಳಿದ್ದುವಾದರೆ, ನಗರದ ಪ್ರಮುಖ ಭಾಗಗಳಲ್ಲಿ ಪ್ರತಿಷ್ಠಿತ ವ್ಯಕ್ತಿಗಳ, ಸಾಮಂತರ, ಶ್ರೀಮಂತರ ಭವ್ಯಸೌಧಗಳೂ ಪ್ರಾಸಾದಗಳೂ ಇದ್ದುವು. ವರ್ಷದ ಎಲ್ಲ ಋತುಗಳಿಗೂ ಸರಿಹೊಂದುವಂತೆ ಕಟ್ಟಲಾಗಿದ್ದ ಈ ಕಟ್ಟಡಗಳು ನೋಡಲು ಬಲು ಸುಂದರವಾಗಿರುತ್ತಿದ್ದುವು. ಮನೆಗಳ ಮುಂದುಗಡೆ ಎರಡು ಪಕ್ಕಗಳಲ್ಲಿಯೂ ಜಗಲಿಗಳು, ವಿವಿಧ ಆಕೃತಿಗಳನ್ನು ಬಿಡಿಸಿದ ಸುಂದರವಾದ ಕೆತ್ತನೆಯ

ಕಂಬಗಳು, ಗೋಡೆಗಳ ಮೇಲೆ ಚಿತ್ರಗಳು, ಎತ್ತರವಾದ ಉಪ್ಪರಿಗೆಗಳು, ಚಂದ್ರಶಾಲೆಗಳು, ಬಣ್ಣಬಣ್ಣದ ಕಲಶಗಳು, ಧ್ವಜಗಳು, ಮನೆಮನೆಗೊಂದು ಹೂವಿನ ತೋಟ, ಕೆಂದಾವರೆಯ ಕೊಳ—ಹೀಗೆ ನೋಡುವ ಕಣ್ಣುಗಳಿಗೆ ಹಬ್ಬವೆನಿಸುವಂತಿದ್ದುವು, ಈ ಭವ್ಯ, ಸುಂದರ ಪ್ರಾಸಾದಗಳು!

ಸಂಪತ್ಸಮೃದ್ಧಿ

ವಿಜಯನಗರದಲ್ಲಿ ಸಂಪತ್ಸಮೃದ್ಧಿಯ ತುಂಗಭದ್ರೆ ಸದಾ ಉಕ್ಕಿಹರಿಯುತ್ತಿತ್ತು! ಈ ಮಹಾನಗರವು ಇಡೀ ಜಗತ್ತಿನಲ್ಲಿಯೇ ಅತ್ಯಂತ ಶ್ರೀಮಂತ, ಸಂಪದ್ಯುಕ್ತ, ಸುಸಮೃದ್ಧ ನಗರವಾಗಿದ್ದಿತೆಂದು ಹೇಳುತ್ತಾನೆ ಪೆಯಸ್. ಜಗತ್ತಿನ ಇತರ ಮಹಾ ನಗರಗಳಲ್ಲಿ ಯಾವುದಕ್ಕಾದರೂ ಕೊರತೆಯಿದ್ದಿರಬಹುದು. ಆದರೆ ಈ ನಗರದಲ್ಲಿ ಮಾತ್ರ ಕೊರತೆ, ಅಭಾವ ಎಂಬುದಿರಲಿಲ್ಲ. ಅಲ್ಲಿ ದೊರಕದಿದ್ದ ವಸ್ತುವೇ ಇರಲಿಲ್ಲ! ಅಕ್ಕಿ, ಜೋಳ, ಗೋಧಿ, ಬೇಳೆಕಾಳು, ಹೆಸರು, ಹುರುಳಿ, ಇವೇ ಮುಂತಾದ ದವಸ ಧಾನ್ಯಗಳೂ ಬಗೆ ಬಗೆಯ ತರಕಾರಿಗಳೂ ಎಲ್ಲ ಜಾತಿಯ ಹಣ್ಣು-ಹಂಪಲು ಪರಿಮಳಭರಿತ ಪುಷ್ಪಗಳೂ ಹಾಲು, ಮೊಸರು, ಬೆಣ್ಣೆ; ಮಾಂಸ, ಮೀನು, ಕೋಳಿ, ಎಣ್ಣೆ—ಇವೇ ಮುಂತಾದ ಎಲ್ಲ ನಿತ್ಯ ಜೀವನಾವಶ್ಯಕ ಪದಾರ್ಥಗಳೂ ಯಥೇಚ್ಛವಾಗಿಯೂ ಅಗ್ಗವಾಗಿಯೂ ದೊರಕುತ್ತಿದ್ದುವು. ಪೇಟೆಗಳಲ್ಲಿಯೂ ಬೀದಿ-ಬೀದಿಗಳಲ್ಲಿಯೂ ಸರಕುಗಳ ಹೇರನ್ನು ಹೊತ್ತುನಿಂತ ಎತ್ತುಗಳ ಸಾಲು-ಸಾಲುಗಳೇ ಇರುತ್ತಿದ್ದುವು. ಕೆಲವೆಡೆಗಳಲ್ಲಿಯಂತೂ ಎತ್ತುಗಳ ಸಾಲುಗಳ ನಡುವೆ ನುಸುಳಿಕೊಂಡು ಹೋಗುವುದೇ ಕಷ್ಟವಾಗಿ, ಬೇರೊಂದು ದಾರಿ ಹಿಡಿದುಹೋಗಬೇಕಾಗುತ್ತಿತ್ತು. ಪ್ರತಿ ಶುಕ್ರವಾರವೂ ಭಾರಿ ಸಂತೆ ಸೇರುತ್ತಿದ್ದಿತು. ನಗರದ ವಿವಿಧ ಭಾಗಗಳಲ್ಲಿಯೂ ವಾರದ ಇತರ ದಿನಗಳಲ್ಲಿ ಸಂತೆಗಳು ಸೇರುತ್ತಿದ್ದುವು.

ಪೇಟೆಗಳು: ವಿಜಯನಗರದ ಪೇಟೆಗಳು ಆ ಮಹಾ ನಗರದ ಅಪರಿಮಿತ ಸಂಪತ್ಸಮೃದ್ಧಿಗೆ ಮೇರು ಸಾಕ್ಷಿಗಳಾಗಿ ಕಂಗೊಳಿಸುತ್ತಿದ್ದುವು. ರಾಜರ ಅರಮನೆಯ ಮುಂದೆಯೇ ಒಂದಕ್ಕೆ ಎದುರಾಗಿ ಒಂದರಂತೆ ನಾಲ್ಕು ಪೇಟೆಸಾಲುಗಳಿದ್ದುವು, ಪೇಟೆ ಬೀದಿಗಳು ತುಂಬ ವಿಶಾಲವಾಗಿಯೂ ಉದ್ದವಾಗಿಯೂ ಇದ್ದುವು. ಒಂದೊಂದು ಪೇಟೆಗೂ ಒಂದೊಂದು ಎತ್ತರವಾದ ದ್ವಾರಮಂಟಪವೂ ಭವ್ಯವಾದ ಕೈಸಾಲೆಗಳೂ ಇದ್ದುವು. ಹಣ್ಣು-ಹೂವು, ಸುಗಂಧ ವಸ್ತುಗಳು, ತಾಂಬೂಲದ್ರವ್ಯಗಳು, ಹೀಗೆ ಒಂದೊಂದು ಬಗೆಯ ಸರಕನ್ನು ಮಾರುವ

ಅಂಗಡಿಗಳ ಸಾಲುಗಳೇ ಬೇರೆಬೇರೆಯಾಗಿರುತ್ತಿದ್ದುವು. ಎಲ್ಲೆಲ್ಲೂ ಗುಲಾಬಿ ಹೂಗಳ ಸುಗ್ಗಿ! ಆಗಿನ ಜನರಿಗೆ ಗುಲಾಬಿ ಹೂವೆಂದರೆ ಪಂಚಪ್ರಾಣ. ಅವರಿಗೆ ಒಂದು ಹೊತ್ತು ಊಟವಿಲ್ಲದಿದ್ದರೂ ನಡೆದೀತು; ಆದರೆ ಗುಲಾಬಿ ಹೂವು ಇಲ್ಲದೆ ನಡೆಯುವಂತಿಲ್ಲ! ವಿಜಯನಗರದ ರತ್ನಪಡಿ ವ್ಯಾಪಾರಿಗಳು ತಮ್ಮ ಅಂಗಡಿಗಳಲ್ಲಿ ಮುತ್ತು, ರತ್ನ, ವಜ್ರವೈಢೂರ್ಯಗಳನ್ನು ಬಹಿರಂಗವಾಗಿ ಮಾರಾಟ ಮಾಡುತ್ತಿದ್ದರು! ಪೇಟೆಗಳಲ್ಲೆಲ್ಲ 'ಪಾನ್‌ಸುಪಾರಿ ಬಜಾರ್' ಎಂಬ ಹೆಸರಿನ ಪೇಟೆಯು ತುಂಬ ದೊಡ್ಡದಾಗಿದ್ದಿತು. ರಾತ್ರಿ ಬಹಳ ಹೊತ್ತಿನ ವರೆಗೂ ಈ ಪೇಟೆಯಲ್ಲಿ ಜನರು ಕಿಕ್ಕಿರಿದಿರುತ್ತಿದ್ದರು. ಹಜಾರ ರಾಮಸ್ವಾಮಿಯ ದೇವಾಲಯದ ಬಳಿ ಈ ಪೇಟೆಯ ಅವಶೇಷಗಳನ್ನು ಇಂದಿಗೂ ಕಾಣಬಹುದು. ಈ ಪ್ರದೇಶದಲ್ಲಿಯೂ ಅರಮನೆಯ ಆವರಣದಲ್ಲಿಯೂ ಅಂದವಾದ, ನುಣುಪಾದ ಕಲ್ಲಿನಿಂದ ನಿರ್ಮಿಸಿದ ಕಾಲುವೆಗಳಲ್ಲಿ ತುಂಗಭದ್ರೆಯ ತಿಳಿನೀರು ಜಳಜಳ ಪ್ರವಹಿಸುತ್ತಿತ್ತು. ಆ ಪ್ರದೇಶವಲ್ಲಿ ಈಗಲೂ ಕಲ್ಲಿನ ಕಾಲುವೆಗಳ ಅವಶೇಷ ಗಳನ್ನೂ ಉದ್ದವಾದ ಕಲ್ಲಿನ ತೊಟ್ಟಿಯೊಂದನ್ನೂ ಕಾಣಬಹುದಾಗಿದೆ. ಹಂಪೆಯಲ್ಲಿ ಶ್ರೀ ವಿರೂಪಾಕ್ಷಸ್ವಾಮಿಯ ದೇವಾಲಯದ ಮುಂದಿರುವ ಸುಮಾರು ಅರ್ಧ ಮೈಲಿ ಉದ್ದದ ಪೇಟೆ ಬೀದಿಯ ಇಕ್ಕೆಲಗಳಲ್ಲಿರುವ ಅಂಗಡಿ ಮುಂಗಟ್ಟುಗಳ ಸಾಲುಗಳನ್ನು ನೋಡಿದರೆ, ವಿಜಯನಗರದ ಪೇಟೆಗಳ ಸ್ಥೂಲ ಸ್ವರೂಪದ ಪರಿಚಯವುಂಟಾಗುತ್ತದೆ.

ವಿಜಯನಗರದ ರಸಿಕತೆ

ಬಂಗಾರದ ಹೊಗೆಯಾಡುತ್ತಿದ್ದ ವಿಜಯನಗರವು ರಸಿಕತೆಯ ಬೀಡಾಗಿತ್ತು; ಭೋಗ-ವೈಭವಗಳ ತವರುಮನೆಯಾಗಿತ್ತು. ಆ ಮಹಾನಗರದ ಜನರು ಪರಮ ರಸಿಕರು, ಅಷ್ಟಭೋಗ ನಿರತರು. ಗೃಹ, ವಸ್ತ್ರ, ಆಭರಣ, ಶಯ್ಯೆ, ತಾಂಬೂಲ, ಗಂಧ, ಪುಷ್ಪ ಮತ್ತು ಸ್ತ್ರೀ—ಈ ಎಂಟು ಭೋಗಗಳಲ್ಲಿಯೂ ಎತ್ತಿದ ಕೈ ಯಾಗಿದ್ದ ಆ ಜನರು, ಸುಖ-ಸಂತೋಷಗಳಿಂದ ಕೂಡಿದ ತುಂಬು ಜೀವನ ವನ್ನು ನಡೆಸುತ್ತಿದ್ದರು. ಅವರು ಬಣ್ಣಬಣ್ಣದ, 'ಊದಿದರೆ ಹಾರುವಷ್ಟು' ನವಿರಾದ ಉಡುಪನ್ನು ಧರಿಸುತ್ತಿದ್ದರು. ಸ್ತ್ರೀ-ಪುರುಷರೀರ್ವರೂ ಮೈತುಂಬ ಒಡವೆಗಳನ್ನು ಧರಿಸುತ್ತಿದ್ದರು. ಪರಿಮಳ ದ್ರವ್ಯಗಳನ್ನು ಯಥೇಚ್ಛವಾಗಿ ಬಳಸು ತ್ತಿದ್ದ ಆಗಿನ ಜನರಿಗೆ ಕಸ್ತೂರಿ, ಪುನುಗು, ಜವ್ವಾಜಿ, ಪಚ್ಚಕರ್ಪೂರ, ಕೇಸರಿ, ಶ್ರೀಗಂಧ, ಅತ್ತರು, ಪನ್ನೀರು ತುಂಬ ಪ್ರಿಯವಾಗಿದ್ದುವು. ರಾಜನ ಅರಮನೆ

ಯಲ್ಲಿಯಾದರೋ, ಸುಗಂಧವಸ್ತುಗಳಿಗಾಗಿಯೋ ಒಂದು ದೊಡ್ಡ ಭಂಡಾರ ವಿದ್ದಿತು. ಆಗಿನವರ ತಾಂಬೂಲದ ವರ್ಣನೆಯನ್ನು ಅಬ್ದುಲ್‌ರಜಾಕ್ ಕೊಟ್ಟಿದ್ದಾನೆ. ಅವರ ತಾಂಬೂಲವೆಂದರೆ, ಬರಿ ಎಲೆ, ಅಡಿಕೆ, ಸುಣ್ಣವಲ್ಲ. ಕರ್ಪೂರ, ಕಸ್ತೂರಿ, ಏಲಕ್ಕಿ ಮುಂತಾದ ಪರಿಮಳ ದ್ರವ್ಯಗಳನ್ನೊಳಗೊಂಡ 'ಕರ್ಪೂರ ತಾಂಬೂಲ.' ಸ್ತ್ರೀ ವಿಷಯದಲ್ಲಿಯೂ ಅವರದು ಭೋಗಪ್ರವೃತ್ತಿಯೇ! ಆಗಿನ ಜನರು ಬಹುಪತ್ನೀವ್ರತರು, ಬಹುಸ್ತ್ರೀಯಾಸಕ್ತರು. ನಿಕಾಲೋಕಾಂಟಿ ಹೇಳುವುದನ್ನು ಕೇಳಿ: "ಈ ಪ್ರದೇಶದ ಜನರು ತಮಗೆ ಇಷ್ಟಬಂದಷ್ಟು ಮಂದಿ ಸ್ತ್ರೀಯರನ್ನು ವರಿಸುತ್ತಾರೆ; ಪತಿಯ ಮರಣಾನಂತರ ಸತಿಯರು ಸಹಗಮನವನ್ನಾಚರಿಸುತ್ತಾರೆ. ರಾಜನ ಪತ್ನಿ–ಉಪ-ಪತ್ನಿಯರ ಒಟ್ಟು ಸಂಖ್ಯೆ ೧೨,೦೦೦!! ಇವರ ಪೈಕಿ ೪೦೦೦ ಸ್ತ್ರೀಯರು ಪಾಕಶಾಲೆಯಲ್ಲಿದ್ದು, ರಾಜನು ಹೋದವಲ್ಲೆಲ್ಲ ನಡೆದು ಹೋಗುತ್ತಾರೆ. ಅಷ್ಟೇ ಸಂಖ್ಯೆಯ ಸ್ತ್ರೀಯರು ಅಶ್ವಾರೋಹಿಗಳಾಗಿ ರಾಜನನ್ನು ಹಿಂಬಾಲಿಸುತ್ತಾರೆ. ಉಳಿದವರನ್ನು ಪುರುಷರು ಮೇನೆಗಳಲ್ಲಿ ಹೊತ್ತು ಸಾಗಿಸುತ್ತಾರೆ. ಅವರ ಪೈಕಿ ೨೦೦೦-೩೦೦೦ ಸ್ತ್ರೀಯರನ್ನು ರಾಜನು ತನ್ನ ಉಪ ಪತ್ನಿಯರನ್ನಾಗಿ ಆರಿಸಿಕೊಳ್ಳುತ್ತಾನೆ. ರಾಜನ ಮರಣಾನಂತರ ಅವರೆಲ್ಲರೂ ಸ್ವಇಚ್ಛೆಯಿಂದ ಸಹಗಮನವನ್ನಾಚರಿಸುವರು. ಸಹಗಮನ ಒಂದು ದೊಡ್ಡ ಗೌರವವೆಂದೇ ಅವರು ಭಾವಿಸುತ್ತಾರೆ." ಅರಮನೆಯ ಒಳಾಡಳಿತವೆಲ್ಲ ಸ್ತ್ರೀಯರ ಕೈಯಲ್ಲೇ ಇರುತ್ತಿತ್ತು! ರಾಜನ ಅಂತಃಪುರವೆಂದರೆ, ಅದೊಂದು ಪ್ರಮೀಳಾ ರಾಜ್ಯ, ಸ್ತ್ರೀಸಾಮ್ರಾಜ್ಯ; ಈ ಸಾಮ್ರಾಜ್ಯದಲ್ಲಿ ರಾಜನೊಬ್ಬನೇ ಪುರುಷ! ಗಾಯನ ನರ್ತನಗಳಿಂದ ಹಿಡಿದು, ಕತ್ತಿ ಗುರಾಣಿಗಳನ್ನು ಧರಿಸಿ ಕುಸ್ತಿಮಾಡುವವರೆಗೆ–ಜ್ಯೋತಿಷಿಯರು, ಭವಿಷ್ಯ ವಾದಿಗಳು, ಕರಣಿಕರು, ಪಹರೆಯವರು, ಮಂತ್ರಾಲೋಚಕರು, ವೈದ್ಯರು, ವಿದೂಷಿಯರು, ನ್ಯಾಯಾಧೀಶರು–ಎಲ್ಲರೂ ಸ್ತ್ರೀಯರೇ!

ವಿಲಾಸಿ ಜೀವನ

ವಿಜಯನಗರದ ವಿಲಾಸಿ ಜೀವನದಲ್ಲಿ, ವೇಶ್ಯೆಯರದು ಪ್ರಮುಖ ಪಾತ್ರ. ಹನ್ನೆರಡು ಸಾವಿರ ಪೋಲೀಸರಿಗೆ ಸಂಬಳ ಕೊಡಲು ಸಾಕಾಗುವಷ್ಟು ಹಣವು ವೇಶ್ಯೆಯರ ತಲೆಗಂದಾಯದಿಂದಲೇ ಸಂದಾಯವಾಗುತ್ತಿದ್ದಿತೆಂದು ಅಬ್ದುಲ್‌ರಜಾಕ್ ಹೇಳಿದ್ದಾನೆ! ಇದರಿಂದ, ಅವರ ಸಂಖ್ಯಾಬಾಹುಳ್ಯ ಮತ್ತು ಐಶ್ವರ್ಯ ಎಷ್ಟು ಅಪಾರವಾಗಿದ್ದಿತೆಂಬುದನ್ನು ಊಹಿಸಿಕೊಳ್ಳಬಹುದು.

ಮುನ್ನೂರು ಗಜ ಉದ್ದ, ಇನ್ನೂರು ಗಜ ಅಗಲವುಳ್ಳ ಒಂದು ದೊಡ್ಡ ರಸ್ತೆ. ಅದರ ಇಕ್ಕೆಲಗಳಲ್ಲಿಯೂ ಭವ್ಯ ಗಗನಚುಂಬಿಸೌಧಗಳು. ರಸ್ತೆಯ ಎರಡು ಕೊನೆಗಳಲ್ಲಿಯೂ ದ್ವಾರದಲ್ಲಿ, ಸಿಂಹ, ಹುಲಿ, ಚಿರತೆಗಳ ಬೊಂಬೆಗಳು–ಸುಂದರವಾಗಿ ಬಣ್ಣಹಾಕಿದ, ಈ ಬೊಂಬೆಗಳನ್ನು ನೋಡಿದರೆ, ಅವೇನು ಜೀವಂತ ಮೃಗಗಳೋ ಎಂಬ ಭ್ರಾಂತಿಯುಂಟಾಗುತ್ತಿತ್ತು! ರಸ್ತೆಗೆಲ್ಲ ಪನ್ನೀರು ಚೆಲ್ಲುತ್ತಿದ್ದರು. ಪ್ರತಿಯೊಂದು ಸೌಧದ ಮುಂದೆ ಸಂಗಮವರೀಕಲ್ಲಿನಿಂದ ನಿರ್ಮಿಸಿದ ಆಸನಗಳು. ಈ ಮನೆಗಳ ಬಾಗಿಲುಗಳಲ್ಲಿ ಅಲಂಕೃತ ಕಮಾನುಗಳ ಮೇಲೆ ಸರ್ವಾಲಂಕಾರ ಭೂಷಿತೆಯರಾದ ಸುರಸುಂದರಿಯರು ಕುಳಿತಿರುತ್ತಿದ್ದರು. ಈ ವೇಶ್ಯೆಯರ ಸೇವಕಿಯರು ಕೂಡ ಸಾಲಂಕೃತರೇ! ವೇಶ್ಯಾವೃತ್ತಿಯಲ್ಲಿ ತೊಡಗಿದ ಈ ಸ್ತ್ರೀಯರ ಸಿರಿಸಂಪತ್ತುಗಳನ್ನು ಕಂಡು ಪೇಯಸ್ ಬೆರಗಾಗಿದ್ದಾನೆ! ಒರ್ವ ವೇಶ್ಯೆಯ ಸಂಪತ್ತು ೧,೦೦,೦೦೦ ಪಗೋಡಗಳಷ್ಟಾಗಿದ್ದಿತೆಂದು ಅತ ಹೇಳಿದ್ದಾನೆ. ಈ ವೇಶ್ಯೆಯರೆಲ್ಲರೂ ಹಬ್ಬ-ಹರಿದಿನಗಳಲ್ಲಿ ಸಕಲಾಭರಣಶೋಭಿತೆಯರಾಗಿ, ರಾಜನ ಮುಂದೆ ನರ್ತನ ಮಾಡುತ್ತಿದ್ದರು. ಅವರಿಗೆ ರಾಜನ ಮುಂದೆ ತಾಂಬೂಲ ಹಾಕಿಕೊಳ್ಳುವ ಸ್ವಾತಂತ್ರ್ಯವಿದ್ದಿತು. ಉಳಿದವರಾರಿಗೂ–ಅದೆಷ್ಟೇ ಗಣ್ಯವ್ಯಕ್ತಿಗಳಾಗಲಿ–ಈ ಸ್ವಾತಂತ್ರ್ಯವಿರಲಿಲ್ಲ!

ರಾಜವೈಭವ

ವಿಶಾಲ ಸಾಮ್ರಾಜ್ಯವೊಂದರ ಅಧಿಪತಿಗಳಾಗಿ, ಅಪಾರ ಸಿರಿಸಂಪತ್ತನ್ನೂ ಅಪರಿಮಿತ ಸೇನಾಬಲವನ್ನೂ ಪಡೆದಿದ್ದ ವಿಜಯನಗರದ ಅರಸರ ವೈಭವಕ್ಕೆ ಮಿತಿಯೇ ಇರಲಿಲ್ಲ. ಕೋಟೆಯ ಕಡೆಯ (ಒಳ) ಸುತ್ತಿನ ಪ್ರದೇಶದಲ್ಲಿ–ದಕ್ಷಿಣೋತ್ತರ ಒಂದು ಮೈಲಿ ಪೂರ್ವ-ಪಶ್ಚಿಮ ಸುಮಾರು ಎರಡೂಕಾಲು ಮೈಲಿಗಳಷ್ಟು ವಿಸ್ತಾರದ ಪ್ರದೇಶದಲ್ಲಿ–ರಾಜನ ಭವ್ಯವಾದ ಅರಮನೆಯಿದ್ದಿತು. ಅರಮನೆಯ ಸಮೀಪದಲ್ಲಿಯೇ ಶ್ರೀ ಕೃಷ್ಣದೇವರಾಯನು ತನ್ನ ಉತ್ಕಲ ವಿಜಯದ ನೆನಪಿಗಾಗಿ "ವಿಜಯ ಭವನ" (ಭವನ ವಿಜಯ) ಎಂಬ ಭವ್ಯ ಸೌಧವನ್ನು ಕಟ್ಟಿಸಿದನು. ಆನೆ ಮತ್ತಿತರ ಪ್ರಾಣಿಗಳ ಆಕೃತಿಯ ಕಂಬಗಳ ಆಧಾರದ ಮೇಲೆ ನಿರ್ಮಿಸಲ್ಪಟ್ಟಿದ್ದ ಈ ಭವನದ ಮುಂಭಾಗವು ತೆರೆದಿದ್ದು, ಜನರು ಕಲ್ಲಿನ ಮೆಟ್ಟಲುಗಳ ಮೇಲೆ ಹತ್ತಿಹೋಗುತ್ತಿದ್ದರು. ಕೆಳಗೆ ಸುತ್ತಲೂ ನುಣುಪಾದಕಲ್ಲು ಹಾಸಿದ ಜಗಲಿಕಟ್ಟೆಯಿದ್ದಿತು. ಕೆಲವು ಜನರು ಆ ಕಟ್ಟೆಯ ಮೇಲೆ ನಿಂತು ಮೇಲೆ ನಡೆಯುತ್ತಿದ್ದ ಪೂಜಾದಿ ಸಮಾರಂಭಗಳನ್ನು ವೀಕ್ಷಿಸು

ತ್ತಿದ್ದರು. ಇಂದು ನಾವು ಕಾಣುವ 'ಮಹಾನವಮಿ ದಿಬ್ಬ'ವೇ ಈ ಭವ್ಯಸೌಧದ ಅವಶೇಷ. ಸಮೀಪದಲ್ಲಿ 'ವಿಜಯಭವನ'ದಂಥವೇ ಇನ್ನೆರಡು ಕಟ್ಟಡಗಳಿದ್ದುವು. ಎರಡು ವೇದಿಕೆಗಳಿದ್ದ ಈ ಕಟ್ಟಡಗಳಿಗೆ ಹತ್ತಿಹೋಗಲು ನಿರ್ಮಿಸಲಾಗಿದ್ದ ಮೆಟ್ಟಿಲುಗಳು ಬಲು ಸುಂದರವಾಗಿದ್ದುವು. ವೇದಿಕೆಗಳೂ ಸುಂದರವಾಗಿದ್ದುವು. ಅರಮನೆಯಲ್ಲಿ ರಾಜನೂ ರಾಣಿಯರೂ ಆತನ ಉಪ-ಪತ್ನಿಯರೂ ಇತರ ಮಹಿಳೆಯರೂ ಸೇರಿ ಒಟ್ಟು ಹನ್ನೆರಡು ಸಾವಿರ ಮಹಿಳೆಯರು! ವಾಸಿಸುತ್ತಿದ್ದರು. ಅರಮನೆಯಿಂದ ಅಂತಪುರಕ್ಕೆ ಹೋಗಲು ಒಳಮಾರ್ಗವಿದ್ದಿತು. ಈ ಎಲ್ಲ ಕಟ್ಟಡಗಳ, ಮನೆಗಳ ಸಾಲುಗಳಿಗೆ ಹೋಗಲು ಮೂವತ್ತನಾಲ್ಕು ಒಳರಸ್ತೆಗಳಿದ್ದವಂತೆ!

ರಾಜನ ಅರಮನೆಯಲ್ಲಿಯಾದರೋ ಎಲ್ಲವೂ ಹೇಮಮಯ, ನವರತ್ನಮಯ! ಆತನ ಕೋಣೆಗೆ ಹೋಗುವ ಮೆಟ್ಟಿಲುಗಳಿಗೆ ಕೂಡ ಚಿನ್ನದ ತಗಡುಗಳ ಹೊದಿಕೆ. ರತ್ನ ಖಚಿತ ದ್ವಾರ ಮಂಟಪದ ಮೂಲಕ ಹಾದು, ಆತನ ಕೋಣೆಯೊಳಕ್ಕೆ ಹೋದರೆ ರತ್ನಖಚಿತವಾದ ಮಂಚ. ಅಲ್ಲಿಂದ ಮುಂದೆ, ಮತ್ತೊಂದು ಭಾಗದಲ್ಲಿ 'ದಂತದ ಕೋಣೆ.' ಆ ಕೋಣೆಯಲ್ಲಿ ಕೆಳಗಿನಿಂದ ಮೇಲಿನವರೆಗೆ ಗೋಡೆಗಳು, ಕಂಬಗಳು—ಎಲ್ಲವೂ ದಂತವವೇ. ಮೇಲೆ ದಂತದಿಂದಲೇ ಗುಲಾಬಿಗಳನ್ನೂ ಇತರ ಹೂವುಗಳನ್ನೂ ಬಿಡಿಸಿದ್ದರು. ಈ ಕೋಣೆಯು ಬಲು ಸುಂದರವಾಗಿತ್ತೆನ್ನುತ್ತಾನೆ ಪೆಯಸ್. ಮತ್ತೊಂದೆಡೆ ರಾಣಿಯರಿಗಾಗಿ ತೂಗುಯ್ಯಾಲೆಗಳಿದ್ದುವು. ಹಾಗೆಯೇ ಮುಂದೆ ಹೋದರೆ, ಚಿನ್ನ, ಬೆಳ್ಳಿಯ ಸರಪಣಿಗಳಿಂದ ತೂಗುಬಿಟ್ಟ ರತ್ನಖಚಿತ ತೂಗುಮಂಚಗಳು! ಮತ್ತೊಂದೆಡೆ ಸುಂದರವಾದ ನರ್ತನಶಾಲೆ. ರಾಜನ ಭೋಜನ ಶಾಲೆಯಲ್ಲಿಯಾದರೋ, ಎಲ್ಲ ಪಾತ್ರೆ-ಪದಾರ್ಥಗಳೂ ಚಿನ್ನದವೇ! ಮೂರು ಕಾಲಿನ ಒಂದು ಬಂಗಾರದ ಅಡ್ಡಣಿಗೆ; ಅದರ ಮೇಲೆ ರತ್ನಖಚಿತವಾದ ಬಂಗಾರದ ತಾಟು; ವ್ಯಂಜನ ವಸ್ತುಗಳಿಗೆ ರತ್ನಖಚಿತವಾದ ಬಂಗಾರದ ಪಾತ್ರೆಗಳು. ಅರಮನೆಯ ಮತ್ತೊಂದು ಭಾಗದಲ್ಲಿ ಬಂಗಾರದ ಕಪಾಯಿ, ಕೊಡ, ಬಿಂದಿಗೆಗಳನ್ನು ನೋಡಿದಾಗಿ ಪೆಯಸ್ ಹೇಳಿದ್ದಾನೆ! ರಾಜನೂ ಪಟ್ಟದ ರಾಣಿಯೂ ಬಳಸುತ್ತಿದ್ದ ಮೇಜುಗಳೂ ರತ್ನಖಚಿತವಾದುವೇ (ನ್ಯೂನಿಜ್).

ರಾಣೀವಾಸದ ಸಂಪತ್ತು ಕೂಡ ಕಡಿಮೆಯೇನೂ ಆಗಿರಲಿಲ್ಲ. ಒಬ್ಬೊಬ್ಬ ರಾಣಿಯ ಬಳಿಯೂ ಮೈಮೇಲೆ ಧರಿಸಿ ನಡೆಯಲಾರದಷ್ಟು ಭಾರದ ಬಂಗಾರದ ಆಭರಣಗಳಲ್ಲದೆ, ವಜ್ರ-ವೈಢೂರ್ಯಗಳಿಂದ ತುಂಬಿದ ಭಾರಿ ಪೆಟ್ಟಿಗೆಗಳಿದ್ದುವು!

ರಾಜನ ಕೋಶಗಳಲ್ಲಿ ಅಪಾರ ಸಂಪತ್ತಿದ್ದಿತೆಂದು ಪ್ರತ್ಯೇಕವಾಗಿ ಹೇಳ ಬೇಕಾಗಿಲ್ಲ. ವಿಜಯನಗರದ ಅರಸರಲ್ಲಿ ಪ್ರತಿಯೊಬ್ಬಾತನೂ ತನ್ನದೇ ಆದ ಒಂದು ಕೋಶದಲ್ಲಿ ಹಣವನ್ನು ಸಂಗ್ರಹಿಸಿಡುತ್ತಿದ್ದ. ಆತನ ಮರಣಾನಂತರ, ಆ ಕೋಶಕ್ಕೆ ಬೀಗ ಮುದ್ರೆ ಹಾಕಿ, ಅದನ್ನು ಗುಪ್ತಸ್ಥಳಕ್ಕೆ ಸಾಗಿಸಿ, ರಕ್ಷಿಸ ಲಾಗುತ್ತಿತ್ತು. ಮುಂದೆ ಬಂದ ಅರಸ ಆ ಕೋಶವನ್ನು ತೆರೆದು ನೋಡುತ್ತಿರ ಲಿಲ್ಲ. ರಾಜನಿಗೆ ಹಣದ ಆವಶ್ಯಕತೆ ಹೆಚ್ಚಾದ ವಿಶೇಷ ಸಂದರ್ಭಗಳನ್ನು ಬಿಟ್ಟರೆ, ಉಳಿದಂತೆ ಈ ಕೋಶಗಳನ್ನು ತೆರೆಯುತ್ತಲೇ ಇರಲಿಲ್ಲ. ಶ್ರೀ ಕೃಷ್ಣದೇವರಾಯನ ಕೋಶವು ಹಿಂದಿನ ರಾಜರ ಕೋಶಗಳಿಗಿಂತಲೂ ಭಿನ್ನವಾಗಿದ್ದು, ಆತನು ಪ್ರತಿವರ್ಷವೂ ತನ್ನ ಕೋಶಕ್ಕೆ ಒಂದು ಕೋಟಿ ವರಗೋಡಗಳನ್ನು ಸೇರಿಸುತ್ತಿದ್ದನು. ಆತ ತನ್ನ ಅರಮನೆ ಮತ್ತು ಅಂತಃಪುರದ ವೆಚ್ಚಗಳಿಗೆ ಬೇಕಾದಷ್ಟು ಹಣವನ್ನು ಮಾತ್ರ ಕೋಶದಿಂದ ತೆಗೆದುಕೊಳ್ಳು ತ್ತಿದ್ದ. ಉಳಿದ ಹಣವೆಲ್ಲ ಹಾಗೆಯೇ ಇರುತ್ತಿತ್ತು. ಅಂದಮೇಲೆ, ಆತನ ಸಂಪತ್ತು ಎಷ್ಟು ಅಪಾರವಾಗಿದ್ದಿತೆಂಬುದನ್ನು ಊಹಿಸಬಹುದು ಎಂದಿದ್ದಾನೆ ಪೆಯಸ್. ೧೫೬೫ರಲ್ಲಿ ತಾಳಿಕೋಟೆಯ ಯುದ್ಧದಲ್ಲಿ ಸೋಲಾದ ಸುದ್ದಿ ರಾಜಧಾನಿಯನ್ನು ತಲುಪಿದ ಕೂಡಲೆ, ೫೫೦ ಆನೆಗಳ ಮೇಲೆ ರಾಜನ ರತ್ನಖಚಿತ ಸಿಂಹಾಸನವನ್ನೂ ಲಾಂಛನವನ್ನೂ ವಜ್ರವೈಢೂರ್ಯಗಳನ್ನೂ ಅರಮನೆಯಿಂದ ನಿಷ್ಕ್ರಾಂತ ಸೈನಿಕರ ಬೆಂಗಾವಲಿನಲ್ಲಿ ಸಾಗಿಸಲಾಯಿತೆಂದು ಹಾಗೆ ಸಾಗಿಸಲಾದ ಸಂಪತ್ತಿನ ಮೌಲ್ಯವು ಹತ್ತು ಕೋಟಿ ಸ್ಟರ್ಲಿಂಗ್ ಪೌಂಡು ಅಥವಾ ೧೫೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗಿದ್ದಿತೆಂದು ರಾಬರ್ಟ್ ಸಿವೆಲ್‌ರವರು ತಮ್ಮ ಒಂದು ಮರೆತುಹೋದ ಸಾಮ್ರಾಜ್ಯವೆಂಬ ಆಕರ ಗ್ರಂಥದಲ್ಲಿ ಬರೆದಿದ್ದಾರೆ. ವಿಜಯನಗರದ ಸಾಮ್ರಾಜ್ಯದ ಪತನದ ನಂತರವೂ ೧೬೧೬ರಲ್ಲಿ, ಚಂದ್ರಗಿರಿಯಲ್ಲಿ ನೆಲೆಸಿದ್ದ ರಾಜನ ಬಳಿ ಮೂರು ಭಾರಿ ಪೆಟ್ಟಿಗೆಗಳ ತುಂಬ ವಜ್ರಗಳಿದ್ದುವೆಂದು ಬರೆದಾಸ್ ಎಂಬಾತ ಹೇಳಿ ದ್ದಾನೆ. ಇಂದಿನವರಾದ ನಮಗೆ ಈ ಹೇಳಿಕೆಗಳೆಲ್ಲವೂ ನಿಜವಾದುವೇ ಎಂಬ ಸಂದೇಹವುಂಟಾಗುವುದಾದರೂ ನಾವು ನ್ಯೂನಿಜ್‌ನ ಒಂದು ಹೇಳಿಕೆಯನ್ನು ಗಮನಿಸಬಹುದು: ಈಗಿನ ಕರ್ನೂಲ್ ಮತ್ತು ಅನಂತಪುರ ಜಿಲ್ಲೆಗಳಲ್ಲಿ ಮುಖ್ಯವಾಗಿ ವಜ್ರಕರೂರು ಎಂಬಲ್ಲಿ–ಇದ್ದ ಭಾರಿ ವಜ್ರದ ಗಣಿಗಳು ವಿಜಯ ನಗರದ ರಾಜನಿಗೆ ಸೇರಿದ್ದು, ೨೫ ಕ್ಯಾರೆಟ್ಟುಗಳಿಗಿಂತ ಹೆಚ್ಚಿನ ತೂಕದ ವಜ್ರ ಗಳನ್ನೆಲ್ಲ ರಾಜನ ಸ್ವಂತ ಉಪಯೋಗಕ್ಕಾಗಿ ಅರಮನೆಗೆ ಒಪ್ಪಿಸಬೇಕಾಗಿದ್ದಿ

ತೆಂದು ಆತ ಹೇಳಿದ್ದಾನೆ.

ಮಹಾನವಮಿ ಹಬ್ಬ

ವಿಜಯನಗರದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದ ಮಹಾನವಮಿ ಹಬ್ಬದ ವೈಭವವನ್ನು ಎಷ್ಟು ವರ್ಣಿಸಿದರೂ ವಿದೇಶಿ ಪ್ರವಾಸಿಗಳಿಗೆ ತೃಪ್ತಿಯಿಲ್ಲ. ಅಬ್ದುಲ್ ರಜಾಕ್ ಮತ್ತು ಪೆಯಸ್‌ರಂತೂ ಈ ಹಬ್ಬದ ವೈಭವವನ್ನೂ ಸವಿವರವಾಗಿಯೇ ಬಣ್ಣಿಸಿದ್ದಾರೆ. ಆ ಹಬ್ಬದ ದಿನ ರಸಿಕತೆಯು ಸೂರೆಯಾಗಿ ಹೋಗುತ್ತಿದ್ದಿತು: ಸ್ವರ್ಗವೇ ಭೂಮಿಗೆ ಇಳಿದು ಬಂದಂತೆ ಭಾಸವಾಗುತ್ತಿತ್ತು! ಹಬ್ಬದಲ್ಲಿ ಭಾಗವಹಿಸಲು ಸಾಮ್ರಾಜ್ಯದ ಎಲ್ಲ ಕಡೆಗಳಿಂದಲೂ ಸಾಮಂತ ರಾಜರು ಬರುತ್ತಿದ್ದರು. ಸಾವಿರಾರು ಆನೆಗಳನ್ನೇ, ಅರಮನೆಗೆ ಆಗಮಿಸುತ್ತಿದ್ದ ರಾಜಪುತ್ರರೂ ಮುಖ್ಯಸರದಾರರೂ ಇಳಿದುಕೊಳ್ಳಲು ಸುಂದರವಾದ, ವರ್ಣರಂಜಿತವಾದ ಡೇರೆಗಳನ್ನು ನಿರ್ಮಿಸಲಾಗುತ್ತಿತ್ತು. ಈ ಡೇರೆಗಳು ಎತ್ತ ತಿರುಗಿಸಿದರೆ ಅತ್ತ ತಿರುಗುತ್ತಿದ್ದು ಕ್ಷಣಕ್ಷಣಕ್ಕೂ ಹೊಸ ಹೊಸ ಸಭಾಮಂಟಪಗಳು ಕಣ್ಣಮುಂದೆ ನಿಲ್ಲುತ್ತಿದ್ದುವು! ವಿವಿಧ ಅಂತಸ್ತುಗಳಿದ್ದ ಈ ಎಲ್ಲ ಡೇರೆಗಳಿಗಿಂತಲೂ ಎತ್ತರವಾದ, ಅತ್ಯಂತ ಸುಂದರವಾದ, ಒಂಭತ್ತು ಅಂತಸ್ತಿನ ಡೇರೆಯ ಕಡೆಯ ಅಂತಸ್ತಿನಲ್ಲಿ ರಾಜನು ರತ್ನಖಚಿತವಾದ ಬಂಗಾರದ ಸಿಂಹಾಸನದ ಮೇಲೆ ಮಂಡಿಸುತ್ತಿದ್ದನು. ಆ ಸಭಾಮಂಟಪದ ಗೋಡೆಗಳ ಮೇಲೆಯೂ ಮೇಲ್ಬಡಿಯಲ್ಲಿಯೂ ಅಮೂಲ್ಯ ಮುತ್ತು ರತ್ನಗಳಿಂದ ಕೆತ್ತಲ್ಪಟ್ಟ ಬಂಗಾರದ ನಕ್ಷತ್ರಗಳು ಮಿನುಗುತ್ತಿದ್ದುವು. ಅದರ ತಗಡುಗಳು ಕತ್ತಿಯ ಅಲುಗಿನಷ್ಟು ದಪ್ಪವಾಗಿ ಬಂಗಾರದ ಮೊಳೆಗಳಿಂದ ಕೂಡಿಸಲ್ಪಟ್ಟಿದ್ದುವು.

ಉಪ್ಪರಿಗೆಯಲ್ಲಿ ರತ್ನ ಸಿಂಹಾಸನದ ಮೇಲೆ ವಿರಾಜಿತನಾಗಿರುತ್ತಿದ್ದ ಕರ್ನಾಟಕ ಸಿಂಹಾಸನಾಧೀಶ್ವರನ ಸುತ್ತಲೂ ಹಲವು ಸಾಮಂತ ರಾಜರು ಕುಳಿತಿರುತ್ತಿದ್ದರು. ರಾಜನ ಎದುರಿಗೆ ಯೋಧರ ಪ್ರದರ್ಶನ, ಕುಸ್ತಿ-ಕಾಳಗ, ವಿವಿಧ ವಿನೋದಾವಳಿ, ಬಾಣ-ಬಿರುಸು, ಗಾಯನ, ನೃತ್ಯ ಇವೇ ಮುಂತಾದ ಆಕರ್ಷಕ ಕಾರ್ಯಕ್ರಮಗಳು ನಡೆಯುತ್ತಿದ್ದುವು. ಕಥೆಗಾರರು, ಗಾಯಕರು ತಮ್ಮ ಕೌಶಲ್ಯದಿಂದ ರಾಜನನ್ನು ಸಂಪ್ರೀತಿಗೊಳಿಸುತ್ತಿದ್ದರು. ಆ ರಾಜಾಸ್ಥಾನದಲ್ಲಿ ಸಂಗೀತ, ನೃತ್ಯಗಳಿಗಂತೂ ಅಪೂರ್ವ ಗೌರವ, ಮನ್ನಣೆ ದೊರಕುತ್ತಿದ್ದಿತು. ಸರ್ವಾಲಂಕಾರಭೂಷಿತೆಯರೂ ಸಕಲಾಭರಣಶೋಭಿತೆಯರೂ ಆದ

ಎಳೆವರೆಯುವ ಸುರಸುಂದರಿಯರ ಅಲೌಕಿಕ ನರ್ತನವಂತೂ ಮನಮೋಹಕವಾಗಿರುತ್ತಿತ್ತು.

ವಿಜಯನಗರದ ಸಾಂಸ್ಕೃತಿಕ ಕೊಡುಗೆ

ಹೀಗೆ ಐಹಿಕ ಭೋಗ-ವೈಭವಗಳ ತುತ್ತತುದಿಗೇರಿ ಮೆರೆದ ವಿಜಯನಗರವು ಸಾಹಿತ್ಯ, ಸಂಗೀತ, ಶಿಲ್ಪ, ವಾಸ್ತುಶಿಲ್ಪ, ಚಿತ್ರಕಲೆ, ನೃತ್ಯ ಇವೇ ಮುಂತಾದ ಕಲೆಗಳಿಗೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ಸಲ್ಲಿಸಿದೆ. ವಿಜಯನಗರದ ಅರಸ-ಅರಸಿಯರು ವಿದ್ವತ್ಪಕ್ಷಪಾತಿಗಳಾಗಿದ್ದು, ಕನ್ನಡ, ಸಂಸ್ಕೃತ, ತೆಲುಗು ಸಾಹಿತ್ಯಗಳಿಗೆ ವಿಶೇಷ ಪ್ರೋತ್ಸಾಹವನ್ನಿತ್ತರು. ಅನೇಕ ರಾಜರು ತಾವೇ ಸ್ವಂತ ಕವಿಗಳಾಗಿದ್ದರು. ರಾಣಿಯರಲ್ಲಿ ಅನೇಕರು ಸಂಸ್ಕೃತ ಕವಯಿತ್ರಿಯರಾಗಿದ್ದರು, ನೃತ್ಯವಿಶಾರದೆಯರಾಗಿದ್ದರು. ಅಂತೆಯೇ, ರಾಜರು, ಸಂಗೀತ ಪ್ರೇಮಿಗಳೂ ಸಂಗೀತ ಶಾಸ್ತ್ರಜ್ಞರೂ ಆಗಿದ್ದರು. 'ಕರ್ನಾಟಕ ಸಂಗೀತದ ಪಿತಾಮಹ'ರಾದ ಶ್ರೀ ಪುರಂದರದಾಸರು ವಿಜಯನಗರದಲ್ಲಿಯೇ ಬಾಳಿ, ಬೆಳಗಿದರು. ಹೀಗೆ ಸಾಹಿತ್ಯ-ಸಂಗೀತಗಳಿಗೆ ವಿಶೇಷ ಪ್ರೋತ್ಸಾಹವನ್ನಿತ್ತ ವಿಜಯನಗರವು 'ವಿದ್ಯಾನಗರ'ವೆಂಬ ಅನ್ವರ್ಥನಾಮವನ್ನು ಸಾರ್ಥಕಗೊಳಿಸಿತು! ವಿಜಯನಗರದಲ್ಲಿ ಸುಮಾರು ೨೦೦೦ ದೇವಾಲಯಗಳಿದ್ದುವು. ಅವುಗಳ ಪೈಕಿ ಇನ್ನೂ ಉಳಿದಿರುವ ಶ್ರೀ ವಿರೂಪಾಕ್ಷ ದೇವಾಲಯ, ವಿಜಯವಿಠಲ ದೇವಸ್ಥಾನ, ಹಜಾರ ರಾಮಸ್ವಾಮಿಯ ದೇವಸ್ಥಾನ, ಅನಂತಶಯನ ಗುಡಿ ಇವು ವಿಜಯನಗರದ ಶಿಲ್ಪಕಲಾ ವೈಭವಕ್ಕೆ ಮೇರುಸಾಕ್ಷಿಗಳಾಗಿವೆ. ಉಗ್ರನರಸಿಂಹ, ಸಾಸಿವೆಕಾಳು ಗಣೇಶ, ಕಡಲೆಕಾಳು ಗಣೇಶ ಮತ್ತು ದೇವಾಲಯಗಳಲ್ಲಿರುವ ಚಿತ್ರಪಟ್ಟಿಕೆಗಳು ವಾಸ್ತುಶಿಲ್ಪರಂಗದಲ್ಲಿ ವಿಜಯನಗರದ ಮಹೋನ್ನತ ಸಾಧನೆಯನ್ನು ಎತ್ತಿ ತೋರಿಸುತ್ತಿವೆ. ಚಿತ್ರಕಲೆ, ನೃತ್ಯಕಲೆಗಳಿಗೂ ಆ ಕಾಲದಲ್ಲಿ ವಿಶೇಷ ಪ್ರೋತ್ಸಾಹ ದೊರಕಿತು. ಒಟ್ಟಿನ ಮೇಲೆ, ಹಿಂದೂ ಧರ್ಮ-ಸಂಸ್ಕೃತಿಗಳ ರಕ್ಷಣೆಗಾಗಿ ಸ್ಥಾಪಿತವಾದ ಈ ಧರ್ಮಸಾಮ್ರಾಜ್ಯದಲ್ಲಿ ನಮ್ಮ ಪ್ರಾಚೀನ ಸಾಂಸ್ಕೃತಿಕ ಪರಂಪರೆಯ ಪುನರುಜ್ಜೀವನ, ಪುನರುತ್ಥಾನ ಸತತವಾಗಿ, ಅವ್ಯಾಹತವಾಗಿ ನಡೆದು, ಅದು ಹೊಸ ಜೀವಕಳೆಯಿಂದ ಕಂಗೊಳಿಸುವಂತಾಯಿತೆನ್ನಬಹುದು. ದಾಸವರೇಣ್ಯರಾದ ವ್ಯಾಸರಾಯರು, ಪುರಂದರದಾಸರು, ಕನಕದಾಸರು ವಿಜಯನಗರವನ್ನೇ ಕೇಂದ್ರವನ್ನಾಗಿಟ್ಟುಕೊಂಡು, ನಾಡಿನಲ್ಲೆಲ್ಲ ಹರಿಭಕ್ತಿಯ ಪಾವನಗಂಗೆಯನ್ನು ಹರಿಸಿದರು. ಹೀಗೆ, ವಿಜಯನಗರದ ಸಾಂಸ್ಕೃತಿಕ

ಕೊಡುಗೆ ಅಪೂರ್ವವಾದದ್ದು, ಅಮೋಘವಾದದ್ದು, ಅವಿಸ್ಮರಣೀಯವಾದದ್ದು.

ಇದು ವಿಜಯನಗರದ ವೈಭವದ ಸಂಕ್ಷಿಪ್ತ ಚಿತ್ರಮಾತ್ರ. ಇಂದು ನಾವು ಹಂಪೆಯಲ್ಲಿ ಕಾಣುವ ಒಂದೊಂದು ಕಲ್ಲೂ ವಿಜಯನಗರದ ಗತವೈಭವದ ಉಜ್ವಲ ಕಥೆಯನ್ನು ಸಾರುತ್ತಿದೆ. ಕನ್ನಡಿಗರಾದ ನಾವು ನಮ್ಮ ನಾಡಿನ ಗತ ವೈಭವದ ಬಗ್ಗೆ ಅಭಿಮಾನ ತಾಳಿ, ವಿಜಯನಗರದಿಂದ ಸ್ಫೂರ್ತಿಪಡೆದು, ಭವ್ಯ ಕರ್ನಾಟಕದ ನಿರ್ಮಾಣಕ್ಕಾಗಿ ಕಂಕಣಬದ್ಧರಾಗಬೇಕು.

ವಿ. ಶ್ರೀನಿವಾಸ



ಎಲ್ಲರೂ ಸ್ವತಂತ್ರರಾಗುವವರೆಗೂ ಯಾರೊಬ್ಬರೂ ಪೂರ್ಣ ಸ್ವತಂತ್ರರಲ್ಲ, ಎಲ್ಲರೂ ನೀತಿವಂತರಾಗುವವರೆಗೆ ಯಾರೊಬ್ಬರೂ ನೀತಿವಂತರಾಗುವುದಿಲ್ಲ, ಎಲ್ಲರೂ ಸುಖಿಗಳಾಗದೆ ಯಾರೊಬ್ಬರೂ ಸುಖಿಗಳಾಗರು.

—ಸ್ಪೆನ್ಸರ್

ಬರುವುದನ್ನು ನಿರೀಕ್ಷಿಸುತ್ತ ನಾವು ಕಾಲಕಳೆಯಬೇಕೇ ವಿನಃ, ಕಳೆದುಹೋದುದನ್ನು ಚಿಂತಿಸುತ್ತ ಕುಳಿತಿರಬಾರದು.

——ಸುಭಾಷಿತ

ನ್ಯಾಯವಿಲ್ಲದೆ ಮಾಡುವ ಕಾನೂನು, ಅರ್ಥವಿಲ್ಲದೆ ಹೇಳುವ ವೇದಾಂತ, ತಿಳುವಳಿಕೆಯಿಲ್ಲದೆ ನಡೆಸುವ ಆಡಳಿತ, ಇವು ಎಂದೂ ಯಶಸ್ವಿಯಾಗಲಾರವು:

—ವಾಲ್ಟ್ ವಿಟ್‌ಮನ್

'ಅಂತ್ಯೋದಯ' ರಾಜಾಸ್ಥಾನ್ ಸಫಲತೆ

ಭಾರತದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಬಡತನವು ಅನಾದಿಕಾಲದಿಂದ ಅಂಟಿಕೊಂಡೇ ಬಂದಿದೆ. ಪ್ರತಿಯೊಂದು ಪಂಚವಾರ್ಷಿಕ ಯೋಜನೆಯಲ್ಲೂ ಬಡತನವನ್ನು ನಿರ್ಮೂಲನ ಮಾಡುವುದನ್ನು ಪ್ರಧಾನ ಲಕ್ಷ್ಯವಾಗಿಯೇ ಇರಿಸಿಕೊಳ್ಳುತ್ತಾ ಬಂದಿದ್ದೇವೆ. ಆದರೂ ಇದುವರೆಗೂ ಬಡತನವನ್ನು ದೂರ ಮಾಡುವುದರಲ್ಲಿ ನಾವು ಯಶಸ್ವಿಯಾಗಿಲ್ಲ. ಆರನೆಯ ಪಂಚವಾರ್ಷಿಕ ಯೋಜನೆ ಪ್ರಕಾರ ನಗರಗಳಲ್ಲಿ ಸುಮಾರು ಶೇಕಡ ೪೧ ಮತ್ತು ಹಳ್ಳಿಗಳಲ್ಲಿ ಶೇಕಡ ೪೮ ಮಂದಿಯು ದಾರಿದ್ರ್ಯರೇಖೆಗಿಂತಲೂ ಕಡಿಮೆ ಸ್ತರದಲ್ಲಿ ಬಾಳು ಸಾಗಿಸುತ್ತಿದ್ದಾರೆ. ಆದ್ದರಿಂದಲೇ ಬಡವರ್ಗಗಳ ಆರ್ಥಿಕ ವಿಕಾಸಕ್ಕೆಂದೇ ಎಸ್.ಎಫ್.ಡಿ.ಎ., ಎಂ.ಎಫ್.ಎ.ಎಲ್. ಮುಂತಾದ ಪ್ರತ್ಯೇಕ ಸಂಸ್ಥೆಗಳನ್ನು ರೂಪಿಸಲಾಗಿದೆ. ಆದರೂ ಈ ಸಂಸ್ಥೆಗಳೂ ಬಡವರಲ್ಲಿ ತೀರ ಬಡವರಾದವರನ್ನು ಮುಟ್ಟುವುದು ಸಾಧ್ಯವಾಗಿಲ್ಲ. ಆದ್ದರಿಂದಲೇ ರಾಜಾಸ್ಥಾನ್ ಸರ್ಕಾರವು ಅತ್ಯಂತ ಬಡವರಾದವರ ಅಭಿವೃದ್ಧಿಗೆ ಬರಲು 'ಅಂತ್ಯೋದಯ' ಎಂಬ ಹೊಸ ಕಾರ್ಯಕ್ರಮವೊಂದನ್ನು ರೂಪಿಸಿದೆ. ಈ ಕಾರ್ಯಕ್ರಮವು ಮೊದಲು ಅತ್ಯಂತ ಬಡವರಿಗೆ ಆರ್ಥಿಕವಿಕಾಸ ತದನಂತರ ಕ್ರಮಕ್ರಮವಾಗಿ ಇತರ ಬಡವರ್ಗಗಳವರಿಗೆ ಅನ್ವಯವಾಗುತ್ತದೆ.

೧೯೭೭ರ ಅಕ್ಟೋಬರ್ ೨ರಂದು ರಾಜಾಸ್ಥಾನ್‌ನಲ್ಲಿ ಈ ಕಾರ್ಯಕ್ರಮವು ಜಾರಿಗೆ ಬಂತು. ಇದರ ಪ್ರಕಾರ ದಾರಿದ್ರ್ಯದ ನಿರ್ಮಾರೇಖೆಗೂ ಕಡಿಮೆ ಸ್ಥರದಲ್ಲಿ ಬದುಕುತ್ತಿರುವ ಐದು ಬಡಕುಟುಂಬಗಳನ್ನು ಪ್ರತಿಗ್ರಾಮದಲ್ಲೂ ಗುರ್ತಿಸಿ ಅವರಿಗೆ ಸೂಕ್ತವಾದ ಅಭಿವೃದ್ಧಿ ಕಾರ್ಯಕ್ರಮವನ್ನು ರೂಪಿಸಲಾಗುತ್ತದೆ. ರಾಜಾಸ್ಥಾನ್ ರಾಜ್ಯದಲ್ಲಿರುವ ಮುವತ್ತೆಂಟು ಸಾವಿರ ಗ್ರಾಮಗಳನ್ನು ಹತ್ತು ವರ್ಷಗಳ ಅವಧಿಯಲ್ಲಿ ಈ ಕಾರ್ಯಕ್ರಮದ ವ್ಯಾಪ್ತಿಗೆ ತರಬೇಕೆಂದು ಯೋಜಿಸಲಾಗಿದೆ. ಮೊದಲ ಐದು ವರ್ಷಗಳಲ್ಲಿ ಸುಮಾರು ೯ ಲಕ್ಷ ಕುಟುಂಬಗಳು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತದೆ.

ಅತ್ಯಂತ ಬಡಕುಟುಂಬಗಳನ್ನು ಆಯಾಗ್ರಾಮಗಳಲ್ಲಿರುವ ಗ್ರಾಮಸಭೆಗಳೇ

ಫೆಬ್ರುವರಿ ೧೯೮೨ರ ಭಾರತಿ ಸಂಚಿಕೆಯಲ್ಲಿ ಶ್ರೀ ಎಸ್. ಲಿಂಗಮೂರ್ತಿ ಮತ್ತು ಶ್ರೀ ಜಿ. ಸುದರ್ಶನ್ ಅವರು ಬರೆದಿರುವ 'ಅಂತ್ಯೋದಯ ಕಾರ್ಯಕ್ರಮಂ–ರಾಜಸ್ಥಾನ್ ಅನುಭವಂ' ತೆಲುಗು ಲೇಖನದ ಅನುವಾದ.

ಗುರ್ತಿಸುತ್ತವೆ. ಈ ರೀತಿ ಆಯ್ಕೆ ಮಾಡುವ ಕಾಲದಲ್ಲಿ ಆ ಪ್ರದೇಶದ ಎಂ.ಎಲ್.ಎ., ಎಂ.ಪಿ. ಗ್ರಾಮಪಂಚಾಯತಿ ಅಧ್ಯಕ್ಷ, ಜಿಲ್ಲಾ ಪರಿಷತ್ತಿನ ಪ್ರಮುಖ, ಪಂಚಾಯತಿ ಸಮಿತಿಯ ಪ್ರಧಾನ ಮುಂತಾದವರೆಲ್ಲರೂ ಹಾಜರಿರುತ್ತಾರೆ. ಈ ಸಭೆ ಗುರ್ತಿಸಿದ ಅತ್ಯಂತ ಬಡಕುಟುಂಬಗಳ ಅಭಿವೃದ್ಧಿಗೆ ಸೂಕ್ತವಾದ ರೀತಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಂಬಂಧಿಸಿದ ಸೂಚನೆಗಳನ್ನು ನೀಡುತ್ತದೆ.

ಬಡಕುಟುಂಬಗಳನ್ನು ಗುರ್ತಿಸುವಾಗ ಈ ಕೆಳಗೆ ಪಟ್ಟಿಮಾಡಿರುವ ಅಂಶಗಳನ್ನು ಸಭೆಯು ಗಮನದಲ್ಲಿರಿಸಿಕೊಂಡಿರುತ್ತದೆ:

೧. ಯಾವ ರೀತಿಯ ಆದಾಯವನ್ನೂ ಕೊಡದ ಆಸ್ತಿ ಅಥವಾ ಆಸ್ತಿ ಹೊಂದಿರದ ಅಥವಾ ೧೫ ರಿಂದ ೫೯ ವರ್ಷಗಳ ಒಳಗೆ ಇರುವಂತಹ ವಯಸ್ಕ ವ್ಯಕ್ತಿಯು ಕುಟುಂಬದ ಪೋಷಣೆಯ ಹೊಣೆಯನ್ನು ಹೊರಬಲ್ಲ ವ್ಯಕ್ತಿ ಇಲ್ಲದೆ ಇರುವಂತಹ ಕುಟುಂಬ.

೨. ಆಸ್ತಿಗಳು ಇಲ್ಲದ ಕುಟುಂಬಗಳಲ್ಲಿ ಒಬ್ಬರಾಗಲಿ ಅಥವಾ ಅದಕ್ಕಿಂತಲೂ ಹೆಚ್ಚು ಮಂದಿ ಯಾವುದಾದರೂ ಒಂದು ಆರ್ಥಿಕ ವ್ಯವಹಾರವನ್ನು ನಿರ್ವಹಿಸುವಂತಹವರಾಗಿರಬೇಕು. ಆದರೆ ಐದು ಮಂದಿ ಇರುವಂತಹ ವ್ಯಕ್ತಿಗಳ ಕುಟುಂಬದ ಆದಾಯವು ೧೨೦೦ ರೂಪಾಯಿಗಳಿಗಿಂತಲೂ ಹೆಚ್ಚಾಗಿರಬಾರದು.

೩. ಕೃಷಿ ಕೆಲಸಗಾರರು, ಕುಶಲ ಕೈಗಾರಿಕೆಗಳನ್ನು ನಿರ್ವಹಿಸಿಕೊಂಡು ಹೋಗುತ್ತಿರುವವರ ಐದುಮಂದಿಯ ಕುಟುಂಬದ ಆದಾಯವು ೧೨೦೦ ರಿಂದ ೧೮೦೦ರ ಒಳಗೇ ಇರಬೇಕು.

೪. ಕೃಷಿ ಭೂಮಿ ಅಥವಾ ಇತರ ಆಸ್ತಿಗಳು ಇದ್ದು ಅವುಗಳಿಂದ ಬರುವ ಉತ್ಪತ್ತಿಯು ತಿಂಗಳಿಗೆ ತಲಾ ೫೫ ರೂಪಾಯಿಗಳಿಗೂ ಕಡಿಮೆ ಇರುವ ಕುಟುಂಬಗಳು.

ಮೇಲೆ ನಮೂದಿಸಿರುವಂತಹ ನಿಯಮಗಳ ವ್ಯಾಪ್ತಿಯಲ್ಲಿ ಬರುವ ಕುಟುಂಬಗಳಿಗೆ ಇಲ್ಲಿ ನಮೂದಿಸಲ್ಪಟ್ಟಿರುವಂತೆ ನೆರವು ನೀಡಲಾಗುವುದು:

೧. ಯಾವುದೇ ವೃತ್ತಿಯನ್ನು ಸ್ವತಃ ನಿರ್ವಹಿಸಲು ಸಾಧ್ಯವಿಲ್ಲದ ವೃದ್ಧರು, ಬಲಹೀನರು ಇರುವ ಕುಟುಂಬಗಳಲ್ಲಿ ಆಸ್ತಿಗಳು ಇಲ್ಲದಿದ್ದರೆ ಅಥವಾ ಕುಟುಂಬವನ್ನು ಪೋಷಿಸುವ ವ್ಯಕ್ತಿ ಇಲ್ಲದಿದ್ದರೆ ಅಂತಹವರಿಗೆ ನಿವೃತ್ತಿ ವೇತನವನ್ನು ಕೊಡಲಾಗುತ್ತದೆ. ಇಂತಹ ಕುಟುಂಬಗಳಲ್ಲಿ ಒಬ್ಬರಿದ್ದರೆ ತಿಂಗಳಿಗೆ ನಲವತ್ತು ಅಥವಾ ಒಬ್ಬರಿಗಿಂತಲೂ ಹೆಚ್ಚು ಮಂದಿ ಇದ್ದರೆ ತಿಂಗಳಿಗೆ ೬೦ ರೂಪಾಯಿ

ಗಳನ್ನು ಕೊಡಲಾಗುತ್ತದೆ.

೨. ಸರ್ಕಾರದ ಮುಕ್ತ ಭೂಮಿಯು ಇರುವಂತಹ ಪ್ರದೇಶಗಳಿಗೆ ಅಂತ್ಯೋದಯ ಕಾರ್ಯಕ್ರಮಕ್ಕೆ ಒಳಪಟ್ಟ ಕುಟುಂಬಗಳಿಗೆ ಪ್ರಾಧಾನ್ಯತೆ ನೀಡಿ ಭೂಮಿಯನ್ನು ಹಂಚಲಾಗುವುದು. ಆ ರೀತಿ ಭೂಮಿಯನ್ನು ಪಡೆದವರಿಗೆ ಕೃಷಿ ಸಾಗಿಸಲು ಅವಶ್ಯಕವಾದ ಸರಮುಟ್ಟುಗಳು, ಬೀಜ, ಗೊಬ್ಬರ ಇತ್ಯಾದಿಗಳನ್ನು ಒದಗಿಸಲಾಗುತ್ತದೆ.

೩. ಉಳಿದ ಕುಟುಂಬಗಳಿಗೆ ಸ್ವಯಂ ವಿಕಾಸ ಯೋಜನೆಗಳ ಮುಖಾಂತರ ಅಭಿವೃದ್ಧಿಯ ಮಾರ್ಗಗಳನ್ನು ತೋರಲಾಗುತ್ತದೆ. ಈ ಯೋಜನೆಯಲ್ಲಿ ಸುಮಾರು ೨೫ ಅಂಶಗಳಿವೆ. ಅವುಗಳಲ್ಲಿ ಕಬ್ಬಿಣ ಕೆಲಸ, ಮರಗೆಲಸ, ಎತ್ತಿನ ಗಾಡಿಗಳನ್ನು ಕೊಡುವುದು, ಕುರಿ–ಮೇಕೆಗಳ ಸಾಕಣೆಕೆ, ಪಶುಪಾಲನೆ, ಕೋಳಿ-ಹಂದಿಗಳ ಸಾಕಣಿಕೆ, ಚರ್ಮಕೆಲಸ, ಕೈಮಗ್ಗಗಳು, ಸೈಕಲ್ ರಿಪೇರಿ ಮುಂತಾದ ವೃತ್ತಿಗಳನ್ನು ಪೋಷಿಸುವುದು, ಅದಕ್ಕೆ ನೆರವಾಗುವುದು ಕೆಲವು ಮುಖ್ಯವಾದ ಅಂಶಗಳು.

ಈ ಕಾರ್ಯಕ್ರಮದ ಮೊದಲಹಂತ ಸೆಪ್ಟೆಂಬರ್ ೧೯೭೮ರಲ್ಲಿ ಪೂರ್ಣವಾಯಿತು. ಈ ಕಾಲದಲ್ಲಿ ದಾರಿದ್ರ್ಯ ರೇಖೆಗಿಂತಲೂ ಕೆಳಗಿದ್ದ ೧,೬೦,೩೬೮ ಕುಟುಂಬಗಳನ್ನು ಗುರ್ತಿಸಲಾಯಿತು. ಮಾರ್ಚ್ ೧೯೭೯ರ ವೇಳೆಗೆ ಗುರ್ತಿಸಲ್ಪಟ್ಟ ಕುಟುಂಬಗಳಲ್ಲಿ ೧,೩೯,೯೮೬ ಕುಟುಂಬಗಳಿಗೆ ಬೇರೆಬೇರೆ ರೂಪಗಳಲ್ಲಿ ನೆರವನ್ನು ನೀಡಲಾಗಿತ್ತು. ಸರ್ಕಾರದ ಅಂದಾಜಿನಂತೆ ಒಂದು ದಶಕದಲ್ಲಿ ಸುಮಾರು ಇಪ್ಪತ್ತು ಲಕ್ಷ ಕುಟುಂಬಗಳು ಈ ಯೋಜನೆಯಲ್ಲಿ ಫಲಪಡೆಯುತ್ತವೆ. ಇದಕ್ಕಾಗಿ ೧೮೭ ಕೋಟಿ ರೂಪಾಯಿಗಳು ಖರ್ಚಾಗುತ್ತವೆ.

ರಾಜ್ಯದಲ್ಲಿಯ ಒಟ್ಟು ಇಪ್ಪತ್ತಾರು ಜಿಲ್ಲೆಗಳಲ್ಲಿ ಸರಾಸರಿ ಸಾಧನೆ ೯೧.೭%, ಇಪ್ಪತ್ತಾರು ಜಿಲ್ಲೆಗಳಲ್ಲಿ ಏಳು ಜಿಲ್ಲೆಗಳು ನೂರಕ್ಕೆ ನೂರರಷ್ಟು ಗುರಿಸಾಧಿಸಿವೆ. ಬಹು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವು ೮೧ರಿಂದ ೧೦೦ ತನಕ ಪ್ರಗತಿ ಸಾಧಿಸಿವೆ. ಕೇವಲ ಎರಡು ಜಿಲ್ಲೆಗಳಲ್ಲಿ ಮಾತ್ರವೇ ಇದರ ಪ್ರಗತಿಯು ೫೮% ಮತ್ತು ೭೦.೭%.

ಎರಡನೆಯ ಬಾರಿಗೆ ಅಂತ್ಯೋದಯ ಕುಟುಂಬಗಳನ್ನು ಗುರ್ತಿಸುವಿಕೆಯು ೧೯೭೮ನೇ ನವೆಂಬರ್ ೧೫ರಂದು ಪ್ರಾರಂಭವಾಗಿ ಸುಮಾರು ೧,೧೧,೭೭೯ ಕುಟುಂಬಗಳನ್ನು ಇದುವರೆವಿಗೂ ಗುರ್ತಿಸಲಾಗಿದೆ. ಇವುಗಳಲ್ಲಿ ಸುಮಾರು ೫೭,೮೮೨ ಕುಟುಂಬಗಳಿಗೆ ಬೇರೆ ಬೇರೆ ಮಾರ್ಗಗಳಿಂದ ನೆರವನ್ನು ನೀಡಲಾಗಿದೆ.

ಈ ಕಾರ್ಯಕ್ರಮದ ಫಲಿತಾಂಶವನ್ನು ತಿಳಿಯಲು ಯೋಜನಾ ಇಲಾಖೆಯವರು ೧೯೭೭ರಲ್ಲಿ ಒಂದು ಸಮೀಕ್ಷೆಯನ್ನು ನಡೆಸಿದರು. ಅದರಲ್ಲಿ ಅವರು ಗಮನಿಸಿದ ಕೆಲವು ಮುಖ್ಯ ಅಂಶಗಳನ್ನು ಇಲ್ಲಿ ಕೊಡಲಾಗಿದೆ:

೧. ಈ ಕಾರ್ಯಕ್ರಮಕ್ಕೆ ಸಂಬಂಧಿಸಿದ ವಿವರಗಳನ್ನೆಲ್ಲಾ ಬಡವರೆಲ್ಲರೂ ತಿಳಿಯಲು ಸಾಧ್ಯವಾಗುವಂತೆ ಪ್ರಸಾರ ಮಾಡಲಾಗಿತ್ತು.

೨. ಈ ಯೋಜನೆಯಿಂದ ಬಡವರ ಆರ್ಥಿಕಸ್ತರ ಮತ್ತು ಗಳಿಕೆಯ ಶಕ್ತಿ ವೃದ್ಧಿಹೊಂದಿದೆ.

೩. ಗುರ್ತಿಸಲ್ಪಟ್ಟ ಕುಟುಂಬಗಳು ಯೋಜನೆಯ ಅನುಗುಣವಾಗಿಯೇ ಇವೆ.

೪. ಯೋಜನೆಯಲ್ಲಿ ನೀಡಲಾಗುತ್ತಿರುವ ಮೊತ್ತವು ಸಕ್ರಮವಾಗಿ ವಿತರಣೆಯಾಗುತ್ತಿದೆಯೇ ಇಲ್ಲವೇ ಎಂಬುದನ್ನು ಗಮನವಿರಿಸಲು ಬ್ಯಾಂಕುಗಳು ವಿಶೇಷ ಸಿಬ್ಬಂದಿಯನ್ನು ನಿಯಮಿಸಿ ಕಾಯುವುದು ಆವಶ್ಯಕ.

೫. ಎಸ್.ಎಫ್.ಡಿ.ಎ, ಯೋಜನೆಯಲ್ಲಿರುವಂತೆಯೇ ಇಲ್ಲೂ 'ರಿಸ್ಕ್‌ಫಂಡ್' ರೂಪಿಸಬೇಕಾದ ಅಗತ್ಯವಿದೆ.

೬. ಪ್ರತಿಯೊಂದು ಅಭಿವೃದ್ಧಿಯೋಜನೆಗೂ ಅವಶ್ಯಕವಾಗಿರುವ ಹಣವನ್ನು ಸರ್ಕಾರವು ಒಡನೆಯೇ ಒದಗಿಸಿದಲ್ಲಿ ಕಾರ್ಯಕ್ರಮವು ಇನ್ನೂ ಹೆಚ್ಚು ಸಮರ್ಥವಾಗಿ ರೂಪುಗೊಳ್ಳುತ್ತದೆ.

೭. ಗ್ರಾಮ ಕೈಗಾರಿಕೆಗಳ ಫಲವಾಗಿ ಉತ್ಪನ್ನವಾಗುವ ಸಾಮಗ್ರಿಗಳ ಮಾರಾಟಕ್ಕಾಗಿ ಮಾರಾಟ ವ್ಯವಸ್ಥೆಯನ್ನು ವಿಸ್ತೃತಗೊಳಿಸಬೇಕಾದುದು ಅಗತ್ಯ.

೮. ಈ ಕಾರ್ಯಕ್ರಮವನ್ನು ಜಾರಿಗೆ ತರಲು ಪ್ರತ್ಯೇಕವಾದ ಇಲಾಖೆ ರೂಪಿಸುವುದು ತೀರ ಅಗತ್ಯ.

೯. ಕಾರ್ಯಕ್ರಮವನ್ನು ಜಾರಿಗೆ ತರುವುದರಲ್ಲಿ ಆಗಬಹುದಾದ ಕೊರತೆಗಳನ್ನು-ಕುಂದುಗಳನ್ನು ಸಕಾಲದಲ್ಲಿ ಗುರ್ತಿಸಿ ಸಕ್ರಮಗೊಳಿಸಿ ತಪ್ಪಿತಸ್ಥರ ಮೇಲೆ ಕಾರ್ಯಾಚರಣೆಗಾಗಿ ಕೈಗೊಳ್ಳಲು ಸೂಕ್ತವಾದ ಪರಿಶೀಲನಾ ಸಮಿತಿಯೊಂದನ್ನು ರೂಪಿಸಬೇಕು.

ರಾಜಾಸ್ಥಾನ್ ಸಾಧಿಸಿರುವ ಪ್ರಗತಿಯು ರಾಷ್ಟ್ರದ ಇತರ ರಾಜ್ಯಗಳಿಗೆ ಮಾರ್ಗದರ್ಶಿಯಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿಯೋಜನೆಯನ್ನು ರಾಜ್ಯಗಳು ಜಾರಿಗೆ ತಂದರೆ ಅದಕ್ಕೆ ಕೇಂದ್ರ ಸರ್ಕಾರದ ಆರ್ಥಿಕನೆರವು ದೊರೆಯುವುದೆಂದು ಕೇಂದ್ರ ಪ್ರಕಟಿಸಿದೆ. ಈ ಕಾರ್ಯಕ್ರಮವನ್ನು ಉತ್ತರಪ್ರದೇಶ,

ಹಿಮಾಚಲಪ್ರದೇಶ, ಬಿಹಾರ್, ಗುಜರಾತ್, ಮಣಿಪುರ ಮತ್ತು ಒರಿಸ್ಸಾ ರಾಜ್ಯಗಳೂ ಕೂಡ ಪ್ರಾರಂಭಿಸಿವೆ. ರಾಜಸ್ಥಾನ್ ಸರ್ಕಾರಕ್ಕೆ ಸ್ಟೇಟ್‌ಬ್ಯಾಂಕ್ ನೆರವು ನೀಡುವುದಾಗಿ ಆಶ್ವಾಸನೆ ನೀಡಿದೆ.

ಈ ಕಾರ್ಯಕ್ರಮಗಳು ಯಶಸ್ವಿಯಾಗಲು ಮುಖ್ಯವಾಗಿ ಗಮನಿಸಬೇಕಾದ ಅಂಶಗಳು ಇವು :

೧. ಸಾಲ ನೀಡಿರುವ ಮೊತ್ತವು ಕ್ರಮವಾದ ರೀತಿಯಲ್ಲಿ ವ್ಯಯವಾಗುತ್ತಿರುವಂತೆ ಎಚ್ಚರಿಕೆ ವಹಿಸಬೇಕು. ಯಾವುದೇ ಕಾರಣದಿಂದಲೂ ಉತ್ಪಾದನಾ ರಹಿತ ಕಾರ್ಯಗಳಲ್ಲಿ ವ್ಯಯವಾಗದಂತೆ ನೋಡಬೇಕು.

೨. ಸಾಲದ ಮೊತ್ತವು ಸಕಾಲದಲ್ಲಿ ಹಿಂತಿರುಗುವಂತೆ ಸೂಕ್ತವಾದ ರೀತಿಯಲ್ಲಿ ಸರ್ಕಾರವು ಕಾನೂನು ರೂಪಿಸಿಕೊಳ್ಳಬೇಕು.

೩. ಸಾಧ್ಯವಿರುವಷ್ಟು ನೆರವನ್ನು ಸಾಲವನ್ನು ಹಣವಾಗಿ ಕೊಡುವುದಕ್ಕಿಂತ ವಸ್ತುರೂಪದಲ್ಲಿ ಕೊಡುವುದು ಒಳ್ಳೆಯದು.

೪. ಈ ಕಾರ್ಯಕ್ರಮವನ್ನು ಜಾರಿಗೆ ತರುವಾಗ ಸ್ವತಂತ್ರವಾದ ಸೇವಾ ಸಂಸ್ಥೆಗಳ ನೆರವನ್ನು ಪಡೆಯುವುದು ಒಳ್ಳೆಯದು.

೫. ಸ್ಥಳೀಯ ಪ್ರಜಾಪ್ರತಿನಿಧಿಗಳು ಈ ಯೋಜನೆಯ ಎಲ್ಲಾ ವಿವರಗಳನ್ನೂ ಬಡವರಿಗೆ ತಿಳಿಯುವಂತೆ ಮಾಡಿ ಅವರು ಈ ಯೋಜನೆಯ ಲಾಭವನ್ನು ಪಡೆಯುವಂತೆ ನೆರವಾಗಬೇಕು.

ಈ ಸೂಚನೆಗಳನ್ನು ಯೋಜನಾ ಇಲಾಖೆಯವರು ನಡೆಸಿದ ಸಮೀಕ್ಷೆಯ ಫಲವಾಗಿ ನೀಡಿರುವ ಗಮನಿಕೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ರಾಷ್ಟ್ರದಲ್ಲೆಲ್ಲಾ ಈ ಕಾರ್ಯಕ್ರಮವನ್ನು ಜಾರಿಗೆ ತಂದರೆ ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಬಲವಾಗಿ ಬೇರುಬಿಟ್ಟಿರುವ ಬಡತನದ ಮೂಲ ಬೇರು ಕತ್ತರಿಸಿದಂತಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಸರಿತಾ ಜ್ಞಾನಾನಂದ

ಅನೇಕರು ಮದುವೆ ಸಾಧನೆಯಲ್ಲಿ ಯಶಸ್ವಿಯಾಗಿಲ್ಲ. ಏಕೆಂದರೆ ಅವರು ಬೇಕಾಗಿ ತಮ್ಮ ಸ್ವಂತ ವಿಚಾರ ಮಾಡುತ್ತಿರುವರೇ ವಿನಹ ಅನ್ಯರ ಜೀವನದಲ್ಲಿ ಬೆರೆತು ಅವರ ಅವಶ್ಯಕತೆ, ಬೇಡಿಕೆಗಳೇನೆಂಬುದರ ವಿಚಾರ ಮಾಡುವದಿಲ್ಲ.

—ನಾರ್ಮನ್ ಪೀಲ್

ಇಸ್ರೇಲಿನಲ್ಲಿ ಸಾಕ್ಷರತಾ ಆಂದೋಳನ

ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರಗಳಲ್ಲಿ ಸಾಕ್ಷರತೆಯ ಸಾಧನ ಹೇಗೆ ನಡೆದಿದೆ ಎಂಬುದಂತೂ ಸ್ವಾರಸ್ಯವಾದ ವಿಷಯ. ಅಲ್ಲಿಯವರ ಸಮಸ್ಯೆಗಳು ಭಾರತದ ಸಮಸ್ಯೆಗಳಿಗಿಂತಲೂ ಭಿನ್ನವೇನಲ್ಲ. ಅವರೂ ಸರ್ಕಾರ, ಸ್ವಯಂಸೇವಾ ಸಂಸ್ಥೆಗಳ, ನೌಕರರ ಸಂಯುಕ್ತ ಪ್ರಯತ್ನದಿಂದಾಗಿ ಸಾಕ್ಷರತಾ ಪ್ರಮಾಣ ಹೆಚ್ಚಿತು. ಅವರು ಎದುರುಗೊಂಡ ಕಷ್ಟಗಳು ಯಾವುವು? ಅವುಗಳನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು ಎಂಬ ವಿಷಯ ನಮಗೆ ರೋಮಾಂಚನಕಾರಿ ಕಥೆಯಂತೆ ಇದೆ. ಭಾರತ ಅವರಿಂದ ಕಲಿಯಬೇಕಾದುದು ಬಹಳವಿದೆ. ಅವರ ಅನುಭವದ ಹಿನ್ನೆಲೆಯಲ್ಲಿ ತನ್ನ ನೀತಿಯಲ್ಲಿ ಹೆಚ್ಚು ಸ್ಪಷ್ಟತೆಯನ್ನೂ ತಂದುಕೊಳ್ಳಬೇಕಾಗುತ್ತದೆ. ಇಂದಿನ ದೋಲಾಯಮಾನ ಸ್ಥಿತಿ ಕೊನೆಯಾಗಿ ವಯಸ್ಕ ಶಿಕ್ಷಣ ಸಮಗ್ರ ಶಿಕ್ಷಣದ ಒಂದು ಅವಿಭಾಜ್ಯ ಅಂಗವಾಗಬೇಕು; ಅನುಷ್ಠಾನದಲ್ಲಿ ತೀವ್ರ ಆಸಕ್ತಿಯನ್ನು ತೋರಬೇಕು. ಹಾಗಾದರೆ ಮಾತ್ರ ಸಾಕ್ಷರತೆಯಲ್ಲಿ ಪ್ರಗತಿಯನ್ನು ಕಾಣಲು ಸಾಧ್ಯ.

ಅಭಿವೃದ್ಧಿಗೊಳ್ಳುತ್ತಿರುವ ದೇಶಗಳಲ್ಲಿ ವಯಸ್ಕ ಶಿಕ್ಷಣದ ಹುಟ್ಟು ಮತ್ತು ಬೆಳವಣಿಗೆಯ ಬಗ್ಗೆ ಹೆಚ್ಚು ತಿಳಿದುಕೊಳ್ಳುವುದು ಆವಶ್ಯಕ. ಇಸ್ರೇಲ್ ಅಂತಹ ಅಭಿವೃದ್ಧಿಶೀಲ ದೇಶಗಳಲ್ಲಿ ಒಂದು. ಅದೂ ಇತ್ತೀಚೆಗೆ ಉದಯವಾದ ರಾಷ್ಟ್ರ.

ಎರಡನೆಯ ಯುದ್ಧಾನಂತರ ಜನಾಂಗ ದ್ವೇಷಕ್ಕೆ ಒಳಗಾಗಿ ಅಪಾರ ಕಷ್ಟನಿಷ್ಠುರಗಳಿಗೆ ಒಳಗಾದ ಜನರೆಂದರೆ ಯಹೂದಿಗಳು. ಜರ್ಮನಿಯಲ್ಲಿ ಅವರ ಸಾಮೂಹಿಕ ಕೊಲೆ, ಅಮಾನುಷವಾದ ಚಿತ್ರಹಿಂಸೆ ಮಾನವ ನಾಗರೀಕತೆಗೆ ಕಳಂಕಪ್ರಾಯವಾಗುವುದು. ದ್ವೇಷದ ಜ್ವಾಲೆ ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಿಗೂ ಹಬ್ಬಿತು. ಅದರ ಫಲವಾಗಿ ಎಲ್ಲ ಕಡೆಯೂ ಅವರ ಉಚ್ಚಾಟನೆಯಾಯಿತು. ಅನ್ನಬಟ್ಟೆಗಳಿಲ್ಲದೆ ಅನಾಥರಾಗಿ ಜನ ಅಲೆದು ಕಂಗಾಲಾದರು. ಮಿತ್ರರಾಷ್ಟ್ರದವರು ಅವರಿಗೆ ಒಂದು ನೆಲೆಯನ್ನು ಸ್ಥಾಪಿಸಲು ಮುಂದಾದರು. ಅವರ ಪೂರ್ವದ ನಾಡಾದ ಪ್ಯಾಲೆಸ್ಟೈನ್ ದೇಶಕ್ಕೆ ಅವರನ್ನು ತಂದು ನಿಲ್ಲಿಸುವುದು ಎಂಬ ತೀರ್ಮಾನಕ್ಕೆ ಬಂದರು. ಯುದ್ಧ ವಿಮಾನಗಳಲ್ಲಿ ಬೇರೆ ಬೇರೆ ದೇಶಗಳಿಂದ ನಿರಾಶ್ರಿತರನ್ನು ತಂದು ಇಸ್ರೇಲ್‌ನ ಭಾಗದಲ್ಲಿ ಇಳಿಸಿದರು. ೮ ಲಕ್ಷ ಮಂದಿ ನಿರಾಶ್ರಿತರಿಗೆ ತಾತ್ಕಾಲಿಕ ವಸತಿಯನ್ನು ನಿರ್ಮಿಸಿದರು. ನಿರಾಶ್ರಿತರಲ್ಲಿ ಎಲ್ಲ ವರ್ಗದ ಜನರೂ ಇದ್ದರು. ಅವರಲ್ಲಿ ವೈದ್ಯರು, ಎಂಜಿನಿಯರುಗಳು,

ಪ್ರಾಧ್ಯಾಪಕರು, ವಿಜ್ಞಾನಿಗಳು, ಕೈಗಾರಿಕೋದ್ಯಮಿಗಳು, ಕಾರ್ಮಿಕರು ರೈತರು ಇದ್ದರು.

ಅವರೆಲ್ಲಾ ಪ್ರಪಂಚದ ವಿವಿಧ ಭಾಗಗಳಿಂದ ಬಂದವರು. ಆಯಾ ಸಂಸ್ಕೃತಿ ಆಚಾರಗಳಿಗೆ ಹೊಂದಿಕೊಂಡವರು ; ಆಡುವ ಭಾಷೆಯೂ ಬೇರೆ ಬೇರೆ. ಹೀಗಾಗಿ ಒಬ್ಬರ ಭಾಷೆ ಇನ್ನೊಬ್ಬರಿಗೆ ಅರ್ಥವಾಗುತ್ತಿರಲಿಲ್ಲ. ಆರಂಭದಲ್ಲಂತೂ ಅಲ್ಲಿ ಗೊಂದಲವೇ ಉಂಟಾಯಿತು. ಆದರೂ ಆ ಜನಾಂಗದ ನಿರ್ಧಾರಶಕ್ತಿ ಅಸಾಧಾರಣವಾದುದು ; ಅವರ ಕ್ರಿಯಾಶಕ್ತಿ ಆಶ್ಚರ್ಯಕರವಾದುದು. ಕೇವಲ ಕಾಲು ಶತಮಾನದ ಅವಧಿಯಲ್ಲಿ ತನ್ನೆಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಏಷ್ಯಾದ ಅಗ್ರಗಣ್ಯ ರಾಷ್ಟ್ರಗಳಲ್ಲಿ ಒಂದಾಗಿದೆ.

ಹಲವಾರು ಸಮಸ್ಯೆಗಳ ಕೂಪವಾಗಿದ್ದ ಇಸ್ರೇಲ್ ಸಾಕ್ಷರತಾ ದಿಸೆಯಲ್ಲಿ ನಡೆಸಿದ ಹೋರಾಟ ಮೆಚ್ಚುವಂತಹದು. ಅವರು ಕೈಗೆತ್ತಿಕೊಂಡ ಮೊದಲ ಪ್ರಶ್ನೆ ಸಂಪರ್ಕ ಭಾಷೆಯೊಂದನ್ನು ರೂಪಿಸಿಕೊಳ್ಳುವುದು. ಅತ್ಯಂತ ಪ್ರಾಚೀನ ಭಾಷೆಗಳಲ್ಲಿ ಒಂದಾದ, ಪುರಾತನ ಗ್ರಂಥ ಭಾಷೆಯಾದ 'ಹೆಬ್ರು'ವನ್ನು ಸಾರ್ವತ್ರಿಕವಾಗಿ ಕಲಿಸಿದರು. ಭಾಷೆಯನ್ನು ಸಂಪೃದ್ಧಗೊಳಿಸಿ ಸಂಪರ್ಕ ಭಾಷೆಯನ್ನಾಗಿ ರಾಷ್ಟ್ರಭಾಷೆಯನ್ನಾಗಿ ಮಾಡಿಕೊಂಡರು. ಸಾಕ್ಷರತಾ ತರಗತಿಗಳಲ್ಲಿ ಪಂಡಿತ ಪಾಮರರೆನ್ನದೆ ಎಲ್ಲರೂ ಒಂದೇ ಸಾಲಿನಲ್ಲಿ ಕುಳಿತು ಪಾಠ ಕಲಿತರು. ಮಹಿಳೆಯರಿಗಾಗಿ ಬೀದಿಗಳಲ್ಲಿ ಅಲ್ಲಲ್ಲಿ ಸಾಕ್ಷರತಾಮೂಲೆಗಳು ಏರ್ಪಟ್ಟವು. ಪ್ರತಿ ಕೇಂದ್ರದಲ್ಲಿಯೂ ಒಂದೆರಡು ಬೆಂಚುಗಳು, ಕಪ್ಪುಹಲಗೆಗಳು ಜೋಡಿಸಲ್ಪಟ್ಟಿದ್ದವು. ಹತ್ತಿರದ ನಾಲ್ಕೈದು ಮನೆಯ ಜನರನ್ನು ಕೂಡಿಸಿ ಶಿಕ್ಷಕ ಪಾಠ ಹೇಳಿ ಮುಂದಿನ ಕೇಂದ್ರಕ್ಕೆ ಹೋಗುತ್ತಿದ್ದನು.

ಯುದ್ಧದ ದುಷ್ಪರಿಣಾಮಗಳಿಂದ ನೊಂದ ರಾಷ್ಟ್ರಗಳಿಗೆ ಕೊಲಂಬೊ ಯೋಜನೆಯ ಮೂಲಕ ಶ್ರೀಮಂತರಾಷ್ಟ್ರಗಳಿಂದ ಸಹಾಯ ಸಂಪತ್ತುಗಳು ಒದಗಿ ಬಂದವು. ದೇಶದ ಹೆಚ್ಚು ಭಾಗ ಸುಣ್ಣಕಲ್ಲು ಮುಂಟಿಗಳಿಂದ ಕೂಡಿದ ಬರಡು ಭೂಮಿಯಾಗಿತ್ತು. ಜನರು ಆಯುಧಗಳನ್ನು ಹಿಡಿದು ಭೂಮಿಯನ್ನು ಅಗೆದರು, ಯಂತ್ರಗಳೊಡನೆ ಸಮ ಸಮ ದುಡಿದರು. ಬಿಡುವೆಂಬುದು ಅವರಿಗೆ ಅಪರೂಪವೇ ಆಗಿತ್ತು. ಆದರೂ ಸಾಕ್ಷರತಾಕಾರ್ಯ ಕುಂಠಿತವಾಗಲಿಲ್ಲ. ವಿರಾಮ ವೇಳೆಯನ್ನು ಅನುಸರಿಸಿ ಸಾಕ್ಷರತಾ ಯೋಜನೆಯನ್ನು ಸಿದ್ಧಪಡಿಸಿದರು.

ವಯಸ್ಕರ ಶಾಲೆಯಲ್ಲಿ ಪಾಠಕ್ರಮ ಹೀಗಿತ್ತು: ವಾರಕ್ಕೆ ೩೦ ಘಂಟೆಗಳ ಕಾಲ ಕಲಿಯುವವರಿಗೆ ೫ ತಿಂಗಳ ತರಗತಿ. ವಾರಕ್ಕೆ ೧೬ ಘಂಟೆಗಳ ಕಾಲ

ಕಲಿಯುವವರಿಗೆ ೧೦ ತಿಂಗಳ ತರಗತಿ. ವಾರಕ್ಕೆ ೮ ಘಂಟೆಗಳ ಕಾಲ ಕಲಿಯುವವರಿಗೆ ೨೦ ತಿಂಗಳ ತರಗತಿ. ವಾರಕ್ಕೆ ೪ ಘಂಟೆಗಳ ಕಾಲ ಕಲಿಯುವವರಿಗೆ ಒಂದು ವೇಳೆ ವಿದ್ಯಾರ್ಥಿಯಾಗಿ ಅಗತ್ಯವಿದ್ದಷ್ಟು ಕಾಲ ತೆಗೆದುಕೊಳ್ಳಬಹುದಾಗಿತ್ತು.

ಕಲಿಯುವವರು ಸಂಕೋಚ ಸ್ವಭಾವದವರಾದ್ದರಿಂದ ೨–೩ ಮಂದಿಗೇ ಪಾಠ ಹೇಳಿಕೊಡುವ ಏರ್ಪಾಟವಿತ್ತು. ವ್ಯಕ್ತಿಗೆ ಹೊಂದಾಣಿಕೆಯಾದ, ಮಾಹಿತಿ ನೀಡುವ ವಿಧಾನವನ್ನೂ ಸಾಕ್ಷರತೆಯೊಡನೆ ಬೆರಸಿದರು. ನಿರಾಶ್ರಿತರಿಗಾಗಿ ನಿರ್ಮಿಸಿದ್ದ 'ಮೊಷಾವೆಡ' ಎಂಬ ಸಹಕಾರಿ ಕೇಂದ್ರಗಳಿಗೆ 'ನೋಡಿ ಮತ್ತು ಕೇಳಿ' ಎಂಬ ಶೈಕ್ಷಣಿಕ ಕಾರ್ಯಕ್ರಮವನ್ನೂ ರೇಡಿಯೊ, ಟಿವಿಗಳ ಮೂಲಕ ವ್ಯವಸ್ಥೆ ಮಾಡಿದರು.

ಒಮ್ಮೆ ಬರಡು ಭೂಮಿಯಾಗಿದ್ದ ದೇಶ ಸಂಪದ್ಭರಿತವಾದ ಹಣ್ಣಿನ ತೋಟಗಳಾಗಿ ಮಾರ್ಪಾಡಾಯಿತು. ದುಡಿಮೆ ಮತ್ತು ಕಲಿಕೆಗಳ ಸಂಯೋಗದ ಫಲ ಪ್ರಗತಿಯಾಯಿತು.

ದುಡಿಮೆಗಾರರ ತಾಯಂದಿರ ಸಮಿತಿಯನ್ನು (ಮೊಯಟ್ ಜತ್ ಹಾ ಪೊ ಅಲಾಟ್) ರಚಿಸಿಕೊಂಡರು. ಇಸ್ರೇಲಿನಲ್ಲಿ ರೂಪಿಸಿದ ಬೇಸಾಯ ಕ್ಷೇತ್ರಗಳಿಗೆ 'ಕಿಬುಟ್ಜ್' ಎಂದು ಹೆಸರು. ಅವುಗಳ ವ್ಯವಸ್ಥೆ, ಅಚ್ಚುಕಟ್ಟು ಮತ್ತು ಉದ್ದೇಶಗಳನ್ನು ಜವಾಹರಲಾಲ್ ನೆಹ್ರೂರವರು ನೋಡಿ ತುಂಬಾ ಮೆಚ್ಚಿಕೊಂಡಿದ್ದರು. ಭಾರತದಲ್ಲಿ ಅಂತಹ ಸಾಮೂಹಿಕ ಕ್ಷೇತ್ರಗಳು ಸ್ಥಾಪಿಸಲ್ಪಡುವುದು ಅಗತ್ಯ ಎಂಬ ಅಭಿಪ್ರಾಯವುಳ್ಳವರಾಗಿದ್ದರು. ಕಿಬುಟ್ಜ್‌ಗಳಲ್ಲಿ ವಯಸ್ಕ ಶಿಕ್ಷಣಕ್ಕೆ ತುಂಬಾ ಪ್ರಾಮುಖ್ಯತೆ ಕೊಡಲಾಗಿತ್ತು.

ನವಸಾಕ್ಷರರಿಗಾಗಿ 'ಓಮರ್' ಎಂಬ ದಿನಪತ್ರಿಕೆಯನ್ನು ಹೊರಡಿಸಿದರು. 'ಟೆಲೆನರ್' ಎಂಬ ಸಂಚಾರಿ ಶೈಕ್ಷಣಿಕ ಘಟಕ, ರಂಗಭೂಮಿಯೂ ಸೇರಿ, ವಸತಿಯಿಂದ ವಸತಿಗೆ ಸಂಚರಿಸಿ ಪ್ರದರ್ಶನಗಳನ್ನೂ ಏರ್ಪಡಿಸುತ್ತಿವೆ.


ಕಲಿಯುವವರಿಗೆ ಹಲವಾರು ಕಷ್ಟಗಳಿದ್ದವು. ಮೊದಲನೆಯದಾಗಿ ಅವರು ವಿಶ್ರಾಂತಿ ವೇಳೆಯಲ್ಲಿ ಕಲಿಯಬೇಕಿತ್ತು. ಸಾಕಷ್ಟು ಮಂದಿ ಶಿಕ್ಷಕರು ಸಿಗುತ್ತಿರಲಿಲ್ಲ. ಹಣಕಾಸಿನ ಕೊರತೆಯೂ ಇತ್ತು. ವಸತಿ ಕೇಂದ್ರಗಳು ಪರಸ್ಪರ ದೂರವಿದ್ದು ಸಾರಿಗೆಯ ಸೌಲಭ್ಯಗಳ ಕೊರತೆಯಿತ್ತು. ಆದರೂ ಜನತೆ ಮತ್ತು ಸರ್ಕಾರಗಳು ಒಟ್ಟುಗೂಡಿ ಮಾಡಿದ ಪ್ರಯತ್ನದ ಫಲವಾಗಿ ನಿರಕ್ಷರತೆಯನ್ನು ಅತ್ಯಲ್ಪ ಕಾಲದಲ್ಲಿ ತೊಡೆದುಹಾಕಿದರು.

ಸಾಕ್ಷರತೆ ಒಂದೊಂದು ದೇಶದಲ್ಲಿ ಒಂದೊಂದು ಪವಾಡ ಸದೃಶವಾದ ಮಹತ್ಸಾಧನೆಗಳನ್ನು ತಂದಿದೆ. ರಷ್ಯದಲ್ಲಿ ಕ್ರಾಂತಿಯನ್ನು ಉಳಿಸಿಕೊಳ್ಳಲು ಸಾಕ್ಷರತೆ ಸಹಾಯಮಾಡಿತು. ಚೀನಾದಲ್ಲಿ ಸಾಂಸ್ಕೃತಿಕ ಕ್ರಾಂತಿಯನ್ನು ಬೆಳೆಸಿತು. ಬ್ರೆಸಿಲ್‌ನಲ್ಲಿ ನಿರಂಕುಶಾಧಿಕಾರಿ ಸರ್ಕಾರವನ್ನೇ ಕಿತ್ತುಹಾಕಿತು. ಇರಾನ್ ಕೃಷಿಭಾಗಗಳಲ್ಲಿ ಅಧಿಕೋತ್ಪಾದನೆಗೆ ನೆರವಾಯಿತು. ಹಾಗೆಯೇ ಇಸ್ರೇಲಿನಲ್ಲಿ ಭಿನ್ನಭಿನ್ನ ಸಂಸ್ಕೃತಿಯ ಜನರ ರಾಷ್ಟ್ರೀಯ ಭಾವೈಕ್ಯವನ್ನು ತುಂಬಿತು. ಜನರನ್ನು ಒಂದುಗೂಡಿಸುವ ಕೆಲಸದಲ್ಲಿ ಸಾಕ್ಷರತೆಯ ಪಾತ್ರ ಹಿರಿದಾದುದು.

ಇಂದು ಇಸ್ರೇಲಿನಲ್ಲಿ ಸಾಕ್ಷರತೆ ಮತ್ತೊಂದು ಹೊಸರೂಪು ತಾಳುತ್ತಿದೆ. ಅದೇ ತಾಂತ್ರಿಕತೆ+ಸಾಕ್ಷರತೆ (Technocracy). ವಿಜ್ಞಾನ ಮತ್ತು ತಾಂತ್ರಿಕತೆಗಳಿಗೂ ಸಾಕ್ಷರತೆಗೂ ಸಂಬಂಧ ಕಲ್ಪಿಸಲಾಗಿದೆ. ಸಾಕ್ಷರತೆ ಹೆಚ್ಚು ಕ್ರಿಯಾತ್ಮಕ ರೂಪತಾಳಿ ದುಡಿಮೆಗಾರರ ನೆರವಿಗೆ ಬರುತ್ತಿರುವುದು ಪ್ರಗತಿಯ ಸಂಕೇತವಾಗಿದೆ.

ಸುಮಾರು ೩೦ ದಶಲಕ್ಷ ಜನಸಂಖ್ಯೆಯುಳ್ಳ ಪುಟ್ಟ ಇಸ್ರೇಲ್ ಮೂರುಕಡೆ ಸುತ್ತುವರಿಯಲ್ಪಟ್ಟ ಪ್ರಬಲವಾದ ಅರಬ್ ರಾಷ್ಟ್ರಗಳ ಸೋಲಿಸಿ ಜಯ ಸಾರಿ ಜಗತ್ತನ್ನೇ ಅಚ್ಚರಿಗೊಳಿಸಿದೆ. ಅದರ ಆಂತರಿಕ ಬಲವೆಲ್ಲಾ ದುಡಿಮೆಗಾರರನ್ನು ಆಶ್ರಯಿಸಿ ನಿಂತಿದೆ. ದುಡಿಮೆಗಾರರಿಗೆ ಚೈತನ್ಯದ ಬುಗ್ಗೆ ವಯಸ್ಕ ಶಿಕ್ಷಣ!

ಎಸ್. ರಜತಾದ್ರಿ



ವ್ಯಕ್ತಿಗಳಂತೆ ರಾಷ್ಟ್ರಗಳಿಗಾದರೂ ಹುಟ್ಟು ಸಾವುಗಳುಂಟು. ಆದರೆ ನಾಗರಿಕತೆ ಸಂಸ್ಕೃತಿಗಳಿಗಿಲ್ಲ.

—ಮ್ಯಾಝಿನಿ

ಸೋಜಿಗದ ಪ್ರಾಣಿ ಕಡಲು ಕುದುರೆ

ಹೌದು—ನೀರಿನಲ್ಲಿರುವ ಕುದುರೆ ರೂಪದ ಪ್ರಾಣಿ ಇದು ; ಮೀನಿನ ಗುಂಪಿಗೆ ಸೇರಿದೆ. ಆದರೆ ಮೀನಿನ ಗುಣಗಳು ಇದರಲ್ಲಿಲ್ಲ! ಕುದುರೆಯನ್ನು ಹೋಲುವ ಕತ್ತು ಮತ್ತು ಮುಖ ಇವೆ ಎಂದೇ ಕಡಲು ಕುದುರೆ ಎಂಬ ಹೆಸರು. ಆದರೆ ಇದರ ದೇಹ ಕುದುರೆಯದಕ್ಕಿಂತ ಭಿನ್ನವಾದದ್ದು. ಕಡಲು ಕುದುರೆಯ ಉಬ್ಬಿದ ಎದೆ, ಸಿಕ್ಕಿದ ವಸ್ತುವನ್ನು ಬಿಗಿಯಾಗಿ ಸುತ್ತಿಕೊಳ್ಳಬಲ್ಲ ಕೋತಿ ಬಾಲ ಮುಂತಾದ ಲಕ್ಷಣಗಳು ವಿಚಿತ್ರವಾಗಿ ಕಂಡುಬರುತ್ತವೆ. ಇದರ ಜೊತೆಗೆ, ಸನ್ನಿವೇಶಕ್ಕೆ ಅನುಗುಣವಾಗಿ ಬಣ್ಣ ಬದಲಾಯಿಸುವ ಸಾಮರ್ಥ್ಯ ಕೂಡ ಪಡೆದಿದೆ. ಇದಕ್ಕೆ ಹಲ್ಲಿಲ್ಲ. ಸ್ವತಂತ್ರವಾಗಿ ಚಲಿಸಬಲ್ಲ ಎರಡು ಕಣ್ಣುಗಳಿವೆ. ಇದರಿಂದಾಗಿ ಒಂದು ಕಣ್ಣು ನೀರಿನ ಆಳದಲ್ಲಿರುವ ವಸ್ತುಗಳನ್ನು ಗಮನಿಸುತ್ತಿರುವಾಗಲೇ ಇನ್ನೊಂದು ಕಣ್ಣು ತಾನಿರುವ ಜಾಗದಲ್ಲಿ ಸುತ್ತಮುತ್ತ ದಿಟ್ಟಿಸಬಲ್ಲದು. ವಾಸ ಕಡಲಸಸ್ಯಗಳ ನಡುವೆ. ಅವನ್ನೇ ಹೋಲುವ ರೂಪ ಇದರದು.

ದೇಹದ ಮೇಲೆ ಡಾರ್ಸಲ್ ಈಜುರೆಕ್ಕೆ ಮಾತ್ರ ಉಂಟು. ಮೀನುಗಳಲ್ಲಿರುವ ಬೇರೆ ಯಾವ ಈಜುರೆಕ್ಕೆಗಳೂ ಇದರಲ್ಲಿಲ್ಲ. ರೂಪದಲ್ಲಿ ಡಾರ್ಸಲ್ ಬೀಸಣಿಗೆಯಂತಿದೆ. ಇದು ಚುರುಕಾಗಿ ಚಲಿಸಬಲ್ಲದು. ಆದ್ದರಿಂದ ಇದು ಕಡಲುಕುದುರೆಗೆ ಈಜುವ ಸಾಧನ. ಮೀನಿಗೆ ಈಜುರೆಕ್ಕೆ ಈಜಲು ನೆರವಾಗುವ ಅಂಗ. ಕಡಲು ಕುದುರೆಗಾದರೋ ಈಜುರೆಕ್ಕೆಯಿಂದ ಈಜಲು ಯಾವ ನೆರವೂ ಒದಗದು. ಇದು ಕೇವಲ ಸುತ್ತಿಕೊಳ್ಳುವ ಅಂಗ ಮಾತ್ರ.

ಸಾಮಾನ್ಯವಾಗಿ ಕಡಲುಕುದುರೆಯ ಬಣ್ಣ ಕಪ್ಪು ಅಥವಾ ಕಂದು. ಆದರೆ ಹಿಂದೂಮಹಾಸಾಗರ ಮತ್ತು ಭೂಮಧ್ಯ ಸಮುದ್ರಗಳಲ್ಲಿ ವಾಸಿಸುವ ಕಡಲು ಕುದುರೆಗಳು ನಸುಗೆಂಪು, ಹಳದಿ, ನೀಲಿ ಅಥವಾ ಬಿಳಿ ಬಣ್ಣಗಳವು. ಹೊಟ್ಟೆಯ ಪಕ್ಕದಲ್ಲಿ ಜೋತಾಡುವ ರೆಕ್ಕೆಗಳು ಕಣ್ಣು ಕೋರೈಸುವ ವಜ್ರಗಳಂತೆ ಒಂದು ಕ್ಷಣ ಮಿನುಗಬಹುದು. ಆದರೆ ಮರುಕ್ಷಣದಲ್ಲೇ ಈ ಬಣ್ಣ ಬದಲಾಗಿ ಸುತ್ತಮುತ್ತಲಿನ ಬಂಡೆಗಳ ಬಣ್ಣವನ್ನು ತಳೆಯಬಹುದು. ಆಸ್ಟ್ರೇಲಿಯದಲ್ಲಿ ಒಂದು ಜಾತಿಯ ಕಡಲುಕುದುರೆಗೆ ಉದ್ದನೆಯ ಮೀಸೆಗಳಿವೆ. ಇದು ಸಮುದ್ರದಲ್ಲಿ ಒಂದು ಕಡೆ ನಿಂತಾಗ, ಈ ಮೀಸೆಗಳು ಸ್ವೇಚ್ಛೆಯಾಗಿ ನೀರಿನಲ್ಲಿ ಅಲುಗಾಡುತ್ತಿರುತ್ತವೆ. ಇದರಿಂದಾಗಿ ಪ್ರಾಣಿಯ ದೇಹ ಒಂದು ಮುರಿದ ತುಂಡಿನಂತೆ ಕಾಣುತ್ತಿರುತ್ತದೆ. ಈ ವಿಧದಲ್ಲಿ ಕಡಲುಕುದುರೆ ಇತರ ಪ್ರಾಣಿಗಳನ್ನು ವಂಚಿಸಿ

ಸ್ವರಕ್ಷಣೆ ಸಾಧಿಸಿಕೊಳ್ಳುವುದಾಗಿರಬಹುದು.

ಕಡಲುಕುದುರೆಯ ದೇಹ ಮೂಳೆಗಳ ಪದರದಿಂದ ಆಗಿದೆ. ಇದು ದೇಹಕ್ಕೆ ರಕ್ಷಾಕವಚ. ಹೀಗೆ ಹೊರಭಾಗ ಗಟ್ಟಿಯಾಗಿರುವುದರಿಂದ ಕಡಲುಕುದುರೆ ಯಾವಾಗಲೂ ದೇಹವನ್ನು ನೇರವಾಗಿಟ್ಟುಕೊಂಡೇ ಈಜಬೇಕಾಗುತ್ತದೆ. ಅದರಿಂದ ಇದಕ್ಕೆ ಬಗ್ಗುವ ಅವಕಾಶವಿರುವುದಿಲ್ಲ. ಮತ್ತು ದೇಹವನ್ನು ಅತ್ತಿತ್ತ ಬಳುಕಿಸಲು ಸಾಧ್ಯವಾಗುವುದಿಲ್ಲ. ಆದರೆ ಕಡಲುಕುದುರೆ, ತನಗೆ ಬೇಕಾದ ದಿಕ್ಕಿನಲ್ಲಿ ಅಂಜಿಸುತ್ತ ವೇಗವಾಗಿ ಸಾಗಬಲ್ಲದು. ಇದಕ್ಕೆ ಡಾರ್ಸಲ್ ಈಜುರೆಕ್ಕೆಯ ಸಹಾಯ ಅತ್ಯವಶ್ಯ.

ಕಡಲುಕುದುರೆಯ ಈಜುವಿಕೆಗೆ ಹಾಗೂ ಸಮತೋಲನದ ರಕ್ಷಣೆಗೆ ಅದರ ದೇಹದಲ್ಲಿರುವ ಒಂದು ಅನಿಲದ ಚೀಲ ನೆರವಾಗುತ್ತದೆ. ಆಕಸ್ಮಾತ್ ಈ ಅನಿಲ ಚೀಲಕ್ಕೆ ಏನಾದರೂ ಧಕ್ಕೆಯಾದರೆ, ಕಡಲುಕುದುರೆಯು ಗುರುತ್ವ ಸಮತೋಲನ ತಪ್ಪಿ ಅದು ನೀರಿನಾಳಕ್ಕೆ ಮುಳುಗುತ್ತದೆ. ಮತ್ತೆ ಅನಿಲವನ್ನು ಉತ್ಪಾದಿಸಿಕೊಳ್ಳುವವರೆಗೆ ಅದು ನಿಸ್ಸಹಾಯಕವಾಗಿ ನೀರಿನ ತಳದಲ್ಲಿ ಬಿದ್ದಿರಬೇಕಾಗುತ್ತದೆ.

ಕಡಲುಕುದುರೆ, ಸಮುದ್ರದಲ್ಲಿ ಯಥೇಚ್ಛವಾಗಿ ದೊರೆಯುವ ಸೂಕ್ಷ್ಮಸಸ್ಯಗಳನ್ನು ಆಹಾರವಾಗಿ ಉಪಯೋಗಿಸುತ್ತದೆ. ಇದರ ಮಾಂಸ ಚರ್ಮ, ರಬ್ಬರ್ ಮತ್ತು ಮೂಳೆಗಳ ಸಮ್ಮಿಶ್ರಣವಾಗಿರುವುದರಿಂದ ಅದು ಆಹಾರವಾಗಿ ಮಾನವನಿಗೆ ಉಪಯುಕ್ತವಾಗಿಲ್ಲ.

ಕಡಲುಕುದುರೆಗಳಲ್ಲಿ ಲಿಂಗಭೇದವಿದೆ. ಗಂಡು ಕಡಲುಕುದುರೆಗೆ ಹೊಟ್ಟೆಯ ಕೆಳಗೆ ವಿಶೇಷವಾದ ಚೀಲವಿರುತ್ತದೆ. ಅದರಲ್ಲಿ ಮೊಟ್ಟೆಗಳನ್ನಿಟ್ಟುಕೊಂಡು ಮರಿಯಾಗುವ ತನಕ ಕಾಪಾಡುತ್ತದೆ ಮತ್ತು ಅದರ ರಕ್ತದಿಂದ ಸ್ರವಿಸುವ ಒಂದು ಬಗೆಯ ದ್ರವ ಬೆಳೆಯುತ್ತಿರುವ ಮೊಟ್ಟೆಗಳಿಗೆ ಆಹಾರವಾಗುತ್ತದೆ. ಇದರಿಂದಾಗಿ ಗಂಡು ಕಡಲುಕುದುರೆ ಮರಿಗಳಿಗೆ ಜನ್ಮ ನೀಡುತ್ತದೆ ಅಥವಾ ಗರ್ಭ ಧರಿಸುತ್ತದೆ ಎಂಬ ಹಾಸ್ಯಕ್ಕೆ ಗುರಿಯಾಗಿದೆ.

ಕಡಲುಕುದುರೆಗಳ ಪ್ರೇಮಾಲಾಪ ಅದ್ಭುತವಾದದ್ದು. ಗಂಡು ಮತ್ತು ಹೆಣ್ಣು ಕಡಲುಕುದುರೆಗಳು ಪರಸ್ಪರ ಸುತ್ತುತ್ತ ಒಂದೆರಡು ದಿನಗಳು ಕಾಲ ತಳ್ಳುತ್ತವೆ. ಇಲ್ಲಿ ಹೆಣ್ಣು ಗಂಡನ್ನು ಹಿಂಬಾಲಿಸಿ ಅವರ ಪ್ರೇಮಭಿಕ್ಷೆ ಬೇಡುತ್ತದೆ. ಇವುಗಳ ಆಲಿಂಗನದ ಪರಿಣಾಮವಾಗಿ ಹೆಣ್ಣು ತನ್ನ ತತ್ತಿಗಳನ್ನು ಗಂಡಿನ ವಿಶೇಷ ಚೀಲದೊಳಗೆ ಹಾಕುತ್ತವೆ. ಹೆಣ್ಣು ಕಡಲುಕುದುರೆ ಒಮ್ಮೆಗೇ ಸುಮಾರು


೨೦೦-೩೦೦ ಕೆಂಬಣ್ಣದ ಮೊಟ್ಟೆಗಳನ್ನಿಡುತ್ತದೆ. ಅನಂತರ ವಿಶೇಷ ಚೀಲದ ಕವಾಟ ಮುಚ್ಚಿಕೊಂಡು, ಮೊಟ್ಟೆಗಳೊಡೆದು ಮರಿಗಳು ಹೊರಬೀಳುವಾಗಲೇ ಚೀಲದ ಕವಾಟ ತೆರೆಯುವುದಾಗಿದೆ. ಈ ತರಹ ವಿಶೇಷ ಚೀಲವನ್ನು ಹೆಣ್ಣು ಕಾಂಗರೂವಿನಲ್ಲೂ ಕಾಣಬಹುದು. ಸುಮಾರು ೨೦೦-೩೦೦ ಕೆಂಬಣ್ಣದ ತತ್ತಿಗಳು ವಿಶೇಷ ಕೋಶದೊಳಗೆ ಬಿದ್ದ ಕ್ಷಣ ಫಲಿತವಾಗುತ್ತವೆ. ಇಲ್ಲಿಗೆ ಹೆಣ್ಣಿನ ಸಂತಾನಾಭಿವೃದ್ಧಿಯ ಕಾರ್ಯಭಾರ ಮುಗಿದು, ಅದು ತನ್ನ ಪಾಡಿಗೆ ನಿಶ್ಚಿಂತೆಯಿಂದ ಹೊರಟುಹೋಗುತ್ತದೆ. ಇನ್ನು ಮುಂದಿನ ಜವಾಬ್ದಾರಿ ಗಂಡು ಕಡಲು ಕುದುರೆಯದು. ಸುಮಾರು ೪೫ ದಿವಸಗಳವರೆಗೆ ತತ್ತಿಗಳಿಗೆ ಗಂಡು ಕಡಲು ಕುದುರೆ ಪೋಷಣೆ ನೀಡುತ್ತದೆ. ಅನಂತರ ಮರಿಗಳು ಕೋಶದೊಳಗಿಂದ ಇಣಕಲು ಪ್ರಾರಂಭಿಸುತ್ತವೆ. ಗಂಡು ಕಡಲುಕುದುರೆ, ಮರಿಗಳನ್ನು ನೀರಿನಲ್ಲಿ ಹಾಕುತ್ತದೆ. ತತ್‌ಕ್ಷಣ ಮರಿಗಳು ದಿಕ್ಕು ದಿಕ್ಕಾಗಿ ಜಿಗಿಯುತ್ತವೆ. ಆಕಾರದಲ್ಲಿ ಮರಿಗಳು ತಂದೆ ತಾಯಿಗಳನ್ನೇ ಹೋಲುತ್ತವೆ. ಆದರೆ ಮರಿಗಳ ಮೈ ಎಷ್ಟು ಪಾರದರ್ಶಕವಾಗಿರುತ್ತದೆಯೆಂದರೆ, ಅವುಗಳ ದೇಹದಲ್ಲಿರುವ ಹೃದಯ ಬಡಿದುಕೊಳ್ಳುವುದನ್ನು ನಾವು ಕಾಣಬಹುದು. ಕೆಲವು ದಿನಗಳ ಅನಂತರ ಮರಿಗಳ ದೇಹದಲ್ಲಿ ಬಣ್ಣವು ತಳೆಯುತ್ತದೆ.

ಪ್ರಾಚೀನ ಕಾಲದಿಂದಲೂ ಕಡಲುಕುದುರೆ, ನೋಟಕ್ಕೆ ವಿನೋದದ ವಸ್ತುವಾಗಿದೆ. ಗ್ರೀಕರು ಕಡಲುಕುದುರೆಯನ್ನು ಕುದುರೆ ಹುಳವೆಂದು ಕರೆಯುತ್ತಿದ್ದರು. ಇದರಿಂದಾಗಿ ಇದು ಮನುಷ್ಯನನ್ನು ಹಾಗೂ ಪ್ರಾಣಿವಿಜ್ಞಾನಿಗಳನ್ನು ಆಕರ್ಷಿಸಿದೆ. ಅದನ್ನು ಯಾರೂ ಭಕ್ಷಿಸದಿದ್ದರೂ ಅದರ ಸುತ್ತ ಕಟ್ಟಲಾಗಿರುವ ಕಥೆಗಳಿಗೇನೂ ಕೊರತೆ ಇಲ್ಲ. ಹಿಂದೆ ಗ್ರೀಕರು ಕಡಲುಕುದುರೆ, ದುಷ್ಟಶಕ್ತಿಗಳ ಆವಾಸಸ್ಥಾನ ಎಂದು ನಂಬಿದ್ದರು. ಅದರ ಮಾಂಸವನ್ನು ಮದ್ಯದಲ್ಲಿ ಬೆರೆಸಿದಾಗ ಅದು ಪ್ರಾಣಕ್ಕೆ ಸಂಚಕಾರವೆಂದು ಹೇಳಲಾಗುತ್ತಿತ್ತು. ಆದರೂ ಕಡಲು ಕುದುರೆಯ ದಹನದಿಂದ ಬರುವ ಬೂದಿಯನ್ನು ಜೇನು ಮತ್ತು ವಿನಿಗರ್‌ನೊಡನೆ ಬೆರೆಸಿ ಉಪಯೋಗಿಸಿದಾಗ ಅದು ವಿಷನಾಶಕಾರಿಯಾಗುತ್ತಿತ್ತು ಎಂದು ತಿಳಿದು ಬಂದಿದೆ. ಕಡಲುಕುದುರೆಯ ಬೂದಿ, ಅನೇಕ ಚರ್ಮವ್ಯಾಧಿಗಳಿಗೆ ಮುಖ್ಯವಾಗಿ ಬೋಳುತಲೆಗೆ ಮತ್ತು ಹುಚ್ಚುನಾಯಿ ಕಡಿತಕ್ಕೆ ಉತ್ತಮ ಔಷಧವೆಂದು ಗ್ರೀಕ್ ವೈದ್ಯ ಪ್ಲಿನಿಯ ಅಭಿಪ್ರಾಯ. ಹೀಗೆ ಕಡಲುಕುದುರೆ ಸತ್ತಮೇಲೆ, ಅದರ ಅವಶೇಷವನ್ನು ಅಲಂಕಾರಕ್ಕಾಗಿ ಉಪಯೋಗಿಸುವುದಲ್ಲದೇ ಅವರಲ್ಲಿ ಔಷಧಿಯ ಗುಣಗಳಿವೆ ಎಂಬ ಮೂಢನಂಬಿಕೆಯೂ ಇದೆ. ಅಂತೂ ನಿರುಪಯುಕ್ತ

ವೆನಿಸಿದ ಈ ಕಡಲುಕುದುರೆಯಿಂದಲೂ ಮಾನವ ಸ್ವಲ್ಪವಾದರೂ ಉಪಯೋಗವನ್ನು ಪಡೆಯದೆ ಬಿಟ್ಟಿಲ್ಲ.

ಸುಮಾರು ೪೦ ಬಗೆಯ ಕಡಲುಕುದುರೆ ಜಾತಿಗಳನ್ನು ಇದುವರೆಗೆ ಕಂಡುಹಿಡಿಯಲಾಗಿದೆ. ಕಡಲುಕುದುರೆ ಹಿಂದೂಮಹಾಸಾಗರ ಮತ್ತು ಅಟ್ಲಾಂಟಿಕ್ ಸಮುದ್ರದಲ್ಲಿ, ಜಪಾನ್, ಮಲೇಯಾ, ಆಸ್ಟ್ರೇಲಿಯ ಮತ್ತು ಚೈನಾ ದೇಶಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.

ಎಂ. ಎಸ್. ವಿಜಯಲಕ್ಷ್ಮಿ



ಶ್ರೀಮಂತ ಹಾಗೂ ವಿದ್ವಾಂಸರ ನಡುವೆ ಒಂದೇ ಒಂದು ವ್ಯತ್ಯಾಸ. ಶ್ರೀಮಂತರು ಸಂಪತ್ತನ್ನು ದಾನಮಾಡುವುದರಿಂದ ಬಡವರಾಗುತ್ತಾರೆ; ವಿದ್ವಾಂಸರು ವಿದ್ಯಾದಾನ ಮಾಡುವುದರಿಂದ ಮತ್ತಷ್ಟು ಸಂಪನ್ನರಾಗುತ್ತಾರೆ.

—ಸುಭಾಷಿತ

ಪ್ರತಿಯೊಂದು ಅಪಾಯಕ್ಕಾಗಿ ವೈದ್ಯನೆಡೆಗೆ ಓಡಬೇಡ. ಪ್ರತಿಯೊಂದು ನ್ಯಾಯಕ್ಕಾಗಿ ವಕೀಲನೆಡೆಗೆ ಹೋಗಬೇಡ. ಪ್ರತಿಯೊಂದು ತೃಷೆಗಾಗಿ ನೀರಿನ ಕೊಡದೆಡೆಗೆ ಹೋಗಬೇಡ.

—ಜಾರ್ಜ್ ಹರ್ಬರ್ಟ್

ಅಧಿಕಾರ ಹೆಚ್ಚಿದಷ್ಟೂ ಅದನ್ನು ದುರುಪಯೋಗಪಡಿಸಿಕೊಳ್ಳುವ ಅಪಾಯದ ಅಂಜಿಕೆಯೂ ಹೆಚ್ಚುತ್ತದೆ.

—ಬರ್ಕ್

'ಪ' ಇಂದ 'ಪಪ್ಪ'

ಪಂಜರದಲ್ಲಿ ಸೇತು ಬಿದ್ದಿರುವ ಇದು ದಿನವೆಲ್ಲ 'ರಾಮ ಎಂದು ಹೇಳು, ರಾಮ ಎಂದು ಹೇಳು' ಎಂದು ಒಂದೇ ಸಮನೆ ಬಾಯಿಪಾಠ ಮಾಡುತ್ತಿರುತ್ತದೆಯಲ್ಲ? ಆಂಟಿಯ ಮೂಗು ಥೇಟು ಈ ಗಿಳಿ ಮೂಗಿನಂತೆಯೇ ಇದೆ. ಉದ್ದುದ್ದವಾಗಿ, ಚೂಪು-ಚೂಪಾಗಿ ಸುಂದರವಾಗಿ. ಪಪ್ಪ ದಿನವೆಲ್ಲ ಅದೆಂಥ ಗೋಲಿಗಳೊಂದಿಗೆ ಆಡುತ್ತಾನೋ ಕಾಣೆ--ಗುಂಡು ಗುಂಡಾದ ಹೊಳೆಹೊಳೆಯುತ್ತಿರುವ ಗೋಲಿಗಳು. ಆಂಟಿಯ ಕಣ್ಣುಗಳೂ ಸಹ ಹಾಗೆಯೇ ಇವೆ ಮತ್ತು ಆಂಟಿಯ ತುಟಿಗಳು? ಅವಂತು ನಿಜಕ್ಕೂ ಚಾಕೊಲೇಟ್‌ಗಳೇ. ನಾನು ಅವುಗಳನ್ನು ಈಗತಾನೆ ಚೀಪುತ್ತಿದ್ದೇನೆ. ಚಾಕೊಲೇಟಿನಂತೆ ನನ್ನನ್ನು ಮಧುರವಾಗಿ ಪ್ರೀತಿಸುತ್ತಾಳೆ ಆಂಟಿ.

ಆಂಟಿ ನನಗೆ ಬಹಳ ಚೆನ್ನಾಗಿ ಕಾಣಿಸುತ್ತಾಳೆ. ನಿಜ, ನಾನು ಆಂಟಿಯನ್ನು ಹೆಚ್ಚಾಗಿ ಪ್ರೀತಿಸುತ್ತೇನೆ. ಒಂದೊಂದು ಸಾರಿ ಆಂಟಿ ನನ್ನನ್ನು ಮಡಿಲಲ್ಲಿ ತುಂಬಿಕೊಂಡು ಗಿರಗನೆ ಸುತ್ತುತ್ತ ಕುಣಿಯತೊಡಗುತ್ತಾಳೆ. ಆಗ ನನಗೆ ತುಂಬಾ ಸಂತೋಷವಾಗುತ್ತದೆ. ಅನಂತರ ಆಕೆ ನನ್ನನ್ನು ನೀಲೂ ಆಂಟಿಯ ಮನೆಗೆ ಕರೆದುಕೊಂಡು ಹೋಗುತ್ತಾಳೆ. ಅಲ್ಲೋ ಬಂಟಿ ಇರುತ್ತಾನೆ, ಅವನು ಯಾವಾಗಲೂ ಕುಳಿತುಕೊಂಡು ಕಣ್ಣುಗಳನ್ನು ಕುಣಿಸುತ್ತಿರುತ್ತಾನೆ.

ಒಂದು ವಿಷಯ ನನಗೆ ಅರ್ಥವಾಗುತ್ತಿಲ್ಲ. ಆಂಟಿ ಏಕೆ ಇಷ್ಟು ದೊಡ್ಡವಳಾಗಿದ್ದಾಳೆ? ಇಷ್ಟು ದೊಡ್ಡದೊಡ್ಡ ಬಟ್ಟೆಗಳನ್ನು ಏಕೆ ತೊಡುತ್ತಾಳೆ? ನಾನು ಏಕೆ ಇಷ್ಟೊಂದು ಚಿಕ್ಕವನಾಗಿದ್ದೇನೆ? ನನಗೆ ತೊಡುವುದಕ್ಕೆ ಗೇಣುದ್ದ ಬಟ್ಟೆಗಳನ್ನು ಏಕೆ ಕೊಡಲಾಗುತ್ತದೆ? ಇವೂ ಕೆಲವು ದೊಡ್ಡ ವಿಷಯಗಳೇ!

ನನ್ನ ಬಟ್ಟೆಗಳನ್ನು ಆಂಟಿಗೆ ತೊಡಿಸಿದರೆ ಮತ್ತು ಆಂಟಿ ಬಟ್ಟೆಗಳನ್ನು ನನಗೆ ತೊಡಿಸಿದರೆ ಎಂಥ ಒಳ್ಳೆತಮಾಷೆಯಾಗಿರುತ್ತದೆ. ಸ್ವಲ್ಪ ಹೊತ್ತು ಆಂಟಿ ವಿಭ್ರಾಂತಳಾಗುವಳು. ಮೂಗಿನ ಹೊಳ್ಳೆಗಳನ್ನು ಅಗಲಿಸಿಕೊಂಡು ಕೋಪಗೊಳ್ಳುವಳು. ಕೇಳುವಳು, ಯಾರು ನನ್ನ ಬಟ್ಟೆಗಳನ್ನು ಹಾಕಿಕೊಳ್ಳುವ ಪ್ರಯತ್ನ ಮಾಡಿದವರು?....ಹೀಗೆ ಅವಳು ಕೋಪ ಮಾಡಿಕೊಂಡಿರುವಾಗ ಸುಮ್ಮನೆ ಒಳಗಿನಿಂದ ಮೆಲ್ಲನೆ ಹೊರಟು ಗೆಜ್ಜೆ ಶಬ್ದ ಮಾಡುತ್ತ ಬಂದು

೧೯೮೩ರ ಮೇ ತಿಂಗಳ ಹಿಂದಿ ಡೈಜೆಸ್ಟ್ 'ನವನೀತ್'ನ ಉಪ್‌ಭ್ರಾಂತ್‌ರ ಹಿಂದೀ ಕತೆ 'ಪ' ಇಂದ 'ಪಾಪಾ'ದ ಅನುವಾದ.

ಬಿಡುವೆನು. ಥೇಟು ಮದುವಣಗಿತ್ತಿಯ ಹಾಗೆ. ಆಂಟಿಯ ಕೋಪ ನನ್ನನ್ನು ನೋಡುತ್ತಿದ್ದಂತೆಯೇ ಮಾಯವಾಗಿ ಬಿಡುವುದು ಮತ್ತು ಓಡೋಡಿ ಬಂದು ನನ್ನನ್ನು ಮುದ್ದಿಸುವಳು. ಮಡಿಲಲ್ಲಿ ತುಂಬಿಕೊಂಡು ಅಜ್ಜಿಗೆ ತೋರಿಸಲು ಕರೆದುಕೊಂಡು ಹೋಗುವಳು. ನೋಡು ಮಮ್ಮಿ; ಪಿಂಕಿ ಈಗಿನಿಂದಲೇ ಮದುವಣಗಿತ್ತಿಯಾಗಿಬಿಟ್ಟಿದ್ದಾಳೆ. ಅಜ್ಜಿ ಏನನ್ನಾದರೂ ಹೇಳುವುದಕ್ಕೆ ಮೊದಲೇ ತಾತನ ಬಳಿ ಕರೆದುಕೊಂಡು ಹೊರಡುವಳು.

ನನ್ನನ್ನು ಏಕೆ ತಮಾಷೆ ಮಾಡುತ್ತಾರೆ? ನಾನು ಮದುವಣಗಿತ್ತಿಯಾಗಲಾರೆನೆ? ಏನು ಮಮ್ಮಿ ಒಬ್ಬಳೇ ಮದುವಣಗಿತ್ತಿಯಾಗಬಲ್ಲಳೆ? ಆರೆ ಈಸು ದಿನಗಳು ಆಗಿಬಿಟ್ಟಿಲ್ಲ ಈಗಲೇ. ಹೇಗೆ ಗೊಂಬೆ ಹಾಗೆ ಕುಳಿತುಕೊಂಡಿದ್ದೆ ಆ ಮೂಲೆಗೆ. ಅಲ್ಲದೆ ನಾನು ಯಾವ ಮಾತನ್ನೂ ಮರೆಯೋದೆ ಇಲ್ಲ! ಆಂಟಿಯ ಮಡಿಲಿನಿಂದಲೇ ಈ ಎಲ್ಲ ತಮಾಷೆನೂ ನೋಡ್ತಾ ಇದ್ದೆ.

ಅದ್ಯಾಕೊ ಮಮ್ಮಿ ಮದ್ಲಂಗೆ ಈಗ ನನಗೆ ಅಷ್ಟು ಚೆನ್ನಾಗಿ ಕಾಣ್ತಿಲ್ಲ. ಹಾಗೆ ನೋಡಿದರೆ ಮಮ್ಮಿನಲ್ಲಿ ಕೆಟ್ಟದ್ದು ಏನಿದೆ! ನೋಡಕ್ಕೆ ಮಮ್ಮಿ ಆಂಟಿಗಿಂತ ಚೆನ್ನಾಗಿ ಕಾಣ್ತಾಳೆ—ಬಿಳಿಯ ಸುಂದರ ವರ್ಣ, ಗುಂಡುಗುಂಡಾದ ಮೂಗು, ನೀಲಿ ಬಣ್ಣದ ಕಣ್ಣು. ಆದರೆ ಆಂಟಿ, ಮಮ್ಮಿ ಇಬ್ಬರಲ್ಲಿ ನಿನಗೆ ಯಾರು ಇಷ್ಟ ಎಂದು ಯಾರಾದರೂ ಕೇಳಿದರೆ ತಕ್ಷಣ ಯೋಚ್ನೆ ಮಾಡ್ದೆ ಆಂಟಿ ತೊಡೆ ಮೇಲೆ ಹಾರಿ ಕುಳಿತುಬಿಡುತ್ತೇನೆ. ಆದರೆ ಇದರಲ್ಲಿ ಯೋಚ್ನೆ ಮಾಡೋದೇನಿದೆ!

ಮಮ್ಮಿ ಇಲ್ಲಿಗೆ ಬಂದಾಗೆಲ್ಲ ನನ್ನನ್ನು ಚೆನ್ನಾಗಿ ಮುದ್ದಿಸ್ತಾಳೆ, ರಾಶಿ-ರಾಶಿ ಆಟಿಕೆಗಳನ್ನು ತರ್ತಾಳೆ ಮತ್ತು ಟಾಫಿ ಬಿಸ್ಕತ್ತು ಮಿಠಾಯಿ ಮತ್ತು ತುಂಬಾ ಬಟ್ಟೆಗಳನ್ನು ತರ್ತಾಳೆ. ಆದರೆ ನಮ್ಮಮ್ಮಿನ್ ಬಾಯಿಂದ ಒಂದು ವಿಚಿತ್ರವಾದ ವಾಸನೆ ಬರುತ್ತಿರುವುದು ನನಗೆ ಕಾಣಿಸ್ತದೆ. ಇಲ್ಲ.... ಇಲ್ಲ.... ಮಮ್ಮಿ ಹಲ್ಲುಗಳು ಕೊಳಕಾಗಿಲ್ಲ. ಅವಂತೂ ಬಹಳ ಶುಭ್ರವಾಗಿ ಫಳಫಳ ಹೊಳೀತವೆ—ಥೇಟು ಮಿಂಚಿನ ಹೊಳಪಿನಂತೆ. ಆದರೆ ಅದ್ಯಾಕೋ ಕಾಣೆ, ಮಮ್ಮಿ ನನ್ನನ್ನ ಪ್ರೀತಿಸದಿದ್ದರೇ ಚೆನ್ನು. ಆದರೆ ಈ ಮಾತನ್ನು ಮಮ್ಮಿಗೆ ಹೇಳುವುದಾದರು ಯಾರು? ಆಂಟಿಗಂತೂ ಹೇಳಕ್ಕಾಗಲ್ಲ. ನನ್ಗೂ ಹೇಳಕ್ಕೆ ಬಿಡಲ್ಲ. ಬಾಯಿಂದ ಒಂದು ಬಂತೋ ಇಲ್ಲೊ, ಕಿವಿ ತಿರುಚಿ ಇಟ್ಬಿಡ್ತಾಳೆ.

ಆದರೆ ಒಂದು ಮಾತು. ಈ ಸಾರಿ ಮಮ್ಮಿ ಬಂದಾಗ ಅವಳು ತಂದಿದ್ದ ಒಂದು ಆಟಿಕೆ ತುಂಬ ಚೆನ್ನಾಗಿತ್ತು. ಹಾಸಿಗೆ ಮೇಲೆ ಬಿದ್ದುಕೊಂಡು ಕೈಕಾಲು

ಗಳನ್ನ ಜೋರ್-ಜೋರಾಗಿ ಜಾಡುಸ್ತಿತ್ತು. ಯಾರ ಜೊತೇಲೋ ಯುದ್ಧ ಮಾಡ್ತಿರೋ ಹಾಗೆ. ನಾನಂತು ಹೆದುರ್ಕೊಂಡ್ಬಿಟ್ಟೆ. ಅರೆ, ನೀನು ಬೇರೆ ಗೊಂಬೆಗಳ ಮುಂದೆ ಬಾಳ ದೊಡ್ಡೋನು, ಬಾಳ ಒಳ್ಳೇನು, ಒಪ್ಕಂಡೆ, ಆದರೆ ಬೇರೆ ಯಾರನ್ನೂ ನಿನ್ನತ್ರಕ್ಕೆ ಬರಾಕೆ ಬಿಡಲ್ಲ ಅಂದ್ರೆ ಇದೆಂಥದು. ಎಲ್ರನ್ನೂ ದೂರ್ದಿಂದಲೇ ಹೆದ್ರುಸ್ ಬಿಡು.

ಒಳ್ಳೇದು....ನಾನು ಅಂಜಿಕೊಂಡು ಅಂಜಿಕೊಂಡು ಅದರ ಹತ್ರ ಹೋದೆ. ನಾನು ಹತ್ತಿರ ಹೋಗುತ್ತಿದ್ದಂತೆಯೇ ಕೈ-ಕಾಲು ಆಡಿಸುವುದನ್ನು ನಿಲ್ಲಿಸಿಬಿಟ್ಟಿತು ಮತ್ತು ನನ್ನನ್ನು ಪಿಳಿಪಿಳಿ ಕಣ್ಣುಬಿಡುತ್ತ ನೋಡತೊಡಗಿತು. ನಾನಂತೂ ಒಂದೇ ಸಮನೆ ನೋಡುತ್ತಲೇ ನಿಂತುಬಿಟ್ಟೆ. ಸಂಪೂರ್ಣವಾಗಿ ನನ್ನ ಗೊಂಬೆಯಂತೆಯೇ ಕಾಣುತ್ತಿತ್ತು. ವ್ಯತ್ಯಾಸವಿಷ್ಟೆ—ನನ್ನ ಗೊಂಬೆ ಬಹಳ ಪುಟ್ಟದು. ಏನೂ ಮಾತನಾಡುವುದಿಲ್ಲ; ನಿಶ್ಶಬ್ದವಾಗಿ ಬಿದ್ದಿರುತ್ತದೆ. ನಾನು ಕೂರಿಸಿದ ಹಾಗೆ ಕೂತಿರುತ್ತದೆ. ಮಲಗಿಸಿದ ಹಾಗೇ ಮಲಗಿರುತ್ತದೆ ಮತ್ತು ಈ ಗೊಂಬೆ ಸ್ವಲ್ಪ ದೊಡ್ಡದಾಗಿದೆ, ಮಾತನಾಡುತ್ತದೆ, ಕೈ-ಕಾಲು ಆಡಿಸುತ್ತದೆ ಮತ್ತು ಹತ್ತಿರ ಹೋದ ಕೂಡಲೇ ಸುಮ್ಮನಾಗಿ ನನ್ನನ್ನು ನೋಡತೊಡಗುತ್ತದೆ.

ಅದನ್ನು ಮುದ್ದಿಸೋಣ ಅಂತ ನನಗೆ ಮನಸ್ಸಾಯಿತು. ಮುಂದುವರಿದು ಅಂಜುತಾ ಅಂಜುತಾ ಬೆರಳಿಂದ ಮುಟ್ಟಿದೆ. ಅದು ಮಾತೇ ಆಡಲಿಲ್ಲ. ಅದು ನನ್ನ ಬೆರಳನ್ನು ತನ್ನ ಮುಷ್ಟಿಯಲ್ಲಿ ಹಿಡಿದುಕೊಂಡಿತು. ನನಗೆ ಆನಂದವಾಯ್ತು. ಸಂತೋಷದಿಂದ ಅದನ್ನು ನನ್ನತ್ತ ಎಳೆದುಕೊಳ್ಳತೊಡಗಿದೆ, ಅದೇನಾಯ್ತೊ ಕಾಣೆ, ಅದು ಕಿರುಚಾಡಕ್ಕೆ ಸುರುಮಾಡ್ತು. ನಾನು ಹೆದರಿಬಿಟ್ಟೆ. ಮಮ್ಮಿ ಏನಾದ್ರೂ ಬಂದುಬಿಟ್ರೆ ನನ್ನ ಗತಿ ಬೇಡ ಅನ್ನುಸ್ತು. ಅದರ ಬಾಯಿಂದ ಸಬ್ದ ಬರದೇ ಇರಲಿ ಅಂತ ನಾನು ಅದರ ಬಾಯನ್ನು ನನ್ನ ಕೈಯಿಂದ ಭದ್ರವಾಗಿ ಮುಚ್ಚಿಬಿಟ್ಟೆ.

ಅದರ ಬಾಯಿಂದ ಶಬ್ದವೇನೂ ಹೊರಡಲಿಲ್ಲ, ಆದರೆ ನನ್ನ ಕೆನ್ನೆ ಮೇಲೆ ಫಟೀರ್ ಅಂತ ಯಾರೊ ಹೊಡೀತಿರೋ ಶಬ್ದ ಬರಕ್ಕೆ ಸುರುವಾಯ್ತು. ಆ ಏಟು ಎಷ್ಟು ಜೋರಾಗಿದ್ದು ಅಂದ್ರೆ ನನ್ನ ಕಣ್ಣಲ್ಲಿ ನೀರು ಬಂದುವು ಮತ್ತು ನಾನು ಜೋರಾಗಿ ಅಳಕ್ಕೆ ಸುರುಮಾಡ್ದೆ. ಅಳ್ತಅಳ್ತಲಿ ಹೊಡೀತಿರೋರು ಕಡೆ ನೋಡ್ದೆ. ಮಮ್ಮಿ ಆಗಿದ್ದಳು. ಈಗ ಅವಳು ತನ್ನ ಆಟಿಕೆಯನ್ನು ಎತ್ತಿಕೊಂಡು ಬಿಟ್ಟಿದ್ದಳು ಮತ್ತು ಅದಕ್ಕೆ ಕೈಗಳಿಂದ ಮುತ್ತ-ಮುತ್ತೆ ಹೊಡೀತ್ತಿದ್ದಳು. ಆ

ಆಟಿಕೆಯ ತುಂಟತನ ನೋಡಿ, ನಾನು ಮುದ್ದಿಸಿದಾಗ ಕಿರುಚಾಡಕ್ಕೆ ಶುರು ಮಾಡ್ತು. ಈಗ ಮಮ್ಮಿ ಅದಕ್ಕೆ ಮೇಲಿಂದ ಮೇಲೆ ಹೊಡೀತಾ ಇದ್ರು ಏನೂ ಉಸುರೇ ಇಲ್ಲ. ಚೀ! ಕೆಟ್ಟಗೊಂಬೆ!

ಮಮ್ಮಿ ನನ್ನನ್ನು ದುರುಗುಟ್ಟಿಕೊಂಡು ನೋಡುತ್ತಿದ್ದಳು. ಕಿವಿಗಳಂತು ಜೋರಾಗಿ ನೋಯ್ತೋ ಅಂಗೆ ಹಿಂಡಿಟ್ಟವಳೆ. ಹೋಗಲಿ, ನಾನು ಮಾಡಿದ ತಪ್ಪಾದ್ರು ಏನು? ಅಳ್ತಅಳ್ತಾನೆ ಯೋಚ್ನೆ ಮಾಡ್ತಾ ಇದ್ದೀನಿ. ಅಗ್ಲೆ ಆಂಟಿ ಬರ್ತಾಳೆ. ನನ್ನನ್ನು ಮಡಿಲಲ್ಲಿ ತುಂಬಿಕೊಂಡು ಮುದ್ದಿಸ್ತಾಳೆ ಮತ್ತು ಸಿಟ್ಟಿನಿಂದ ಮಮ್ಮಿ ಕಡೆ ನೋಡ್ತಾಳೆ. ಮಮ್ಮಿ ಮಾತೇ ಆಡಲ್ಲ. ಸುಮ್ಮನೆ ಹೊರಟು ಹೋಗ್ತಾಳೆ.

ಆಂಟಿ ತನ್ನ ತುಟಿಗಳ ಬಣ್ಣದ ಚಾಕೊಲೇಟ್ ತಿನ್ನಕ್ಕೆ ಕೊಡ್ತಾಳೆ ಮತ್ತು ನನ್ನನ್ನು ತಾತನ ಬಳಿ ಕರ್ಕೊಂಡೋಗ್ತಾಳೆ. ತಾತನತ್ರ ಹೇಳ್ತಾಳೆ—'ನೋಡಪ್ಪ, ಅಕ್ಕ ಕಾರಣನೇ ಇಲ್ದೆ ಪಿಂಕಿಗೆ ಎಷ್ಟೊಂದು ಏಟು ಕೊಟ್ಟವಳೆ! ಇಂಥ ಅಮ್ಮನೂ ಯಾರಾದ್ರೂ ಇರ್ತಾರೇನು, ಪಪ್ಪ!'

ಪಪ್ಪ! ಈ 'ಪಪ್ಪ' ಅಂದರೆ ಏನು? ಆಂಟಿ ತಾತನ್ನ ಪಪ್ಪ ಅಂತ ಯಾಕೆ ಕರೀತಾಳೆ? ಮತ್ತು ತಾನು ಮಾತ್ರ ಪಪ್ಪ ಅಂತ ಕರೀತಾಳೆ ನನಗೆ ಹಾಗೆ ಕರೆಯಲಿಕ್ಕೆ ಬಿಡಲ್ಲ ಯಾಕೆ?

ಅವತ್ತು ಆಂಟಿ ನೋಡ್ತಿದ್ದಂಗೆ ತಾತನನ್ನು ಪಪ್ಪ ಅಂತ ಹೇಳ್ದ್ರೆ ಆಂಟಿ ಹೇಳ್ತಾದ್ಳು—'ಇಲ್ಲ ಮಗು! ಇವರು ನಿನ್ನ ತಾತ! ಇವರನ್ನು ತಾತಾ ಅಂತ ಕರಿ. ಹೇಳು ತಾ....ತಾ....ತ!'

ವಾಹ್! ಇದೂ ಒಂದು ವಿಷಯವೆ? ನೀನು 'ಪಪ್ಪ' ಅಂತ ಕರಿ ಮತ್ತು ನಾವು ಮಾತ್ರ ತಾತ ಅಂತೀವಿ! ಹುಂಹು! ನಾವ್ಯ ಎಂದೂ ಇವರನ್ನು ತಾತಾ ಅಂತ ಕರೆಯೋಲ್ಲ.

'ಊಂ....ಊಂ ನಾನಂತೂ ಪಪ್ಪ ಅಂತಲೇ ಕರೀತೀನಿ....' ನಾನು ತಪಿತ ಆಂಟಿಗೆ ಹೇಳ್ಬಿಟ್ಟೆ.

'ಇಲ್ಲ ಪಿಂಕಿ, ನಿನ್ನಪ್ಪ ಅಗೋ ಅಲ್ಲಿ ನೋಡು, ಅವರು!' ಆಂಟಿ ಬಾಗಿಲ ಕಡೆ ತೋರಿಸಿದಳು ಮತ್ತು ಅಲ್ಲಿ ಅದೇ ಅಳು ಮುಖದ ಮನುಷ್ಯ, ನಮ್ಮಮ್ಮನ ಜೊತೆ ಮಂಟಪದಲ್ಲಿ ಚೆನ್ನಾಗಿ ಸುತ್ತಾಕಿದ್ದವನು ಕಾಣುಸ್ದ.

ಆ ಮನುಷ್ಯ ಪಪ್ಪ ಹೇಗಾಗಕ್ಕೆ ಸಾಧ್ಯ? ಪ....ಪ್ಪ ಎಷ್ಟೊಂದು ಪ್ರಿಯವಾದ ಹೆಸರು! ಅವನಲ್ಲಿ ಪಪ್ಪ ಅನ್ನೋದು ಏನೂ ಕಾಣುಸ್ತಿಲ್ಲ. ಮತ್ತೆ ಇವ

ಮೊದಲು ಎಲ್ಲಿದ್ದ? ಅಂಟಿ ಹೇಳ್ತಾಳೆ, ನಾನು ಬಾಳ ದೊಡ್ಡೋಳಾಗ್ಬಿಟ್ಟಿದ್ದೀನಿ ಅಂತ. ನಾಲ್ಕು ವರ್ಷದವಳು. ಆದರೆ ನಾನು ಅವನ್ನ ಇತ್ತೀಚೆಗೆ ಕೆಲವೇ ದಿನಗಳಿಂದ ನೋಡ್ತಿದ್ದೀನಿ. ಅವ ನನ್ನ ಪಪ್ಪ ಹೇಗೆ ಆಗಾಕ್ಕೆ ಸಾಧ್ಯ? ಅಲ್ಲದೆ ಅವ ನನ್ನ ಪಪ್ಪನೇ ಆಗಿದ್ದಿದ್ರೆ ಯಾವಾಗಲೂ ನನ್ನನ್ನು ತನ್ನ ಹತ್ರ ಇಟ್ಕೊಳ್ತಿರಲಿಲ್ಲವೆ? ಇವ ಸ್ವಲ್ಪ ದಿನ ಇಲ್ಲಿದ್ದು ಹೊರಟು ಹೋಗ್ತನೆ ಮತ್ತು ಮಮ್ಮಿಯನ್ನು ಜೊತೇಲಿ ಕರೆದುಕೊಂಡು ಹೋಗ್ತಾನೆ. ಇಂಥ ಜನ ಎಲ್ಲಾದ್ರು ಪಪ್ಪ ಆಗ್ತಾರೇನು?

ಮತ್ತು ಮಮ್ಮಿನು ನೋಡು. ಯಾವಾಗ್ಲು ಗಿರಿಗಿಟ್ಲೆ ಅಂಗೆ ಇವನ ಹಿಂದೇನೆ ಕುಣೀತಿರ್ತಳೆ. ಇವ ಹೊಸ್ತಾಗಿ ಬಂದಿದ್ದಾಗ ಮಮ್ಮಿ ತುಂಬ ಪ್ರೀತಿಯಿಂದ ಮಾತಾಡ್ತಿದ್ಲು. ಈಗ ಇವಳಿಗೆ ಏನಾಗಿ ಬಿಡ್ತು? ಈ ನನ್ನ ಕೆಟ್ಟ ಪಪ್ಪ ಮಮ್ಮಿ ಮೇಲೆ ಏನಾರು ಜಾದು ಮಾಡ್ಬುಟ್ನೊ?

* * *

ಜಾದು ನನಗೆ ಹೆಚ್ಚು ಇಷ್ಟ. ಆ ದಿನ ಒಬ್ಬ ಜಾದೂಗಾರ ಬಂದಿದ್ದ. ಎಂಥ ವಿಚಿತ್ರವಾದ ಜಾದೂ ಆಟವನ್ನು ತೋರಿಸುತ್ತಿದ್ದ. ಪದಾರ್ಥಗಳನ್ನು ಮಾಯಾ ಮಾಡುವಂತಹ ಜಾದೂ ಅನ್ನು ನನಗೂ ಕಲಿಸಿದ್ದರೆ ಎಷ್ಟೊಂದು ಮಜಾ ಇರುತ್ತಿತ್ತು. ಎಲ್ಲಕ್ಕಿಂತ ಮೊದಲು ನಾನು ಈ ಕೆಟ್ಟಪಪ್ಪನನ್ನು ಮಂತ್ರ ಹಾಕಿ ಮಾಯ ಮಾಡಿಬಿಡುತ್ತಿದ್ದೆ. ಇನ್ನೂ ಸ್ವಲ್ಪ ಹೆಚ್ಚು ಜಾದೂ ಮಾಡುವುದನ್ನು ಕಲಿತಿದ್ದರೆ ಅಜ್ಜಿಯ ಕಥೆಯಲ್ಲಿ ಬರುವ ರಾಕ್ಷಸನಂತೆ ಸೊಳ್ಳೆಮಾಡಿಬಿಡುತ್ತಿದ್ದೆ! ನನ್ನ ಮಮ್ಮಿಯನ್ನು ಯಾವಾಗಲೂ ತನ್ನ ಜೊತೆಯಲ್ಲಿಯೇ ಕಟ್ಟಿಕೊಂಡು ತಿರುಗಾಡುತ್ತಾನೆ!

ಮಮ್ಮಿಯು ಸಹ ವಿಚಿತ್ರವಾಗಿದ್ದಾಳೆ. ವಿಚಿತ್ರವಿಚಿತ್ರವಾದ ಮಾತುಗಳನ್ನು ಆಡುತ್ತಾಳೆ. ಈ 'ಪಪ್ಪ' ಬರುವುದಕ್ಕೆ ಮೊದಲು ನನ್ನನ್ನು ಎಷ್ಟೊಂದು ಪ್ರೀತಿಸುತ್ತಿದ್ದಳು. ಅಂಟಿಗಿಂತಲೂ ಹೆಚ್ಚಾಗಿ. ಮತ್ತೆ ಈಗ? ಈಗಂತೂ ಈ 'ಪಪ್ಪ'ನ ಜೊತೆಯಲ್ಲಿಯೇ ಇರುತ್ತಾಳೆ ಮತ್ತು ದಿನವೆಲ್ಲ ಆ 'ಆಟಿಕೆ'ಯನ್ನು ಮಡಿಲಲ್ಲಿ ಇಟ್ಟುಕೊಂಡೇ ತಿರುಗಾಡುತ್ತಾಳೆ. ನನ್ನನ್ನು ಮಡಿಲಲ್ಲಿ ತುಂಬಿಸಿಕೊಳ್ಳುವುದಿಲ್ಲ? ಮಮ್ಮಿಗೆ ಒಂದೇಸಮ ಕೆನ್ನೆಗೆ ಹೊಡೆಯೋಣ ಅನ್ನಿಸುತ್ತದೆ ನನ್ನ ಮನಸ್ಸಿಗೆ. ಮಮ್ಮಿ ನನ್ನನ್ನು ಅಳಿಸುವಂತೆ ನಾನೂ ಮಮ್ಮಿಯನ್ನು ಅಳಿಸಲೇ ಅನ್ನಿಸುತ್ತದೆ. ಅವತ್ತಿನ ಹಾಗೆ ಮಮ್ಮಿಯ ಕಣ್ಣುಗಳೆಲ್ಲ ಕೆಂಪಾಗಿಬಿಡುವಷ್ಟು ಅಳಿಸಿಬಿಡಲೇ ಅಂತ ಅನ್ನಿಸುತ್ತದೆ!

ಆಗ ಮಮ್ಮಿ ದಿನವೆಲ್ಲ ಇಲ್ಲೇ ಇರುತ್ತಿದ್ದಳು. ಆಂಟಿ ಸ್ಕೂಲಿಗೆ ಹೋಗುತ್ತಿದ್ದಳು ಮತ್ತು ಮಮ್ಮಿ ನನ್ನನ್ನು ಕಂಕುಳಲ್ಲಿ ಎತ್ತಿಕೊಂಡಿರುತ್ತಿದ್ದಳು, ನನ್ನ ಜೊತೆ ಆಡುತ್ತಿದ್ದಳು, ನನಗೆ ಟಾಫಿ, ಬಿಸ್ಕತ್ತು ಕೊಡುತ್ತಿದ್ದಳು ಮತ್ತು ಚೆನ್ನಾಗಿ ನಗುತ್ತಿದ್ದಳು.

ಆ ದಿನ ಮಮ್ಮಿ ರೂಮಿನಲ್ಲಿದ್ದಳು. ನನ್ನ ಮನಸ್ಸಿಗೆ ಏನು ಬಂತೋ ಏನೋ, ಮಮ್ಮಿನ ಹೆದರಿಸಿಬಿಡೋಣ ಅನ್ನಿಸಿತು. ಗೊಗ್ಗಯ್ಯನಂತೆ ಕೊಠಡಿಯೊಳಕ್ಕೆ ನುಗ್ಗಿದೆ. ನಂತರ ಮಮ್ಮಿಯ ಹಿಂದುಗಡೆ ಹೋಗಿ ಹೌ ಹೌ ಎಂದು ಹೆದರಿಸಿದೆ. ಮಮ್ಮಿ ನನ್ನ ಕಡೆ ನೋಡಿದಳೋ ಇಲ್ಲವೊ ನಾನು ದಂಗಾಗಿ ಹೋದೆ. ಮಮ್ಮಿ ಕಣ್ಣುಗಳು ಕೆಂಪಾಗಿದ್ದವು ಮತ್ತು ಅವುಗಳಿಂದ ದಪ್ಪದಪ್ಪ ಕಣ್ಣೀರಿನ ಹನಿಗಳು ಧುಮುಕುತ್ತಿದ್ದುವು. ಕೈಯಲ್ಲಿ ಗಾಜು ಹಾಕಿದ್ದ ಫೋಟೋ ಇತ್ತು. ಅವಳು ಅದನ್ನೇ ನೋಡುತ್ತಿದ್ದಳು. ನನ್ನನ್ನು ನೋಡುತ್ತಲೇ ಆಕೆ ಆ ಫೋಟೋವನ್ನು ಬೇರೆ ಇಟ್ಟು ನನ್ನನ್ನು ಎತ್ತಿಕೊಂಡು ಮುದ್ದಿಸಲು ತೊಡಗಿದಳು. ಅವಳ ಕಣ್ಣಿಂದ ನೀರು ಇನ್ನೂ ತೊಟ್ಟಿಕ್ಕುತ್ತಿತ್ತು. ನನಗೆ ದುಃಖ ಉಕ್ಕಿಬಂತು. ನಾನು ಕೇಳಿದೆ 'ಮ....ಮ್ಮಿ! ಏಕೆ....ಅ....ಳುತ್ತೀ.' ಆಗ ನನಗಿನ್ನೂ ಸರಿಯಾಗಿ ಮಾತೂ ಬರುತ್ತಿರಲಿಲ್ಲ.

ನನ್ನ ಮಾತು ಕೇಳಿದ ಮೇಲೂ ಮಮ್ಮಿಯು ಅಳು ನಿಲ್ಲಲಿಲ್ಲ. ಇನ್ನೂ ಹೆಚ್ಚಾಯಿತು. ಆಕೆ ನನ್ನನ್ನು ಮಡಿಲಲ್ಲಿ ತುಂಬಿಕೊಂಡೇ ಪುನಃ ಆ ಫೋಟೊ ಎತ್ತಿಕೊಂಡು ಅದನ್ನು ನೋಡತೊಡಗಿದಳು. ಆಕೆ ಒಮ್ಮೊಮ್ಮೆ ಫೋಟೋ ನೋಡುತ್ತಿದ್ದಳು. ಒಮ್ಮೆ ನನ್ನನ್ನು ನೋಡುತ್ತಿದ್ದಳು ಮತ್ತು ಅಳುತ್ತಿದ್ದಳು. ನನಗೆ ತುಂಬಾ ಆಶ್ಚರ್ಯವಾಯಿತು. ನಾನು ಫೋಟೊ ಕಡೆ ನೋಡಿದೆ. ಅದರಲ್ಲಿ ಮಮ್ಮಿಯೇ ಕುಳಿತಿದ್ದಳು. ಅದರ ಮಮ್ಮಿ ಜೊತೆಯಲ್ಲಿ ಒಬ್ಬ ಮನುಷ್ಯನೂ ಕುಳಿತಿದ್ದ. ನನಗೆ ಆ ಮನುಷ್ಯ ತುಂಬ ಇಷ್ಟವಾದ. ನಾನು ಈ ಫೋಟೋವನ್ನು ಈ ಮೊದಲು ಯಾವಾಗಲೂ ನೋಡಿಯೇ ಇರಲಿಲ್ಲ. ನಾನು ಮಮ್ಮಿಯನ್ನು ಕೇಳಿದೆ—'ಮ....ಮ್ಮೀ....ಇವರು....ಯಾರು?' ಆ ಮನುಷ್ಯನ ಮೇಲೆ ನಾನು ಬೆರಳನ್ನು ಇಟ್ಟುಬಿಟ್ಟೆ.

ಅದರೆ ಇದನ್ನು ನೋಡಿ ನನಗೆ ಕೋಪ ಬಂತು. ಮಮ್ಮಿ ಅಳು ನಿಲ್ಲಲೇ ಇಲ್ಲ. ಅಳ್ತಅಳ್ತಾನೆ ಹೇಳಿದಳು, 'ಇವರು....ಇವರು ನಿನ್ನ ಪಪ್ಪ, ಪಿಂಕಿ!'

ಹಾಗೋ! ಹಾಗಾದರೆ 'ಪಪ್ಪ' ಅನ್ನೋ ಹೆಸರು ಮಮ್ಮಿ ಜೊತೆಯಲ್ಲಿ ಆ ಚಿತ್ರದಲ್ಲಿ ಕುಳಿತಿದ್ದ ಮನುಷ್ಯನದು. ಅದೇ ನಾನೂ ಹೇಳುತ್ತಿದ್ದು, 'ಪಪ್ಪ'

ಅನ್ನೊ ಹೆಸರನ್ನು ಎಲ್ಲೋ ಕೇಳಿದ್ದೀನಿ ಅಂತ. ಎಲ್ಲಿ ಕೇಳಿದ್ದೆ ಅಂತ ನೆನಪಿಗೆ ಬರ್‍ತಿರಲಿಲ್ಲ. ಈಗ ನೆನಪಾಯಿತು. ಮಮ್ಮಿನೇ ಆ ಮನುಷ್ಯನ ಬಗ್ಗೆ ಹೇಳಿದ್ದಳು, ಅವರು ‘ಪಪ್ಪ’ ಅಂತ.

ಆದರೆ ನಾನು ಆ ‘ಪಪ್ಪ’ನನ್ನು ಯಾವಾಗಲೂ ನೋಡಿಲ್ಲ. ಅವ ಎಲ್ಲಿಗೆ ಹೋಗಿದ್ದಾನೆ? ಇಲ್ಲಿಗೆ ಯಾಕೆ ಬರೋಲ್ಲ? ಅವ ಚಿತ್ರದಲ್ಲೇ ಎಷ್ಟು ಚೆನ್ನಾಗಿ ಕಾಣುಸ್ತಾನೆ, ಅಂಮ್ಯೇಲೆ ನಿಜವಾಗೂ ಬಹಳ ಚೆನ್ನಾಗಿ ಕಾಣುಸ್ತಿರಬೇಕು. ಮತ್ತೆ ಆಂಟಿ ಈ ಕೆಟ್ಟದಾಗಿರೊ ಮನುಷ್ಯನ್ನ ‘ಪಪ್ಪ’ ಅಂತ ಕರೆಯಲಿಕ್ಕೆ ಯಾಕೆ ನನಗೆ ತೊಂದರೆ ಕೊಡ್ತಾಳೆ. ನಾನಂತು ಎಂದಿಗೂ ಇವನ್ನ ‘ಪಪ್ಪ’ ಅಂತ ಹೇಳಲ್ಲ. ನನ್ನ ಪಪ್ಪ ಅವನೇ ಮಮ್ಮಿ ಜೊತೇಲಿ ಆ ಚಿತ್ರದಲ್ಲಿ ಕುಳಿತಿರೋನು.

ಅವ ನನ್ನ ಹತ್ರ ಯಾಕೆ ಬರೋಲ್ಲ? ಬಹುಶಃ ಈ ಕೆಟ್ಟ ಪಪ್ಪನಂಗೆ ನಾನೂ ಕೂಡ ತೊಂದರೆ ಕೊಡ್ತೀನಿ ಅಂತ ಹೆದರಿಕೆ ಇರ್ಬೋದು. ಆದರೆ ಹಾಗೆ ಮಾಡೋದೆ ಇಲ್ಲ. ಅವ ನನ್ನ ಹತ್ರ ಬಂದ್ರೆ ನಾನು ಅವ್ರನ್ನ ಬಾಳ ಪ್ರೀತಿಸ್ತೀನಿ. ಯಾವಾಗ್ಲೂ ಜಗಳ ಆಡಲ್ಲ. ಅವನು ಹೇಗೆ ಹೇಳಿದ್ರೆ ಹಾಗೆ ಮಾಡ್ತೀನಿ. ಆದರೆ ಅವ ಬರೋದಿಲ್ಲ ಯಾಕೆ?

*   *   *

ಬೆಳಗಿನಿಂದ ಆಂಟಿ ನನಗೆ ಅಲಂಕಾರ ಮಾಡ್ತಾ ಇದ್ದಾಳೆ. ಅವಳು ನನಗೆ ಚಿತ್ರ-ವಿಚಿತ್ರವಾದ ಬಣ್ಣ-ಬಣ್ಣದ ಬಟ್ಟೆಗಳನ್ನು ತೊಡುಸ್ತ ಇದ್ದಾಳೆ. ನನ್ನ ಕೂದಲನ್ನು ಒಂದು ಥರಾ ವಿಚಿತ್ರ ರೀತಿಯಲ್ಲಿ ಬಾಚಿ ಕಟ್ಟಿದ್ದಾಳೆ. ಮುಖದ ಮೇಲೆ ಕ್ರೀಮ್ ಪೌಡರ್ ಮೆತ್ತಿದ್ದಾಳೆ. ನನಗೆ ಬಾಳ ಚೆನ್ನಾಗಿ ಕಾಣುತ್ತಿದೆ, ಇದೆಲ್ಲ.

ಇವತ್ತು ಪಿಂಕಿನ ಕ್ಲಬ್‌ಗೆ ಕರೆದುಕೊಂಡು ಹೋಗೋಣ ಅಂತ ತಾತ ಇವತ್ತ ಬೆಳಿಗ್ಗೆ ಆಂಟಿಗೆ ಹೇಳುತ್ತಿದ್ದರು. ಯಾವುದೊ ‘ಷೊ-ಜೋ’ ಇದೆ. ಈಗಂತೂ ಆಂಟಿ ನನ್ನನ್ನು ಎಷ್ಟು (ಅಪೂರ್ವ) ವಿಚಿತ್ರವಾಗಿ ಮಾಡಿದ್ದಾಳೆ; ಹೇಳ್ತಿದ್ದಳು—‘ಥೇಟು ಮಾಲಗಾರ್ತಿ ಕಂಡಂಗೆ ಕಾಣ್ತಾಳೆ. ಮೊದಲ ಬಹುಮಾನ ಇವಳಿಗೇ ಪಪ್ಪ’ ಅಂತ.

ಲಾನ್‌ನಲ್ಲಿ ಬಿಸಿಲು ಚೆಲ್ಲಿದೆ. ಆಂಟಿ ಮೌನವಾಗಿ ಅಲ್ಲಿಗೆ ಬಂದಿದ್ದಾಳೆ, ಕ್ಯಾಮರಾ ತೆಗೆದುಕೊಂಡು. ನನಗೆ ಹೇಳ್ತಾಳೆ, ‘ಪಿಂಕಿ ಅಲ್ಲಿ ನಿಂತುಕೊ,....ಹೀಗೆ—ಈ ರೀತಿ....ಶಬ್ಬಾಸ್. ಈಗ ಸ್ವಲ್ಪ ನಕ್ಕುಬಿಡು ಜೋರಾಗಿ. ಸಾಕು!’ ಇದಾದ

ಮೇಲೆ ಚಿಟ್ಟುವಿನ ಶಬ್ದ ಕೇಳಿಸುತ್ತದೆ ಮತ್ತು ಆಂಟಿ ಓಡ್ತಾ ನನ್ನಹತ್ರ ಬರ್ತಾಳೆ. 'ಬಸ್, ಪಿಂಕಿ, ನೀನು ಈ ಕ್ಯಾಮರಾದೊಳಗೆ ಬಂದಿಯಾಗಬಿಟ್ಟೆ!'

ಹೋಗು! ಸುಳ್ಳುತಂದು! ಈ ಚಿಕ್ಕ ಡಬ್ಬೀಲಿ ನಾನೆಂಗೆ ಬಂದಿ ಆಗ್ತೀನಿ? ನಾನು ಇಲ್ಲಿ ನಿಂತಿದ್ದೀನಿ.

ಸಂಜೆ ತನಕ ಆಂಟಿ ನನ್ನನ್ನು ಈ ಕಡೆ ತೋರಿಸುತ್ತಿರುತ್ತಾಳೆ. ನೋಡು, ಇದೇ ನನಗೆ ಚೆನ್ನಾಗಿ ಕಾಣಲ್ಲ. ನಾನೇನು ಗೊಂಬೆನೆ ಎಲ್ಲ ಕಡೆ ತೋರಿಸಲಿಕ್ಕೆ?

ಹೊತ್ತಾಯ್ತು. ತ್ವರೆಮಾಡು....ತ್ವರೆಮಾಡು ಅಂತ ತಾತಾ ಒಂದೇ ಸಮನೆ ಕಿರುಚಾಡ್ತಾ ಇದ್ದಾರೆ.

ನೋಡಿ! ಈಗ ಆಂಟಿ ನನ್ನನ್ನು ಕರ್ಕೊಂಡು ಬಾಗಿಲಿನಿಂದ ಹೊರಗೆ ಬಂದಿದ್ದಾಳೆ. ಕಾರು ಹೊರಗಡೆ ನಿಂತಿದೆ. ತಾತ ಮುಂದೆ ಕೂತಿದ್ದಾರೆ ಮತ್ತು ಒಂದು ಗುಂಡು ಗುಂಡಾಗಿರುವ ಗಾಲಿಯಂತಿರುವ ತಿರುಗುವ ವಸ್ತುವಿನ ಮೇಲೆ ಕೈಗಳನ್ನಿಟ್ಟಿದ್ದಾರೆ. ಆಂಟಿ ನನ್ನ ಜೊತೆ ಹಿಂದುಗಡೆ ಕೂತುಕೊಳ್ಳುತ್ತಾಳೆ. ಕಾರು ಹೊರಡಲಾರಂಭಿಸುತ್ತದೆ ಘರ್ರ್....ರ್ರ್....ರ್ರ್.

* * *

ಎಷ್ಟೊಂದು ದೊಡ್ಡದೊಡ್ಡ ಬಿಲ್ಡಿಂಗ್‌ಗಳು. ಎಂಥ ಶಬ್ದ ಆಗುತ್ತಿದೆ. ಈ ಗಾಡಿ ಯಾಕೆ ನಿಂತಿದೆ? ಇದನ್ನು ಯಾಕೆ ತೆರೆಯುತ್ತಿಲ್ಲ? ಇಲ್ಲಿ ಎಷ್ಟೊಂದು ಮಕ್ಕಳಿದ್ದಾರೆ? ಎಂಥೆಂಥ ವಿಚಿತ್ರವಾದ ಅದ್ಭುತವಾದ ಬಟ್ಟೆಗಳನ್ನು ತೊಟ್ಟಿದ್ದಾರೆ. ಈ ಹುಡುಗನಂತೂ ಬಾಳ ಕೊಳಕಾಗಿದ್ದಾನೆ. ಎಂತ ಕೊಳಕು ಕೊಳಕಾದ ಬಟ್ಟೆಗಳನ್ನು ತೊಟ್ಟಿದ್ದಾನೆ. ತೀರಾ ಭಿಕಾರಿ ಕಂಡಂಗೆ ಕಾಣ್ತಾನೆ. ಹೇಗೆ ಪಿಳಿಪಿಳಿ ಅಂತ ನನ್ನ ಕಡೆ ನೋಡ್ತಾ ಇದ್ದಾನೆ. ಸುಂದರವಾದ ಬಟ್ಟೆ ತೊಟ್ಟುಕೊಂಡು ತಲೆ ಬಾಚಿಕೊಂಡರೆ ಎಷ್ಟೊಂದು ಚೆನ್ನಾಗಿ ಕಾಣ್ಬೋದು.

'ಏ....ಏ....ಇಲ್ಲಿ ಬಾ.' ನಾನು ಅವನನ್ನು ನನ್ನ ಹತ್ರ ಕರೆದೆ.

ಅವನ ಕಣ್ಣುಗಳು ನನ್ನನ್ನು ನೋಡಿ ಮಿನುಗತೊಡಗುತ್ತವೆ ಮತ್ತು ಅವನು ಓಡೋಡಿ ನನ್ನ ಹತ್ತಿರ ಬರುತ್ತಾನೆ.

'ನಿನ್ನ ಹೆಸರೇನು?'

'ಮುನ್ನಾ.'

'ವಾಹ್! ನಿನ್ನ ಹೆಸರು ತುಂಬಾ ಚೆನ್ನಾಗಿದೆ. ನನ್ನ ಹೆಸರು ಪಿಂಕಿ.'

'ನಿನ್ನ ಹೆಸರು ಹೆಚ್ಚು ಸುಂದರವಾಗಿದೆ.' ಅವನು ಹೇಳುತ್ತಾನೆ.

'ನೀನು ಭಿಕಾರಿಗಳಂತೆ ಯಾಕೆ ಕೊಳಕು ಬಟ್ಟೆ ತೊಟ್ಟಿದ್ದೀಯೆ?

'ಗೊತ್ತಿಲ್ಲ, ಮಮ್ಮಿ ಇವತ್ತು ಹೀಗೆ ಮಾಡಿದ್ದಾಳೆ ನನಗೆ.' ಅವನು ಹೇಳ್ತಾನೆ, ನೀನೂ ಕೂಡ ಎಂಥ ಕೊಳಕು ಬಟ್ಟೆ ತೊಟ್ಟಿದ್ದೀಯೆ?

'ಇಲ್ಲವಲ್ಲ!' ನಾನು ಹೇಳಿದ ನಂತರ ನನ್ನ ಬಟ್ಟೆಗಳನ್ನು ನೋಡಿಕೊಂಡು ನಾಚಿಕೊಳ್ಳುತ್ತೇನೆ, ಅರೆ ನಿಜವಾಗಿ! ಆಂಟಿ ಯಾಕೆ ನನ್ನನ್ನು ಮಾಲಗಾರ್ಣಿ ಮಾಡಿದಳೊ ಗೊತ್ತಿಲ್ಲ.'

'ನಿಮ್ಮ ಮಮ್ಮಿ ಎಲ್ಲಿದ್ದಾರೆ?'

'ಮಮ್ಮೀ! ಮಮ್ಮಿ ಇಲ್ಲ, ನನ್ನ ಆಂಟಿ ಕುಳಿತಿದ್ದಾಳೆ ಅಲ್ಲಿ ತಾತನ ಹತ್ರ?'

'ಮತ್ತೆ ಪಪ್ಪನೂ ಇರಬಹುದು?'

'ಪಪ್ಪ!' ನಾನು ಸಂಕೋಚಪಟ್ಟುಕೊಳ್ಳುತ್ತೇನೆ! ಪ....ಪ್ಪ....'

'ಏಕೆ, ಪಪ್ಪ ಬರಲಿಲ್ಲವೇನು?' ಅವನು ನನ್ನನ್ನು ಕೇಳುತ್ತಾನೆ.

'ಇಲ್ಲ' ನನಗೆ ಆ ಹುಡುಗನ ಮೇಲೆ ಕೋಪ ಬರುತ್ತದೆ. ಅವನು ಪಪ್ಪನ ವಿಷಯವನ್ನು ಇಲ್ಲಿ ಯಾಕೆ ಎತ್ತಿದ? ಈಗ ಅವನು ಖಂಡಿತವಾಗಿಯೂ ತನ್ನ ಪಪ್ಪನ ಬಗ್ಗೆ ಹೇಳುವನು.

'ಏಕೆ? ನಿಮ್ಮ ಪಪ್ಪ ಎಲ್ಲಿದ್ದಾರೆ?'

'ನನಗೆ ಗೊತ್ತಿಲ್ಲ.' ನಾನು ಹಿಂದಿರುಗತೊಡಗುತ್ತೇನೆ. 'ನಾನು ನಿನ್ನ ಜೊತೆ ಮಾತಾಡುವುದಿಲ್ಲ.'

ಮುನ್ನ ಚಕಿತಗೊಂಡು ನನ್ನ ಕಡೆ ನೋಡುತ್ತಾನೆ—'ಅರೆ! ನೀನು ಏಕೆ ಕೋಪಿಸಿಕೊಂಡೆ.' ಅವನು ನನ್ನನ್ನು ಸಮಾಧಾನಪಡಿಸತೊಡಗುತ್ತಾನೆ. ಮುನ್ನ ನಿಜವಾಗಿಯೂ ಬಹಳ ಒಳ್ಳೆಯವನು. ನಾನು ಪ್ರಸನ್ನಳಾಗುತ್ತೇನೆ ಮತ್ತು ಅವನ ಜೊತೆಯಲ್ಲಿ ಮಾತಿಗೆ ತೊಡಗುತ್ತೇನೆ.

ಆಗಲೇ ಯಾರೊ ರೇಡಿಯೋದಂಥ ಶಬ್ದದಲ್ಲಿ ಮಾತನಾಡತೊಡಗುತ್ತಾರೆ. ನಂತರ ಒಬ್ಬ ಮನುಷ್ಯ ಒಂದು ಮಗುವಿನ ಬೆರಳನ್ನು ಹಿಡಿದುಕೊಂಡು ವೇದಿಕೆಯ ಮೇಲೆ ಕರೆದುಕೊಂಡು ಹೋಗುತ್ತಾನೆ! ಆ ಮಗು ಸಿಪಾಯಿ ವೇಷ ಧರಿಸಿದೆ. ಅದನ್ನು ನೋಡುತ್ತಿದ್ದಂತೆಯೇ ಎಲ್ಲರೂ ಚಪ್ಪಾಳೆ ತಟ್ಟುತ್ತಾರೆ.

ಸರದಿಯ ಪ್ರಕಾರ ಎಲ್ಲರನ್ನೂ ಕೈಹಿಡಿದುಕೊಂಡು ಆ ಮನುಷ್ಯ ಅಲ್ಲಿಗೆ ಕರೆದುಕೊಂಡು ಹೋಗುತ್ತಾನೆ. ಮುನ್ನನನ್ನು ಕೂಡ ಕರೆದುಕೊಂಡು ಹೋಗುತ್ತಾನೆ, ನಂತರ ನನ್ನನ್ನೂ ಕರೆದುಕೊಂಡು ಹೋಗುತ್ತಾನೆ. ನಾನು ಅಲ್ಲಿಗೆ ಹೋಗಿ ನೋಡತೊಡಗುತ್ತೇನೆ—ಆಂಟಿ ಎಲ್ಲಿ ಕುಳಿತಿದ್ದಾಳೆ. ಸ್ವಲ್ಪ ಹೊತ್ತಿ

ನಲ್ಲಿಯೇ ಅವಳು ನನಗೆ ಕಾಣಿಸಿಬಿಡುತ್ತಾಳೆ. ಆಕೆ ನನ್ನನ್ನು ನೋಡಿ ಚಪ್ಪಾಳೆ ತಟ್ಟುತ್ತಿದ್ದಾಳೆ. ಎಲ್ಲ ಜನರೂ ಚಪ್ಪಾಳೆ ತಟ್ಟುತ್ತಿದ್ದಾರೆ. ನನ್ನನ್ನು ಕೇಳಕ್ಕೆ ಕಳುಹಿಸಲಾಗುತ್ತದೆ. ಆದರೆ ಜನರು ಚಪ್ಪಾಳೆ ತಟ್ಟುವುದನ್ನು ನಿಲ್ಲಿಸುವುದೇ ಇಲ್ಲ. ಎತ್ತೊಂದು ಶಬ್ದವಾಗುತ್ತಿದೆ!

ಆಂಟಿ ನನ್ನ ಹತ್ತಿರ ಬಂದುಬಿಟ್ಟಿದ್ದಾಳೆ. ನನ್ನನ್ನು ಮುದ್ದಿಸುತ್ತಿದ್ದಾಳೆ. ಯಾರೋ ರೇಡಿಯೋದಂತೆ ಶಬ್ದದಲ್ಲಿ ಮಾತಾಡುತ್ತಾರೆ. ಏನೇನು ಮಾತನಾಡುತ್ತಾನೆಯೋ ಗೊತ್ತಿಲ್ಲ, ಆದರೆ ನನಗೆ ಇಷ್ಟು ಮಾತ್ರ ಕೇಳಿಸುತ್ತದೆ: 'ಪಿಂಕಿ.... ಮೊದಲ ಬಹುಮಾನ.' ಪುನಃ ಚಪ್ಪಾಳೆಯನ್ನು ತಟ್ಟುತ್ತಾರೆ. ಆಂಟಿ ನನ್ನನ್ನು ತಾತನ ಬಳಿ ಕರೆದುಕೊಂಡು ಹೋಗುತ್ತಾಳೆ—'ಪಪ್ಪ....ಪಪ್ಪ....ನಾನು ಹೇಳಲಿಲ್ಲವೆ, ಪಿಂಕಿಗೆ ಮೊದಲ ಬಹುಮಾನ ಅಂತ.' ತಾತ ನಗುತ್ತ ನನ್ನನ್ನು ತಮ್ಮ ಮಡಿಲಲ್ಲಿ ತುಂಬಿಕೊಂಡು ಮುದ್ದಿಸುತ್ತಾರೆ.

ಎದುರುಗಡೆಯಿಂದ ಮುನ್ನ ನಡೆದು ಬರುತ್ತಿದ್ದಾನೆ. ಆದರೆ ಈತ ಯಾವ ಮನುಷ್ಯನ ಬೆರಳನ್ನು ಹಿಡಿದುಕೊಂಡಿದ್ದಾನೆ. ಅವನ ಜೊತೆಯಲ್ಲಿ ಒಬ್ಬ ಹೆಂಗಸೂ ಇದ್ದಾಳೆ. ಮುನ್ನ ಬಹಳ ಖುಶಿಯಾಗಿದ್ದಾನೆ. ಅವನಿಗೂ ಒಂದು ಇನಾಮು ಸಿಕ್ಕಿರುವಂತಿದೆ. ನಿಜವಾಗಿಯೂ ಮತ್ತೊಂದು ಸಂತೋಷದ ವಿಷಯ—ನನಗೂ ಬಹುಮಾನ ಸಿಕ್ಕಿದೆ, ಮುನ್ನಾಗೂ ಇನಾಮು ಸಿಕ್ಕಿದೆ.

'ಪಿಂಕಿ, ಪಿಂಕಿ, ನಿನಗೆ ಮೊದಲ ಬಹುಮಾನ ಸಿಕ್ಕಿತು. ಆನಂದವಾಯಿತು.'

'ನಿನಗೆ ಯಾವುದೂ ಇನಾಮು ಸಿಗಲಿಲ್ಲವೆ?'

'ನನಗೆ ಮೂರನೇ ಇನಾಮು ಸಿಕ್ಕಿದೆ. ಆದರೆ ಇದರಿಂದ ಏನು? ಮೊದಲನೆಯದು ನಿನಗೇ ಸಿಕ್ಕಿದೆಯಲ್ಲ!' ಮುನ್ನ ನನಗಿಂತ ದೊಡ್ಡವನು. ಆದರೆ ಎತ್ತೊಂದು ಮುದ್ದಾಗಿ ಮಾತಾಡುತ್ತಾನೆ.

'ಮುನ್ನ, ಇವರು ಯಾರು?'

'ಆರೆ, ಇವರು ಗೊತ್ತಿಲ್ಲ?' ಮುನ್ನ ನಗುತ್ತಾನೆ ನಂತರ ಹೆಂಗಸಿನ ಕಡೆ ಸನ್ನೆ ಮಾಡುತ್ತ 'ಇವರು ನನ್ನ ಮಮ್ಮಿ ಮತ್ತು ಇವರು ನನ್ನ ಪಪ್ಪ!' ಎಂದು ಹೇಳುತ್ತಾನೆ.

ಎರಡನೆಯ ಬಾರಿಯ ಸನ್ನೆ ಆ ಮನುಷ್ಯನ ಕಡೆಗಿತ್ತು. ಹಾಗೋ! ಹಾಗಾದರೆ ಇವರೇ ಇವನ ಪಪ್ಪ. ಇವನ ಮಮ್ಮಿಯೂ ಜೊತೆಯಲ್ಲಿ, ಅದಕ್ಕೇ ಇವನು ಪದೇ ಪದೇ ನನ್ನ ಪಪ್ಪನ ಬಗ್ಗೆ ಕೇಳುತ್ತಿದ್ದ?

'ಹಲ್ಲೋ ಬೇಬಿ!' ಮುನ್ನಾನ ತಂದೆ ಹಾಗೆ ಹೇಳುತ್ತ ನನ್ನನ್ನು

ಎತ್ತಿಕೊಳ್ಳತೊಡಗುತ್ತಾನೆ. ನನಗೆ ಇದು ಚೆನ್ನಾಗಿ ಕಾಣುವುದಿಲ್ಲ. ನಾನು ಅವನ ಮಡಿಲಿಂದ ಜಾರಿಕೊಂಡು ಕೆಳಕ್ಕೆ ಬಂದುಬಿಡುತ್ತೇನೆ.

ಮುನ್ನಾನ ಮಮ್ಮಿ ಪಪ್ಪ ನಗತೊಡಗುತ್ತಾರೆ. ತಾತ ಮತ್ತು ಆಂಟಿ ಕೂಡ ನಗುತ್ತಾರೆ. ನಂತರ ಅವರಲ್ಲಿ ಪರಸ್ಪರ ಮಾತುಕತೆ ನಡೆಯುತ್ತದೆ. ನಾನು ಮೌನವಾಗಿ ಬೇರೆ ಕಡೆಗೆ ಜಾರಿಕೊಂಡು ಬರುತ್ತೇನೆ. ಮುನ್ನಾ ಕೂಡ ನನ್ನ ಹತ್ತಿರ ಬರುತ್ತಾನೆ.

‘ನೀನು ನನ್ನ ಆಂಟಿಯನ್ನು ನೋಡಿದೆಯಾ?’ ನಾನು ಮುನ್ನಾನನ್ನು ಕೇಳುತ್ತೇನೆ.

‘ಹೌದು, ನಿನ್ನ ಆಂಟಿ ಬಹಳ ಒಳ್ಳೆಯವರು.’ ಮುನ್ನಾ ಕೇಳುತ್ತಾನೆ, ಆದರೆ ನಿನ್ನ ಆಂಟಿ ಜೊತೆಯಲ್ಲಿರುವ ಆ ಇನ್ನೊಬ್ಬರು ಯಾರು?

‘ಅವರಾ! ಅರೇ ಅವರು ನನ್ನ ಅಜ್ಜ.’ ನಾನು ಸಂತೋಷಗೊಂಡು ಹೇಳುತ್ತೇನೆ.

ಆಗಲೇ ಏನೊ ಗೊಂದಲ ಆಗಿದೆ ಅಂತ ನನಗೆ ಅನ್ನಿಸುತ್ತೆ. ಮುನ್ನಾ ಜೊತೆಯಲ್ಲಿ ಅವನ ಮಮ್ಮಿ ಪಪ್ಪ ಇದ್ದಾರೆ ಮತ್ತು ಎಲ್ಲ ಮಕ್ಕಳ ಜೊತೆಯಲ್ಲೂ ಅವರವರ ಮಮ್ಮಿ ಪಪ್ಪ ಇದ್ದಾರೆ.

ಮಮ್ಮಿ ಈಗ ಕೆಟ್ಟುಹೋಗಿದ್ದಾಳೆ, ಆದರೆ ನನ್ನ ಪಪ್ಪ ಇಲ್ಲಿಗೆ ಯಾಕೆ ಬರಲಿಲ್ಲ? ‘ಆ ಚಿತ್ರದಲ್ಲಿದ್ದ ಪಪ್ಪ’ ನನ್ನ ಜೊತೆ ಇಲ್ಲಿಗೆ ಬಂದಿದ್ದರೆ ಎಷ್ಟೊಂದು ಚೆನ್ನಾಗಿರುತ್ತಿತ್ತು!

‘ಮುನ್ನಾ, ನಿನ್ನ ಪಪ್ಪ ಎಲ್ಲಿಂದ ಬಂದ್ರು?’ ನಾನು ಕೇಳ್ತೀನಿ.

‘ನನ್ನ ಪಪ್ಪ!’ ಮುನ್ನ ಮುಖವನ್ನು ಸೊಟ್ಟಗೆ ಮಾಡುತ್ತಾನೆ, ಗದ್ದದ ಮೇಲೆ ಬೆರಳನ್ನಿಟ್ಟುಕೊಳ್ಳುತ್ತಾನೆ ಮತ್ತು ಕಣ್ಣು ಮುಚ್ಚಿಕೊಂಡು ಚಿಂತಿಸ ತೊಡಗುತ್ತಾನೆ. ನನಗೆ ಗೊತ್ತು, ಮುನ್ನ ಯಾವುದೊ ಆಳವಾದ ವಿಷಯ ಕುರಿತು ಚಿಂತಿಸುತ್ತಿರಬಹುದು.

‘ದೇವರ ಊರಿಂದ ಬಂದಿರಬಹುದು.’ ಮುನ್ನ ಹೇಳ್ತನೆ, ‘ಮಮ್ಮಿ ಹೇಳ್ತಾಳೆ, ನಾವೆಲ್ಲ ದೇವರ ಊರಿಂದ ಬಂದಿದ್ದೀವಿ’ ಅಂತ.

ಮುನ್ನ ವಿಷಯವನ್ನು ಸರಿಯಾಗಿ ಹೇಳುತ್ತಾನೆ. ಒಂದು ಸಾರಿ ಆಂಟಿನೂ ಹೇಳ್ತಾ ಇದ್ದಳು. ಎಲ್ಲರೂ ದೇವರ ಊರಿಂದ ಬರ್ತಾರೆ ಅಂತ.

‘ಸರಿ, ನನ್ನ ಪಪ್ಪ ದೇವರ ಊರಿಂದ ಯಾಕೆ ಬರಲ್ಲ?’ ನಾನು ಅವನನ್ನು ಕೇಳುತ್ತೇನೆ.

ಯಾರಿಗೆ ಗೊತ್ತು! ನಿನ್ನ ಜೊತೆಗೆ ಏನಾದರೂ ಸಿಟ್ಟುಗೊಂಡಿಲ್ಲ ತಾನೆ?

‘ ಯಾಕೆ, ಸಿಟ್ಟು ಯಾಕೆ ಆಗುತ್ತೆ? ’

‘ ನೀನು ಏನಾದರೂ ತುಂಟಾಟ ಮಾಡಿದ್ರೆ ಸಿಟ್ಟುಗೊಂಡಿರಬಹುದು.’

‘ ತುಂಟತನ ನಾನು ಯಾವಾಗ್ಲೂ ಮಾಡೋದೇ ಇಲ್ಲ. ಆದರೆ ಆಂಟಿ ಯಾಕೆ ಹೇಳ್ತಾಳೆ ಇವಳು ತುಂಬ ತುಂಟ ಹುಡುಗಿ ಅಂತ. ಖಂಡಿತವಾಗೂ ಈ ಕಾರಣದಿಂದಲೇ ಪಪ್ಪ ಬರ್ತಾ ಇರ್ಲಿಕ್ಕಿಲ್ಲ.

‘ ನಡಿ, ಪಿಂಕಿ ಮನೆಗೆ ಹೋಗೋಣ. ಬಹಳ ಹೊತ್ತಾಯ್ತು.’ ಆಂಟಿ ಬಂದು ನನಗೆ ಹೇಳ್ತಾಳೆ. ನಾನು ನಿರುಪಾಯಳಾಗಿ ಮುನ್ನ ಕಡೆ ನೋಡ್ತೀನಿ. ಅವನಿಗೂ ನಾನು ಹೋಗುವುದು ಇಷ್ಟವಿಲ್ಲ ಅಂತ ಕಾಣುತ್ತೆ.

‘ ಪಿಂಕೀ! ಬಾಯ್ ಬಾಯ್.’

ಸಾಕಷ್ಟು ದೂರ ಹೊರಟು ಬಂದ ಮೇಲೆ ಮುನ್ನ ಕೈ ಬೀಸುತ್ತಾನೆ. ನಾನು ಕೂಡ ‘ ಬಾಯ್‌ಬಾಯ್ ’ ಮಾಡುತ್ತೇನೆ.

* * *

‘ ನನ್ನ ಪಪ್ಪ ಎಲ್ಲಿದ್ದಾರೆ, ಆಂಟಿ ? ’ ನಾನು ಕೇಳುತ್ತೇನೆ.

‘ ಪಪ್ಪ!’ ಆಂಟಿ ಬೆಚ್ಚಿಬಿದ್ದಿದ್ದಾಳೆ, ‘ ನಿನ್ನ ಪಪ್ಪ ನಿನ್ನ ಮಮ್ಮಿ ಜೊತೆ ಶಿಮ್ಲಾಕ್ಕೆ ಹೋಗಿದ್ದಾರೆ. ಅವರ ಕಾಗದ ಬಂದಿದೆ. ನಿನ್ನನ್ನು ಬಹಳ ನೆನೆಸಿ ಕೊಳ್ಳುತ್ತಿದ್ದರು.!’

‘ ಊಹೂಂ! ಆ ‘ ಕೆಟ್ಟ ಮನುಷ್ಯ’ ನನ್ನ ಪಪ್ಪ ಅಲ್ಲ. ಆ ಚಿತ್ರದಲ್ಲಿರುವ ಪಪ್ಪ....’

ಆ ಕೂಡಲೇ ಘಟೀರೆಂದು ನನ್ನ ಕೆನ್ನೆಯ ಮೇಲೆ ಏಟು ಬೀಳುತ್ತದೆ. ನಾನು ದಂಗಾಗಿದ್ದೇನೆ. ಆಂಟಿಗೆ ಇದೇನಾಯ್ತು? ನನ್ನ ಕಣ್ಣುಗಳಿಂದ ನೀರು ಸುರಿಯುತ್ತಿದೆ, ಆಂಟಿಯ ಶಬ್ದ ನನ್ನ ಕಿವಿಯಲ್ಲಿ ಕೇಳಿಸುತ್ತಿದೆ, ‘ ತನ್ನ ಪಪ್ಪನನ್ನು ಕೆಟ್ಟ ಮನುಷ್ಯನೆಂದು ಹೇಳುತ್ತೀಯಾ.’

‘ ಅವ ನನ್ನ ಪಪ್ಪ ಅಲ್ಲ....ಅವ ನನ್ನ ಪಪ್ಪ ಅಲ್ಲ.’ ನಾನು ಅಳ್ತ ಅಳ್ತಾನೇ ಜೋರಾಗಿ ಕಿರುಚತೊಡಗುತ್ತೇನೆ....ಹಠ ಮಾಡುತ್ತ. ಈಗ ಆಂಟಿ ನನಗೆ ತುಂಬ ಹೊಡೀತಾಳೆ ಅಂತ ಯೋಚಿಸ್ತೀನಿ. ಆದರೆ ತುಂಬ ಹೊತ್ತಿನ ತನಕ ಏನೂ ಆಗುವುದಿಲ್ಲ. ನಾನು ಅಂಜುತ್ತ ಅಂಜುತ್ತ ಆಂಟಿ ಕಡೆ ನೋಡ್ತೀನಿ.

ಅರೆ! ಆಂಟಿನೂ ಅಳ್ತಾ ಇದ್ದಾಳೆ. ಅವಳ ಕಣ್ಣುಗಳಿಂದಲೂ ನೀರು ಸುರಿಯುತ್ತಿದೆ. ನಾನು ಆಂಟಿಯ ಮಾತನ್ನು ಒಪ್ಪಲಿಲ್ಲವಲ್ಲ? ಅದಕ್ಕೆ ಆಂಟಿ ಅಳುತ್ತಿದ್ದಾಳೆ.

'ಆಂಟಿ ! ಆಂಟಿ ! ಅಳಬೇಡ. ನಾವು ಪಪ್ಪನನ್ನು ಕೆಟ್ಟ ಮನುಷ್ಯ ಎಂದು ಹೇಳುವುದಿಲ್ಲ. ನೀನು ಅಳಬೇಡ.'

ಆಂಟಿ ಇನ್ನೂ ಜೋರಾಗಿ ಅಳತೊಡಗುತ್ತಾಳೆ. ನಂತರ ಓಡಿ ಬಂದು ನನ್ನನ್ನು ಬಾಚಿ ತಬ್ಬಿಕೊಂಡು ಮುದ್ದಿಸತೊಡಗುತ್ತಾಳೆ. ನೋಡ್ರಾ! ಆಂಟಿ ಖುಶಿಪಟ್ಟಿಲ್ಲ! ಆದರೆ ಆಂಟಿ ಅಳುವುದನ್ನು ಯಾಕೆ ನಿಲ್ಲಿಸುವುದಿಲ್ಲ? ವಿಚಿತ್ರ.

* * *

ಸುತ್ತಲೂ ಎತ್ತೆಷ್ಟೊಂದು ಸುಂದರವಾದ ಮಕ್ಕಳು ಕಾಣಿಸುತ್ತಿದ್ದಾರೆ. ಕೆಲವರು ನಗುತ್ತಿದ್ದಾರೆ, ಕೆಲವರು ಓಡುತ್ತಿದ್ದಾರೆ. ಕೆಲವರು ಶಬ್ದ ಮಾಡುತ್ತಿದ್ದಾರೆ. ನನಗೆ ಇದೆಲ್ಲ ಚೆನ್ನಾಗಿ ಕಾಣ್ತಿಲ್ಲ. ನನಗೆ ಆಂಟಿ ನೆನಪಿಗೆ ಬರುತ್ತಿದ್ದಾಳೆ.

ಗಂಟೆ ಬಾರಿಸುತ್ತಿದೆ. ಈಗ ಏನಾಗಬಹುದು? ಎಲ್ಲ ಮಕ್ಕಳೂ ಒಳಕ್ಕೆ ಓಡುತ್ತಿದ್ದಾರೆ. ಅಲ್ಲಿ ನೋಡು ಆಂಟಿಯು ಮೇಡಂ ಬರುತ್ತಿದ್ದಾರೆ. ಆಂಟಿ ಇವರೊಂದಿಗೆ ಬಾಳ ಹೊತ್ತಿನಿಂದ ಮಾತಾಡ್ತಿದ್ಲು, ನಂತರ ನನಗೆ ಹೇಳಿದ್ಲು; 'ಪಿಂಕಿ! ಇವರು ನಿನ್ನ ಮೇಡಂ ಇವರ ಜೊತೇಲೇ ಇರ್ಬೇಕು, ಇವರು ಹೇಳಿದ ಹಾಗೆ ಮಾಡಬೇಕು' ಅಂತ.

'ನಡಿ, ಪಿಂಕಿ, ಕ್ಲಾಸಿಗೆ ನಡೆ.' ಮೇಡಂ ಹೇಳ್ತಾರೆ.

ನಾನು ಅವರ ಜೊತೆ ಜೊತೆಗೆ ನಡೆಯತೊಡಗುತ್ತೇನೆ.

ಮೇಡಂ ನನ್ನನ್ನು ಎಲ್ಲರಿಗಿಂತ ಮುಂದಿನ ಸೀಟಿನಲ್ಲಿ ಕೂರಿಸುತ್ತಾರೆ.

ಮೇಡಂ ಪಾಠ ಓದಿಸುತ್ತಿದ್ದಾರೆ.

'ಮಕ್ಕಳೆ! 'ಕ' ಇಂದ ಕರಡಿ ಆಗುತ್ತದೆ. 'ಕ' ಇಂದ, ಮಕ್ಕಳೆ ಏನಾಗುತ್ತದೆ?'

'ಕರಡಿ.'—ಎಲ್ಲ ಮಕ್ಕಳ ಜೊತೆಯಲ್ಲಿ ನಾನೂ ಹೇಳುತ್ತೇನೆ.

'ಖ ಇಂದ ಖಡ್ಗ ಆಗುತ್ತದೆ. ಖ ಇಂದ ಏನಾಗುತ್ತದೆ?'

'ಖಡ್ಗ.'

ನನ್ನ ಮನಸ್ಸಿಗೆ ಹಿಡಿಸುತ್ತಿರಲಿಲ್ಲ. ಆಂಟಿ ಎಂಥ ಜಾಗಕ್ಕೆ ಕಳುಹಿಬಿಟ್ಟಳು. ಇಲ್ಲಿ ನನಗೆ ಯಾರೂ ಸ್ನೇಹಿತರಿಲ್ಲ. ಮುನ್ನ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಆ ದಿನ ಎತ್ತೆಷ್ಟೊಂದು ಒಳ್ಳೊಳ್ಳೆ ಮಾತುಗಳನ್ನು ಆಡುತ್ತಿದ್ದ. ಆ ದಿನ ಆಂಟಿ ಸುಮ್ಮಸುಮ್ಮನೆ ವ್ಯರ್ಥವಾಗಿ ಕರೆದುಕೊಂಡು ಹೋದಳು. ಇಲ್ಲದೇ ಇದ್ದರೆ ಅವನ ಜೊತೇಲಿ ಮಾತಾಡ್ತಿದ್ರೆ ತುಂಬ ಆನಂದವಾಗುತ್ತಿತ್ತು.

ಆಂಟಿ ಈಗ ಏನು ಮಾಡುತ್ತಿರಬಹುದು? ಪಪ್ಪಿಗೆ—ಮಮ್ಮಿಯು ಆ ಆಟಿಕೆಯ ಹೆಸರು ಇದೇ ಎಂದು ಆಂಟಿ ಆ ದಿನ ಹೇಳುತ್ತಿದ್ದಳು—ಸ್ಕೂಟರ್ ಹೊಡೀತಿರಬೋದು. ಕೆಲಸ ಏನೂ ಇಲ್ದೇ ಇದ್ದಾಗ ಅವಳು ಈ ಕೆಲ್ಸಾನೇ ಮಾಡೋದು. ಆ ಆಟಿಕೆ ನಿನ್ನ ತಮ್ಮ ಅಂತ ಆ ದಿನ ಆಂಟಿ ಹೇಳುತ್ತಾ ಇದ್ದಳು. ಅವನು ನನ್ನ ತಮ್ಮ ಆದ ಮೇಲೆ ಅವನ ಜೊತೆ ಆಡಲಿಕ್ಕೆ ಮಮ್ಮಿ ಯಾಕೆ ಬಿಡೋಲ್ಲ? ಆ ದಿನ ಸ್ವಲ್ಪ ಮುಟ್ಟಿದ್ದಕ್ಕೆ ಮಮ್ಮಿ ಹೊಡೆಯ ತೊಡಗಿದಳು. ಒಳ್ಳೇದು. ಆ ಚಿತ್ರದಲ್ಲಿನ ಪಪ್ಪ ಈಗ ಎಲ್ಲಿ ಇರಬಹುದು? ಮಮ್ಮಿ ಹೇಳ್ತಿದ್ಳು, ಅವನು ದೇವರ ಊರಲ್ಲಿ ಇರಬಹುದು ಅಂತ. ದೇವರು ಅವರನ್ನು ನನ್ನ ಹತ್ತಿರ ಯಾಕೆ ಕಳುಹಿಸುವುದಿಲ್ಲ.

'ಪ ಇಂದ ಏನಾಗುತ್ತದೆ ಮಕ್ಕಳಾ?'

'ಪ ಇಂದ ಪಪ್ಪ.' ನಾನು ಜೋರಾಗಿ ಕಿರುಚುತ್ತೇನೆ. ನನ್ನ ಶಬ್ದ ತೀಕ್ಷ್ಣವಾಗಿದೆ. ಮೇಡಂ ತನಕ ತಲುಪಿಬಿಟ್ಟಿದೆ. ಮೇಡಂ ನನ್ನನ್ನು ದುರುಗುಟ್ಟಿಕೊಂಡು ನೋಡುತ್ತಿದ್ದಾರೆ. ಮಕ್ಕಳು ಕೂಡ ನನ್ನನ್ನು ನೋಡುತ್ತಿದ್ದಾರೆ. ಏನು ವಿಷಯ? ಏನೋ ಅನ್ಯಾಯ ಆಗಿರುವಂತೆ ಕಾಣುತ್ತೆ. 'ಪ' ಇಂದ ಪಪ್ಪ ಆಗದಿರಬಹುದು.

'ಪಿಂಕಿ! ನಿನ್ನ ಗಮನ ಎಲ್ಲಿತ್ತು?' ಮೇಡಂ ಕೇಳುತ್ತಾರೆ. ಭಯದಿಂದಾಗಿ ನನ್ನ ಬಾಯಿಂದ ಒಂದು ಶಬ್ದವೂ ಹೊರಡುವುದಿಲ್ಲ.

'ಪಿಂಕಾ! ನೀನು ಹೇಳು 'ಪ' ಇಂದ ಈಗತಾನೆ ಏನಾಗುತ್ತೆ ಅಂತ ನಾನು ಹೇಳಿದ್ದೆ?'

''ಪ' ಇಂದ ಪತಂಗ, ಮೇಡಂ.'

'ಶಬ್ಬಾಷ್! ಒಳ್ಳೆಯದು, ಪಿಂಕಿ, 'ಪ' ಇಂದ ಏನಾಗುತ್ತದೆ?'

'ಪತಂಗ.'

'ಸರಿ! ಈಗ ನಿನ್ನ ಮನಸ್ಸನ್ನು ಓದುವ ಕಡೆ ಕೊಡು!' ಮೇಡಂ ಹೇಳುತ್ತಾರೆ, ಪುನಃ ಓದಿಸತೊಡಗುತ್ತಾರೆ, 'ಫ' ಇಂದ ಫಲ ಆಗುತ್ತದೆ. ಫ ಇಂದ ಏನಾಗುತ್ತದೆ, ಮಕ್ಕಳೇ?'

* * *

'ಅಹಾ! ನಮ್ಮ ಪಿಂಕಿ ರಾಣಿ ಓದುತ್ತಿದ್ದಾಳೆ!'

ದೂರದಿಂದ ತಾತನ ಜೊತೆಯಲ್ಲಿ ಬರುತ್ತಿರುವ ಆಂಟಿ ಹೇಳುತ್ತಿದ್ದಾಳೆ. ಆಕೆ ಬಾಳ ಸಂತೋಷದಿಂದಿದ್ದಾಳೆ, ನೋಡ್ತಾ ಇರು, ಪಪ್ಪ! ಪಿಂಕಿ ಡಾಕ್ಟರ್

ಆಗುತ್ತಾಳೆ, ಡಾಕ್ಟರ್.'

'ಹೌದು. ಆಗ ಯಾರನ್ನೂ ಅಕಾಲದಲ್ಲಿ ಸಾಯುವುದಕ್ಕೆ ಬಿಡುವುದಿಲ್ಲ.'

ಆಂಟಿಯ ಮುಖ ಬಿಳುಚಿಕೊಂಡುಬಿಡುತ್ತದೆ.

ಆಂಟಿ ಮತ್ತು ತಾತ ಪರಸ್ಪರ ಏನೇನು ಮಾತಾಡಿಕೊಳ್ಳುತ್ತಿದ್ದಾರೆ, ನನಗೆ ಒಂದೂ ತಿಳಿಯುವುದಿಲ್ಲ.

'ಪಪ್ಪ, ಈ ಆ ಕಥೆಯನ್ನು ನಾನು ಮರೆತು ಬಿಡು.' ಆಂಟಿ ಇದ್ದಕ್ಕಿದ್ದಂತೆ ಜೋರಾಗಿ ಕಿರುಚುತ್ತ ಹೇಳುತ್ತಾಳೆ. ನಾನು ಹೆದರಿಕೊಂಡುಬಿಡುತ್ತೇನೆ. ಆಂಟಿಗೆ ಇದೇನಾಯಿತು! ಆಂಟಿಗೆ ಇಷ್ಟೊಂದು ಕೋಪ ಎಂದೂ ಬಂದಿಲ್ಲ. ನಾನು ಆಂಟಿ ಕಡೆ ನೋಡುವುದನ್ನು ನಿಲ್ಲಿಸಿಬಿಡುತ್ತೇನೆ ಮತ್ತು ಸ್ಲೇಟಿನ ಮೇಲೆ ಪುನಃ ಬರೆಯತೊಡಗುತ್ತೇನೆ.

ಆಂಟಿ ನನ್ನ ಹತ್ತಿರ ಬರುತ್ತಾಳೆ. ಪಿಂಕಿ ರಾಣಿ ಏನು ಓದುತ್ತಿದ್ದಾಳೆ. ಸ್ವಲ್ಪ ನೋಡೋಣ ತಡಿ?

ಇತ್ತ್ರೊಂದು ಕತ್ರಪತ್ರ ಮೇಲೆ ಈಗ ಬರೆಯಬಲ್ಲೆ—ಪ ಇಂದ ಪಪ್ಪ.

ಆ ಕೂಡಲೆ ನನಗೆ ಮೇಡಂ ನೆನಪಿಗೆ ಬರುತ್ತಾರೆ. ಭಯದಿಂದ ನಾನು ಬರೆದಿರುವುದನ್ನು ಕೈಯಿಂದ ಅಳಿಸತೊಡಗುತ್ತೇನೆ. ಆಂಟಿ ನನ್ನ ಕೈಯನ್ನು ಹಿಡಿದುಕೊಳ್ಳುತ್ತಾಳೆ; 'ಇದನ್ನು ಏಕೆ ಅಳಿಸುತ್ತೀಯೆ, ಪಿಂಕಿ?'

'ಆಂಟೀ! ಮೇಡಂ ಹೇಳ್ತಾರೆ' 'ಪ ಇಂದ ಪತಂಗ ಆಗುತ್ತದೆ....ಪ ಇಂದ ಪಪ್ಪ ಆಗುವುದಿಲ್ಲ' ಅಂತ.'

'ಇಲ್ಲ, ಪಿಂಕಿ! ಮೇಡಂ ಸುಳ್ಳು ಹೇಳುತ್ತಾರೆ. ಪ ಇಂದ ಪಪ್ಪ ಆಗುತ್ತದೆ.'

ಯಾಕೋ ಗೊತ್ತಿಲ್ಲ, ಆಂಟಿಯ ಶಬ್ದ ಭಾರವಾಗಿದೆ. ಆಕೆಯ ಕಣ್ಣಲ್ಲಿ ನೀರೂ ಬಂದಿದೆ.

ನಾನು ಖುಶಿಯಾಗಿಬಿಟ್ಟಿದ್ದೇನೆ. ಚಪ್ಪಾಳೆ ತಟ್ಟಿ ಜೋರಾಗಿ ಕಿರುಚತೊಡಗುತ್ತೇನೆ—'ಪ ಇಂದ ಪಪ್ಪ ಆಗುತ್ತದೆ....ಪ ಇಂದ ಪಪ್ಪ ಆಗುತ್ತದೆ. ಪ....ಪ್ಪ ಆಗುತ್ತದೆ.'

ನಾಳೆ ಕ್ಲಾಸಿಗೆ ಹೋದಾಗ ಮೇಡಂಗೆ ಹೇಳುತ್ತೇನೆ—

'ಮೇಡಂ! ನನ್ನ ಆಂಟಿ ಹೇಳುತ್ತಾಳೆ, ಪ ಇಂದ ಪಪ್ಪ ಆಗುತ್ತದೆ!

ಸ್ಲೇಟಿನ ಮೇಲೆ ನಾನು ಬರೆದದ್ದು ಅಳಿಸಿ ಹೋಗಿಬಿಟ್ಟಿದೆ. ಈಗ ನಾನು ಪುನಃ ಬೇಗ ಬೇಗ ಬರೆಯತೊಡಗುತ್ತೇನೆ—ಪ ಇಂದ....

ಡಾ॥ ಬಿ. ನಂ. ಚಂದ್ರಯ್ಯ

ಸಿಡಿಲು-ಮಿಂಚು

ಘೋರೆಂದು ರಭಸವಾಗಿ ಬೀಸುವ ಗಾಳಿ, ಅಬ್ಬರಿಸಿ ಭಯ ಚಕಿತಗೊಳಿಸುವ ಗುಡುಗು, ಕುಂಭದ್ರೋಣವಾಗಿ ಸುರಿಯುವ ಮಳೆ, ಥಟ್ಟನೆ ಕಾಣಿಸಿಕೊಂಡು ಕ್ಷಣಕಾಲ ವಿಜೃಂಭಿಸಿ ಮಾಯವಾಗುವ ಮಿಂಚು-ಇವುಗಳಿಂದ ಕೂಡಿದ ಪ್ರಕ್ಷುಬ್ಧ ವಾತಾವರಣದಂಥ ಅದ್ಭುತರಮ್ಯ ದೃಶ್ಯ ಇನ್ನೊಂದಿರಲಾರದು. ಇವೆಲ್ಲದರಲ್ಲಿ ಹೆಚ್ಚು ಕೌತುಕವನ್ನು ಉಂಟುಮಾಡುವುದೇ ಮಿಂಚು: ನಮ್ಮಲ್ಲಿ ಅನೇಕರು ಊಹಿಸಲೂ ಸಾಧ್ಯವಾಗದಷ್ಟು ಕೆಡುಕುಂಟು ಮಾಡುವ ಮಿಂಚು; ಮನೆಮಠಗಳ, ಗುಡಿಗೋಪುರಗಳ ಧ್ವಂಸಕ್ಕೆ, ಅಗ್ನಿ ಆಕಸ್ಮಿಕಗಳಂಥ ಅನೇಕ ವಿಪತ್ತುಗಳಿಗೆ ಮೂಲಕಾರಣವಾದ ಮಿಂಚು.

ಮಿಂಚೆಂದರೇನು? ಮೋಡಕ್ಕೂ ಮೋಡಕ್ಕೂ ಅಥವಾ ಮೋಡಕ್ಕೂ ಭೂಮಿಗೂ ನಡುವಿನಿಂದ ಹರಿಯುವ ವಿದ್ಯುತ್ಪ್ರವಾಹವೇ ಮಿಂಚು. ಕಾರ್ಮೋಡಗಳಲ್ಲಿ ವಿದ್ಯುತ್ ಸಂಚಯನಗೊಂಡಿದ್ದು, ಮೋಡದ ತಳಭಾಗದಲ್ಲಿ ಋಣ ವಿದ್ಯುದಾವೇಶವೂ ಮೇಲ್ಭಾಗದಲ್ಲಿ ಧನ ವಿದ್ಯುದಾವೇಶವೂ ಇರುತ್ತದೆ. ಮೋಡಗಳಲ್ಲಿಯ ಈ ವಿದ್ಯುಚ್ಛಕ್ತಿಯಿಂದಲೆ ಭೂಮಿಯ ಮೇಲೆ ಧನ ವಿದ್ಯುದಾವೇಶ ಉತ್ಪನ್ನವಾಗಿ, ವಿದ್ಯುತ್ಪ್ರವಾಹ ನೆರಳಿನಂತೆ ಮೋಡಗಳತ್ತ ಸಾಗುತ್ತದೆ. ಭೂಮಿ ಮೋಡಗಳ ನಡುವೆ ಮಿಲಿಯಗಟ್ಟಲೆ ವೋಲ್ಟ್‌ಗಳ ವಿಭವ ಶಕ್ತಿ ಇದೆ. ಧನ ಮತ್ತು ಋಣ ಆವೇಶಗಳು ಕಾಂತಗಳಂತೆ ಪರಸ್ಪರ ಆಕರ್ಷಣೆ ಹೊಂದಿದರೂ ವಾಯು ದುರ್ಬಲ ವಾಹಕವಾಗಿರುವುದರಿಂದ ಮೋಡದ ತಳಭಾಗದಲ್ಲಿಯ ಋಣಾವೇಶವನ್ನು ಸಂಧಿಸಲು ಭೂಮಿಯ ಮೇಲಿನ ಧನಾವೇಶ ಯುದ್ಧವನ್ನೇ ಕೈಗೊಳ್ಳಬೇಕಾಗುತ್ತದೆ.

ಆಗಲೆ, ಮೋಡದ ತಳಭಾಗದಲ್ಲಿಯ ಋಣಾವೇಶವೂ ಭೂಮಿಯತ್ತ ಧಾವಿಸಲು ಪ್ರಯತ್ನಿಸುತ್ತಿರುವುದರಿಂದ, ಕೊನೆಯಲ್ಲಿ ವಾಯುವಿನಲ್ಲಿಯ ತಡೆ ದೂರವಾಗಿ ಭೂಮಿ ಮೋಡಗಳ ಸಂಬಂಧ ಕೂಡುತ್ತದೆ. ವಾಹಕ ವಾಯುಪಥದ ಉದ್ದಕ್ಕೂ ಉಜ್ವಲ ಪ್ರಕಾಶವನ್ನು ಉಂಟುಮಾಡುತ್ತ ವಿದ್ಯುಚ್ಛಕ್ತಿಯ ಭಾರೀ ತರಂಗ ಭೂಮಿಯಿಂದ ಮೋಡದತ್ತ ನುಗ್ಗುತ್ತದೆ. (ಹೌದು—ಭೂಮಿಯಿಂದ ಮೋಡದತ್ತ; ಆದರೆ ಇದು ನಮಗೆ ಕಾಣಿಸುವುದು ಮಾತ್ರ ಮೋಡದಿಂದ

೧೯೬೧ ರ ಜುಲೈ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಅಚ್ಚಾದ 'ಲೈಟ್ನಿಂಗ್: ಸ್ಕೈ-ಷೋ ಸ್ಪೆಕ್ಟಾಕ್ಯುಲರ್' ಎಂಬ ಲೇಖನದ ಸಂಗ್ರಹಾನುವಾದ.

ಭಾಸಿಯುತ್ತ ಸುಗ್ಗುವಂತೆ ಅಷ್ಟೆ!) ಮಿಂಚಿನ ಒಂದು ರೇಖೆ ಕೆಲವು ನೂರು ಮೀಟರುಗಳಷ್ಟು ಅಥವಾ ಇನ್ನು ಕೆಲವು ಸಲ ಅನೇಕ ಕಿಲೋಮೀಟರುಗಳಷ್ಟು ಉದ್ದವಾಗಿರಬಹುದು.

ಮಿಂಚಿನ ಉಷ್ಣತೆ ಎಷ್ಟು? ಸಾಮಾನ್ಯವಾಗಿ ೧೫,೦೦೦° ಯಿಂದ ೨೫,೦೦೦° ಸೆಲ್ಸಿಯಸ್‌ವರೆಗೆ. ಎಂದರೆ ಇದು ಸೂರ್ಯನ ಮೇಲ್ಮೈ ಉಷ್ಣತೆಯ ಸುಮಾರು ಮೂರರಿಂದ ಐದರಷ್ಟು ಹೆಚ್ಚು. "ಶೀತಲ"ವೆಂದು ವಿಜ್ಞಾನಿಗಳು ಗುರುತಿಸುವ ಮಿಂಚಿನ ಬಗೆಯೊಂದು ಉಂಟು. ಇಂಥ ಮಿಂಚು ಸೆಕೆಂಡಿನ ಸುಮಾರು ಸಾವಿರನೆಯ ಒಂದು ಭಾಗದಷ್ಟು ಅತ್ಯಲ್ಪಕಾಲ ಮಾತ್ರ ಕಾಣಿಸಿಕೊಳ್ಳುತ್ತದೆ. ಇನ್ನೊಂದು ಬಗೆಯದೇ, ಹೋಲಿಕೆಯಲ್ಲಿ ಸ್ವಲ್ಪ ಹೆಚ್ಚುಕಾಲ, ಸೆಕೆಂಡಿನ ಸುಮಾರು ಹತ್ತನೆಯ ಒಂದು ಭಾಗದಷ್ಟು ಕಾಲ, ಮಿನುಗುವ "ಬಿಸಿ" ಮಿಂಚು. ಬಿಸಿಮಿಂಚಿನಿಂದ ತತ್‌ಕ್ಷಣ ಬೆಂಕಿ ಹೊತ್ತಿಕೊಳ್ಳುತ್ತದೆ. ಆದರೆ ಶೀತಲ ಮಿಂಚು ಬಲುಮಟ್ಟಿಗೆ ಸ್ಫೋಟಕ ಗುಣವನ್ನಷ್ಟೆ ಹೊಂದಿರುತ್ತದೆ.

ಮಿಂಚಿನ ತೀಕ್ಷ್ಣ ಉಷ್ಣತೆ ಅದರ ಪಥದ ನೇರ ವಾಯುವನ್ನು ಹಿಗ್ಗಿಸುತ್ತದೆ. ಆಗ ಗಾಳಿ ಎಷ್ಟು ಜೋರಾಗಿ ಮಿಂಚಿನ ಪಥದ ಅಕ್ಕಪಕ್ಕ ನುಗ್ಗುತ್ತದೆ ಎಂದರೆ, ವಾಯುತರಂಗಗಳ ಸದ್ದನ್ನು ನಾವು ಕೇಳಬಹುದು. ಮಿಂಚು ಸಮೀಪವಿದ್ದಾಗ ಸದ್ದು ಕರ್ಕಶವಾಗಿಯೂ ದೂರವಿದ್ದಾಗ ಗುಡುಗಿನಂತೆಯೂ ಕೇಳಿಬರುತ್ತದೆ. ಗುಡುಗಿನ ಸದ್ದನ್ನು ಸಾಮಾನ್ಯವಾಗಿ ಹನ್ನೊಂದು ಕಿಲೋಮೀಟರ್ ದೂರದಿಂದ, ಇನ್ನು ಕೆಲವು ಸಂದರ್ಭಗಳಲ್ಲಿ ಇದಕ್ಕಿಂತಲೂ ಮೂರ್ಮಡಿ ಅಥವಾ ನಾಲ್ಮಡಿ ದೂರದಿಂದ, ಕೇಳಲು ಸಾಧ್ಯ.

ಬೆಳಕಿನ ವೇಗ ಸೆಕೆಂಡಿಗೆ ೩೦೦,೦೦೦ ಕಿಲೋಮೀಟರ್. ಆದ್ದರಿಂದ ಮಿಂಚು ಮೂಡಿದ ತತ್‌ಕ್ಷಣ ಅದನ್ನು ಕಾಣಬಹುದು. ಸದ್ದಿನ ವೇಗ ಸುಮಾರು ಮೂರು ಸೆಕೆಂಡುಗಳಿಗೆ ಒಂದು ಕಿಲೋಮೀಟರ್. ಮಿಂಚು ದೃಷ್ಟಿಗೆ ಬಿದ್ದೊಡನೆ ಸೆಕೆಂಡುಗಳ ಟಿಕ್‌ಟಿಕ್ ಧ್ವನಿಯನ್ನು ಎಣಿಸಲು ಪ್ರಾರಂಭಿಸಿ ಗುಡುಗಿನ ಸದ್ದು ಕಿವಿಗೆ ಬಿದ್ದಾಗ ಎಣಿಕೆ ನಿಲ್ಲಿಸಿ. ಒಟ್ಟು ಸೆಕೆಂಡುಗಳನ್ನು ಮೂರರಿಂದ ಭಾಗಿಸಿದರೆ ಆಗ ನಿಮಗೆ ಸಿಗುವುದೇ ನೀವಿರುವ ಸ್ಥಳದಿಂದ ಮಿಂಚಿನ ಪ್ರದೇಶಕ್ಕೆ ಇರುವ ಅಂದಾಜು ದೂರ (ಕಿಲೊಮೀಟರ್‌ಗಳಲ್ಲಿ).

ಮಿಂಚಿನಲ್ಲಿ ಅನೇಕ ಬಗೆ. ಸಾಮಾನ್ಯವಾಗಿ ಕಾಣಬರುವುದೇ ಅನೇಕ ದಿಸೆಗಳಲ್ಲಿ ವಕ್ರವಕ್ರವಾಗಿ ಮುನ್ನಡೆಯುತ್ತ ಮಾಯವಾಗುವ ಕೋಲ್ಮಿಂಚು. ಸಮಾಂತರವಾಗಿ ಸಾಗುವ ರೇಖೆಗಳನ್ನುಳ್ಳ ಮಿಂಚನ್ನು ಸಾಲು ಮಿಂಚೆಂದೂ,

ಎರಡು ಶಾಖೆಗಳಾಗಿ ಏಕಕಾಲದಲ್ಲಿ ಭೂಮಿಗಿಳಿದಂತೆ ಕಂಡುಬರುವ ಮಿಂಚನ್ನು ಬಳ್ಳಿ ಮಿಂಚೆಂದೂ ಕರೆಯಬಹುದು. ರೇಖೆಗಳನ್ನು ಪ್ರತ್ಯೇಕವಾಗಿ ಗುರುತಿಸಲಾರದಷ್ಟು ಮತ್ತು ಗುಡುಗಿನ ಸದ್ದನ್ನು ಸ್ಪಷ್ಟವಾಗಿ ಕೇಳಲಾರದಷ್ಟು ದೂರದಲ್ಲಿ ಕಂಡುಬರುವ ಮಿಂಚಿಗೆ ಹರಡುಮಿಂಚೆಂಬ ಹೆಸರುಂಟು. ಮೋಡಗಳ ಧನ ಮತ್ತು ಋಣಕ್ಷೇತ್ರಗಳ ನಡುವೆ ಮಿನುಗಿ. ವಿಶಾಲಪ್ರದೇಶದಲ್ಲಿ ಬೆಳಕನ್ನು ಉಂಟುಮಾಡುವ ಮಿಂಚೇ ಹಾಸುಮಿಂಚು. ಭೂಮಿಯನ್ನು ಸ್ಪರ್ಶಿಸಿದಂತೆ ಕಾಣದೆ, ಕೇವಲ ಮೋಡಗಳ ನಡುವೆ ಇಲ್ಲವೆ ಮೋಡಗಳ ಒಳಗೆ ಕೂಡ ಮಿಂಚು ಆಟವಾಡಬಹುದು. ಇಂಥ ಮಿಂಚಿನ ಪ್ರಕಾಶಕ್ಕೆ ಮೋಡಗಳು ತಡೆಯೊಡ್ಡುವುದರಿಂದ ಅನೇಕವೇಳೆ ಮಿಂಚು ತೋರಿಬರುವುದೇ ಇಲ್ಲ, ಗುಡುಗಿನ ಸದ್ದಷ್ಟೇ ಕೇಳಿಬರುತ್ತದೆ.

ಸಾಮಾನ್ಯ ಮಿಂಚಿನ ನೂರ್ಮಡಿಗಿಂತಲೂ ಹೆಚ್ಚು ಶಕ್ತಿಯುಳ್ಳ ಮಹಾ ಸಿಡಿಲುಗಳೂ ಆಗಾಗ ಬಡಿಯುವುದುಂಟು. ಸಾಮಾನ್ಯ ಮಿಂಚು ಸಿಡಿಲುಗಳು ಸುಮಾರು ಒಂದು ಸಾವಿರ ಮಿಲಿಯ ವಾಟ್‌ಗಳಷ್ಟು ಶಕ್ತಿಯನ್ನು ಬಿಡುಗಡೆ ಮಾಡಿದರೆ ಮಹಾಸಿಡಿಲುಗಳಿಂದ ಬಿಡುಗಡೆಯಾಗುವ ಶಕ್ತಿಯ ಪ್ರಮಾಣ ಕನಿಷ್ಠವೆಂದರೂ ನೂರುಸಾವಿರ ಮಿಲಿಯ ಅಥವಾ ಸುಮಾರು ಮಿಲಿಯ ಮಿಲಿಯ ಇಲ್ಲವೇ ಇದಕ್ಕಿಂತಲೂ ಹೆಚ್ಚು ವಾಟ್‌ಗಳು! ಈಚೆಗೆ ಗುರುತಿಸಲಾದ ಇಂಥ ಮಹಾಸಿಡಿಲುಗಳು ಹೆಚ್ಚಾಗಿ ಬಡಿಯುದಿರುವುದು ಜಪಾನಿನ ಕರಾವಳಿ ಪ್ರದೇಶದಲ್ಲಿ. ಬಲುಮಟ್ಟಿಗೆ ಸಾಗರಗಳ ಮೇಲೆಯೇ ಎರಗುವ ಇವುಗಳಲ್ಲಿ ಬಹಳ ಅಪೂರ್ವವಾಗಿ ಅಲ್ಲೊಂದು ಇಲ್ಲೊಂದು ಮಾತ್ರ ಭೂಮಿಯನ್ನು ಅಪ್ಪಿಕೊಳ್ಳುವುದುಂಟು.

೧೯೭೮ ರಲ್ಲಿ ನ್ಯೂಫೌಂಡ್‌ಲೆಂಡಿನ ಬೆಲ್‌ದ್ವೀಪದ ಮೇಲೆ ಎರಗಿ ಇಡೀ ಗ್ರಾಮದ ನಾಶಕ್ಕೆ ಕಾರಣವಾದ, ಹಾಗೂ ನ್ಯೂಮೆಕ್ಸಿಕೋದ ಸ್ಟೇಟ್ ಪೋಲೀಸ್ ರೇಡಿಯೋ ಗೋಪುರದಮೇಲೆ ಎರಗಿ ಸಂಪರ್ಕ ವ್ಯವಸ್ಥೆಯನ್ನೇ ಹೆಚ್ಚು ಕಡಮೆ ಸಂಪೂರ್ಣ ಹಾಳುಗೆಡಹಿದ ವಿಪತ್ಕಾರಕವಾದ ಎರಡು ಮಹಾಸಿಡಿಲುಗಳನ್ನು ಇಲ್ಲಿ ಉಲ್ಲೇಖಿಸಬಹುದು.

ತೀವ್ರ ಶಕ್ತಿಯ ಮಿಂಚಿನ ಅಥವಾ ಮಹಾಸಿಡಿಲಿನ ಬಗೆಗೆ ವಿಜ್ಞಾನಿಗಳ ಅಭಿಪ್ರಾಯ ಹೀಗಿದೆ: ಮೋಡಗಳಲ್ಲಿಯ ಋಣಾವೇಶವನ್ನು ಸಂಧಿಸುವ ಭೂಮಿಯಲ್ಲಿಯ ಧನಾವೇಶದಿಂದ ಸಾಮಾನ್ಯ ಮಿಂಚು ಮೂಡುತ್ತದೆ. ತೀವ್ರ ಶಕ್ತಿಯ ಮಿಂಚಾದರೋ ಮೋಡದ ಮೇಲ್ಭಾಗದಲ್ಲಿಯ ಧನಾವೇಶವನ್ನು

ಮಿಂಚಿಗೆ ವಿದ್ಯುತ್ತಿನ ಗುಣವಿದೆಯೆಂದು ಊಹಿಸಿದವರಲ್ಲಿ ಬೆಂಜಮಿನ್ ಫ್ರಾಂಕ್ಲಿನನೇನೂ ಮೊತ್ತಮೊದಲಿಗನಲ್ಲ. ಆ ಹಿಂದೆಯೆ ಸರ್ ಐಸಾಕ್‌ನ್ಯೂಟನ್ ಮತ್ತು ಫ್ರಾನ್ಸಿಸ್ ಹಾಕ್ಸ್‌ಬೀ ಸೇರಿದಂತೆ ಅನೇಕ ವಿಜ್ಞಾನಿಗಳು ಹೀಗೆ ಆಲೋಚಿಸಿದ್ದರು. ಆದರೆ ಇದನ್ನು ಪ್ರಯೋಗದ ಮೂಲಕ ಪ್ರತಿಪಾದಿಸಿದ ಕೀರ್ತಿ ಮಾತ್ರ ಫ್ರಾಂಕ್ಲಿನನಿಗೇ ಸಲ್ಲಬೇಕು. ೧೭೫೨ ರಲ್ಲಿ ಇವನು ಫಿಲಡೆಲ್ಫಿಯದ ಮಾರ್ಕೆಟ್ ಬೀದಿಯಲ್ಲಿದ್ದ ತನ್ನ ಮನೆಯ ಹೊಗೆಕೊಳವಿಗೆ ಕಬ್ಬಿಣದ ಕಂಬಿಯೊಂದನ್ನು ಜೋಡಿಸಿ, ನೆಲದೊಳಗೆ ಸ್ಥಾಪಿಸಲಾದ ನೀರೆತ್ತುವ ಯಂತ್ರಕ್ಕೆ ಅದರಿಂದ ವಿದ್ಯುತ್ತು ಹರಿಯುವಂತೆ ಅವಾಹಕಗೊಳಿಸಲಾದ ತಂತಿಯೊಂದನ್ನು ಬಿಗಿದು ಕಟ್ಟಿದ. ಹೀಗೆ ನಿರ್ಮಿಸಲಾದ ಮಿಂಚುಕಂಬಿ ಸಿಡಿಲ ಹೊಡೆತಗಳಿಂದ ಮನೆಯನ್ನು ರಕ್ಷಿಸುತ್ತದೆ ಎಂಬ ಅವನ ಭಾವನೆ ನಿಜವಾಯಿತು. ಅನಂತರ ೩೫ ವರ್ಷಗಳ ಕಾಲ, ಅವನಿಗೆ ೮೧ ವರ್ಷ ಪ್ರಾಯವಾಗುವ ತನಕ ಆ ಮನೆ ಸಿಡಿಲಿಗೆ ಈಡಾಗಲಿಲ್ಲ.

ಸಂಧಿಸುವ ಭೂಮಿಯ ಮೇಲಿನ ಋಣಾವೇಶದಿಂದ ಛಳುಕುತ್ತದೆ.

ನೀವಿದನ್ನು ಓದುತ್ತಿರುವಾಗ ಸುಮಾರು ೧೮೦೦ ರಷ್ಟು ವಿದ್ಯುದ್ಯುಕ್ತ ಭೀಕರ ಚಂಡಮಾರುತಗಳು ಭೂಮಿಯ ಬೇರೆ ಬೇರೆ ಭಾಗಗಳಲ್ಲಿ ಸುಳಿಯುತ್ತಿರುತ್ತವೆ. ಇವುಗಳಿಂದ ಪ್ರತಿ ಸೆಕೆಂಡಿಗೆ ಏನಿಲ್ಲವೆಂದರೂ ಸುಮಾರು ೬೦೦ ಮಿಂಚುಗಳು ಮೂಡಿ ಇವುಗಳ ಪೈಕಿ ಸುಮಾರು ೧೦೦ ಸಿಡಿಲುಗಳಾಗಿ ಭೂಮಿಗೆ ಎರಗುತ್ತವೆ. ಎಂದರೆ ಪ್ರತಿ ೨೪ ಗಂಟೆಗಳ ಕಾಲಾವಧಿಯಲ್ಲಿ ೮.೫ ಮಿಲಿಯದಷ್ಟು ಸಿಡಿಲುಗಳು ಭೂಸ್ಪರ್ಶ ಮಾಡುತ್ತವೆ. ಪೀಟರ್ ವೈಮೈಸ್ಟರನ ‘ದಿ ಲೈಟ್ನಿಂಗ್ ಬುಕ್’ ಎಂಬ ಗ್ರಂಥದ ಅನುಸಾರ, “ವಾತಾವರಣ ಒಂದೇ ಸಮನೆ ಎಲೆಕ್ಟ್ರಾನ್‌ಗಳನ್ನು ಕಳೆದುಕೊಳ್ಳುತ್ತಿದ್ದರೂ ಇವನ್ನು ಪ್ರತಿದಿನ ಭೂಮಿಗೆ ತಳ್ಳುವ ಸಿಡಿಲ ಬಿರುಗಾಳಿಗಳಿಂದಾಗಿ ಎಲೆಕ್ಟ್ರಾನುಗಳ ಸಮತೂಕ ಸದಾಕಾಲ ಒಂದೇ ರೀತಿ ಉಳಿಯುತ್ತದೆ ಎಂದು ಇಂದು ಅನೇಕ ವಿಜ್ಞಾನಿಗಳು ಒಪ್ಪುತ್ತಾರೆ.”

ಇಷ್ಟೇ ಅಲ್ಲ; ವಾಯುವಿನಲ್ಲಿರುವ ಕೆಲವು ನೈಟ್ರೋಜನ್ ವಸ್ತುಗಳನ್ನು ನೈಟ್ರೋಜನ್ ಸಂಯುಕ್ತಗಳಾಗಿಯೂ ಮಿಂಚು ಪರಿವರ್ತಿಸುತ್ತದೆ. ಜಡಿಮಳೆಯೊಂದಿಗೆ ಭೂಮಿಗೆ ಬೀಳುವ ಈ ವಸ್ತುಗಳಿಂದ, ವರ್ಷಕ್ಕೆ ಕೆಲವು ಕಿಲೋಗ್ರಾಮುಗಳಷ್ಟು ಗೊಬ್ಬರವನ್ನು ಪ್ರತಿ ಹೆಕ್ಟೇರ್ ಭೂಮಿ ಪುಕ್ಕಟೆಯಾಗಿ ಪಡೆಯುತ್ತದೆ.

ಕಂಪಾಲ, ಉಗಾಂಡ ಮತ್ತು ಜಾವ ಸಿಡಿಲ ಹೊಡೆತಕ್ಕೆ ಹೆಚ್ಚು ಈಡಾಗುವ ಪ್ರದೇಶಗಳಾಗಿವೆ. ಒಂದು ಅಂದಾಜಿನಂತೆ, ಜಾವದಲ್ಲಿ ವರ್ಷಕ್ಕೆ ಸುಮಾರು

೩೦೦ ದಿನ ಸಿಡಿಲು ಬೀಳುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಆಗ್ನೇಯ ಭಾಗದಲ್ಲೂ ವಿಶೇಷವಾಗಿ ಫ್ಲೋರಿಡದಲ್ಲಿ, ಸಿಡಿಲ ಹಾವಳಿ ಹೆಚ್ಚು. ಸಿಡಿಲ ಹೊಡೆತಕ್ಕೆ ಕಡಿಮೆ ಈಡಾಗುವ ಪ್ರದೇಶಗಳೇ ಕ್ಯಾಲಿಫೋರ್ನಿಯ, ಗ್ರೀನ್ ಲೆಂಡ್, ಐಸ್‌ಲೆಂಡ್ ಮತ್ತು ಉತ್ತರನಾರ್ವೆ.

'ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್' ಎಂಬ ಪುಸ್ತಕದ ಅನುಸಾರ, ೧೯೭೫ರಲ್ಲಿ ಜಿಂಬಾಬ್ವೆಯ ಉಮ್ತಾಲಿಯ ಹತ್ತಿರವಿರುವ ಗುಡಿಸಿಲೊಂದರ ಮೇಲೆ ಎರಗಿದ ಸಿಡಿಲೇ ಈತನಕ ದಾಖಲಾದ ಮಹಾಸಿಡಿಲುಗಳಲ್ಲಿ ಘೋರ

ಸಿಡಿಲು ಬಡಿಯುವ ಸಂದರ್ಭವಿರುವಾಗ ಎತ್ತರದ ಮರದ ಕೆಳಗೆ ನಿಲ್ಲಬೇಡಿ. ಎತ್ತರದ ಸ್ಥಳದಲ್ಲೂ ಉಳಿಯಬೇಡಿ. ಸಾಧ್ಯವಿದ್ದರೆ ಕೆಳಕ್ಕೆ ಓಡಿಹೋಗಿ. ಲೋಹದ ವಸ್ತುಗಳನ್ನು ಹಿಡಿದುಕೊಂಡಿರಬೇಡಿ ಸೈಕಲ್ ಸವಾರಿ ಮಾಡಬೇಡಿ.

ಇಷ್ಟೇನು, ಸಿಡಿಲು ಎರಗಿಬಿಟ್ಟಿತು ಅನಿಸಿದಾಗ ಬಗ್ಗಿಕೊಂಡಿರಬೇಡಿ. ಪಕ್ಕಪಕ್ಕದಲ್ಲಿ ಕೂಡಿಕೊಂಡು ನಿಂತಿರಬೇಡಿ ಮುಂದೆ ಬಾಗಿ ಮಂಡಿಗೆ ತಾಗಿ. ಅದರೆ ಮುಂದಿಯುಡಿ ಕುಳಿತುಕೊಳ್ಳಬೇಡಿ. ನೆಲದ ಮೇಲೆ ಮಲಗಿಕೊಳ್ಳಿ ಅಥವಾ ಕೈ ಕಾಲು ಮಂಡಿಗಳನ್ನು ಒತ್ತಾಗಿಯುಂಟೆ ಬಗ್ಗಿಕೊಂಡರೂ ಸರಿಯೇ.

ಮನೆಯೊಳಗೆ ಬನ್ನಿ. ಅಥವಾ ಕಾರಿನೊಳಗೆ ಕುಳಿತುಕೊಂಡರೂ ತೊಂದರೆ ಇಲ್ಲ. ನಿಮ್ಮನ್ನು ಸಿಡಿಲಿನ ಹೊಡೆತದಿಂದ ಪಾರು ಮಾಡುವುದು ಕಾರಿನ ಟಯರ್ ಅಲ್ಲ; ಬದಲಾಗಿ ಅದರ ಲೋಹದ ಚೌಕಟ್ಟು. ಅದರೆ ಕಾರಿನೊಳಗೆ ಕುಳಿತುಕೊಂಡಿರುವಾಗ ಲೋಹದ ಯಾವುದೇ ಭಾಗವನ್ನು ಮುಟ್ಟಬೇಡಿ.

ಮನೆಯ ಅಥವಾ ಯಾವುದೇ ಕಟ್ಟಡದ ಒಳಗೆ ಬಂದರೆ ಅಲ್ಲಿ ಮಧ್ಯಭಾಗವೇ ಹೆಚ್ಚು ಸುರಕ್ಷಿತ ಎಂಬುದು ನೆನಪಿನಲ್ಲಿರಲಿ. ಬೆಂಕಿಯಿರುವ ಸ್ಥಳ ಅಥವಾ ಹೊಗೆಕೊಳವೆಯಿಂದ ದೂರವಿರಿ. ರೇಡಿಯೋ ತಿರುಗಿಸಬೇಡಿ. ಟೆಲಿಫೋನ್ ಮತ್ತು ಯಾವುದೇ ವಿದ್ಯುತ್ ಸಾಧನಗಳನ್ನು ಬಳಸಬೇಡಿ. ಬಾಗಿಲು, ಕಿಟಕಿ, ರೇಡಿಯೇಟರ್ ಸ್ಥಳಗಳಿಂದ ದೂರವಿರಿ.

ಮಹಡಿಗಿಂತ ಕೆಳ ಅಂತಸ್ತೇ ಹೆಚ್ಚು ಸುರಕ್ಷಿತ ಎಂಬುದನ್ನು ಮರೆಯಬೇಡಿ.

ಸಿಡಿಲ ಹೊಡೆತಕ್ಕೀಡಾಗಿ ಸಾಯುವ ಸಂಭವ ಕಡಿಮೆ. ಕೂಡಲೇ ಯಾವುದಾದರೂ ಚಿಕಿತ್ಸೆ ನೀಡಿದರೆ ಆಗಬಹುದಾದ ಅಪಾಯವೂ ತಾತ್ಕಾಲಿಕ. ಕೃತಕ ಉಸಿರಾಟ ತಂತ್ರದಲ್ಲಿ ತರಬೇತಿ ಪಡೆದವರಿಂದ ತತ್‌ಕ್ಷಣದ ನೆರವು ದೊರೆತ ಪಕ್ಷದಲ್ಲಿ, ಸಿಡಿಲಿಗೆ ಸಾವಿನ ಸಮೀಪ ಸಾಗಿದವರನ್ನೂ ಬದುಕಿಸಬಹುದು.


ಕೊನೆಯದಾಗಿ ಧೈರ್ಯದ ಒಂದು ಮಾತು: ಸಿಡಿಲು ನಿಮ್ಮನ್ನು ಭಯಪಡಿಸು ವಾಗಲೆಲ್ಲ ಈ ಮಾತನ್ನು ಜ್ಞಾಪಿಸಿಕೊಳ್ಳಿ; "ಮಿಂಚಿನ ಪ್ರಕಾಶವನ್ನು ಕಂಡಿರೋ, ಸಿಡಿಲ ಹೊಡೆತದಿಂದ ತಪ್ಪಿಸಿಕೊಂಡಿರೆಂದೇ ಇದರ ಅರ್ಥ."

ವಾದುವು. ಇವು ಇಪ್ಪತ್ತೊಂದು ಜನರನ್ನು ಬಲಿ ತೆಗೆದುಕೊಂಡಿತ್ತು.

ಸಿಡಿಲು ಎಂದಾದರೂ ಒಂದೇ ಸ್ಥಳದಲ್ಲಿ ಎರಡು ಬಾರಿ ಹೊಡೆಯುತ್ತದೆಯೇ? ಹೌದು. ಭೂಮಿಯನ್ನು ಸ್ಪರ್ಶಿಸಲು ಸದಾಕಾಲ ದಾರಿ ಹುಡುಕುತ್ತಿರುವ ಸಿಡಿಲು ಒಂದೇಕಡೆ ಮತ್ತೆ ಮತ್ತೆ ಬೀಳುವ ಸಾಧ್ಯತೆ ಹೆಚ್ಚಾಗಿದೆ. ಪದೇ ಪದೇ ಸಿಡಿಲ ಹೊಡೆತಕ್ಕೆ ಈಡಾದುವಕ್ಕೆ ನಿದರ್ಶನವಾಗಿ ವಾಷಿಂಗ್‌ಟನ್ ಮಾನ್ಯುಮೆಂಟ್, ವೆನಿಸ್ ನಗರದ ಸೇಂಟ್ ಮಾರ್ಕ್ಸ್ ಚೌಕದಲ್ಲಿನ ಬೆಲ್‌ಟವರ್ ಹಾಗೂ ನ್ಯೂಯಾರ್ಕಿನ ಎಂಪಾಯರ್ ಸ್ಟೇಟ್ ಬಿಲ್ಡಿಂಗ್–ಇವನ್ನು ಹೆಸರಿಸಬಹುದು. ಎಂಪಾಯರ್ ಸ್ಟೇಟ್ ಬಿಲ್ಡಿಂಗ್ ಅಂತೂ ಒಂದು ದಿನ ಕೇವಲ ಇಪ್ಪತ್ತು ಮಿನಿಟುಗಳ ಅವಧಿಯಲ್ಲಿ ಒಂಬತ್ತು ಸಲ ಸಿಡಿಲ ಹೊಡೆತಕ್ಕೆ ಈಡಾಗಿತ್ತು.

ಸಿಡಿಲಿಗೆ ಬಲಿಯಾಗಿ ಮನುಷ್ಯರು ಸಾಯುವ ಸಂಭವ ಎಷ್ಟು? ಬಹಳ ಕಡಿಮೆ. ಸಿಡಿಲಿನ ಹೊಡೆತಕ್ಕೆ ಹೆಚ್ಚು ಸಲ ಬಲಿಯಾದವನೇ ರಾಯ್‌ಸಲ್ಲಿವನ್. ಅಮೆರಿಕದ ನಿವೃತ್ತ ಅರಣ್ಯಾಧಿಕಾರಿಯಾದ ಇವನು ಒಟ್ಟು ಏಳು ಸಲ ಸಿಡಿಲಿನ ಆಕ್ರಮಣಕ್ಕೆ ಸಿಲುಕಿದ್ದಾನೆ. ಇದರಿಂದ ಸಲ್ಲಿವನನ ಕೂದಲುಗಳು ಉರಿದು ಹೋಗಿವೆ. ಹುಬ್ಬುಗಳು ಸೀದುಹೋಗಿ ದೇಹದ ಅನೇಕ ಭಾಗಗಳು ಒಣಗಿ ಹೋಗಿವೆ. "ನನ್ನ ಮೇಲೆಯೇ ಎರಗಲು ತನ್ನದೇ ಆದ ಮಾರ್ಗವೊಂದನ್ನು ಈ ಜಾಣ ಸಿಡಿಲು ಕಂಡುಕೊಂಡಂತಿದೆ" ಎಂದು ಇವನು ಆಗಾಗ ಹೇಳಿಕೊಳ್ಳುತ್ತಾನೆ.

ಶಂಸಐತಾಳ



ಆಸೆಯಿಂದ ಬೇಕು ಎನಲು ಬಾರದು, ಬೇಡ ಎನಲು ಬಿಡದು, ದೇವರು ಕೊಟ್ಟರೆ ತೆಗೆದುಕೋ, ಕೊಡದಿದ್ದರೆ ಅಳಬೇಡ. ಆಸೆಯೆಂಬ ಪಾಶದಿಂದ ಯಾವಾಗಲೂ ದೂರವಿರು.

—ಕವಿ ವೇಮನ

ಪ್ರಾಣಿ ಕೌತುಕ

ರಕ್ತ ರಾಕ್ಷಸರು :

ರಕ್ತಹೀರುವವರು ಹೆಣ್ಣುಗಳೇ ಹೊರತು ಗಂಡುಗಳಲ್ಲ ಎನ್ನುವುದಕ್ಕೆ ಸೊಳ್ಳೆಯೇ ಸಾಕ್ಷಿ. ಗಂಡುಸೊಳ್ಳೆಗಳು ಸಸ್ಯದ ರಸವನ್ನು ಮಾತ್ರ ಹೀರಿಕೊಳ್ಳುತ್ತವೆ. ಆದರೆ ಹೆಣ್ಣು ಸೊಳ್ಳೆಗಳು ನೆತ್ತರನ್ನು ಹೀರುವುದಕ್ಕೂ ಹೇಸುವುದಿಲ್ಲ. ಹೆಣ್ಣುಸೊಳ್ಳೆಯಲ್ಲಿ ಮೊಟ್ಟೆಗಳು ಉತ್ಪಾದನೆಯಾಗಲು ಅಗತ್ಯವಾದ ಪ್ರೋಟೀನ್ ಅಂಶ ಲಭಿಸುವುದು ಈ ರೀತಿ ಹೀರಲಾದ ರಕ್ತದಿಂದಲೇ. ಹೆಣ್ಣು ಸೊಳ್ಳೆಯ ಒಂದು ರಕ್ತದ ಊಟ ಎಂದರೆ ಸುಮಾರು ಐದು ಮಿಲಿಗ್ರಾಂನಷ್ಟು ರಕ್ತ. ಇಷ್ಟು ರಕ್ತದ ನೆರವಿನಿಂದ ಬೇರೆ ಬೇರೆ ಪ್ರಭೇದದ ಸೊಳ್ಳೆಗಳಲ್ಲಿ ಸುಮಾರು ೭೫ರಿಂದ ೫೦೦ ರಷ್ಟು ಮೊಟ್ಟೆಗಳ ಉತ್ಪಾದನೆ. ಈ ರಕ್ತ ಹೀರಿಕೆಯ ಕಾರ್ಯಕ್ಕೆ ಅನುಕೂಲವಾಗುವಂತೆ ಹೆಣ್ಣು ಸೊಳ್ಳೆಯ ಮುಖಾಂಗವೂ ಇದೆ. ಉದ್ದನೆಯ ಚೂಪಾದ ಮೂತಿ ಮೊನೆ ಅದಕ್ಕೆ ರಕ್ಷಾಕವಚ. ಈ ಖಡ್ಗದಂಥ ಸಾಧನ ಬಲಿವ್ಯಕ್ತಿಯ ಚರ್ಮವನ್ನು ತೂರಿ ರಕ್ತನಾಳದ ಒಳಹೊಕ್ಕು ರಕ್ತವನ್ನು ಸೆಳೆಯುತ್ತದೆ. ಇದರಿಂದ ರಕ್ತದಾನಿಗೆ ಒಂದು ಸಾರಿಗೆ ಐದು ಮಿಲಿಗ್ರಾಂನಷ್ಟು ರಕ್ತ ನಷ್ಟವಾಗುವುದೇನೊ ಸರಿಯೆ. ಜೊತೆಗೆ ಸೊಳ್ಳೆಯ ಮೂಲಕ ದೇಹವನ್ನು ಪ್ರವೇಶಿಸಬಹುದಾದ ವಿಷಾಣುಗಳಿಂದ ರೋಗ ಬರಬಹುದು, ಸಾವೂ ಸಂಭವಿಸಬಹುದು.

ತಲೆ ಇಲ್ಲದ ಕಾಮುಕರು :

ರತಿಸುಖಕ್ಕಾಗಿ ತಲೆಕಳೆದುಕೊಳ್ಳುವ ಮಂದಿಯೂ ಇದ್ದಾರೆ. ಒಂಟಿಹುಳ ಎಂಬ ಒಂದು ಕೀಟವಿದೆ. ಇದು ಮಿಡತೆ ಜಾತಿಗೆ ಸೇರಿದ್ದು. ಇದನ್ನು ನೋಡಿದರೆ ಪ್ರಾರ್ಥನೆಗಾಗಿ ಕೈ ಜೋಡಿಸಿಕೊಂಡಿದೆಯೊ ಎಂಬಂತೆ ಮುಂಗಾಲು ಜೋಡಿಸಿಕೊಂಡಿರುತ್ತದೆ. ಅದಕ್ಕಾಗಿಯೇ ಇದನ್ನು "ಪ್ರಾರ್ಥಿಸುವ ಮಿಡತೆ" ಎನ್ನುತ್ತಾರೆ. ಶಿವನಕುದುರೆ ಎಂಬ ಹೆಸರೂ ಇದೆ. ಈ ಮಿಡತೆಯಲ್ಲಿ ಹೆಣ್ಣು ಮಿಡತೆ ತುಂಬಾ ಜೋರು. ಬಕಾಸುರನಂತೆ ಮುಕ್ಕುತ್ತದೆ. ಗಂಡು-ಹೆಣ್ಣುಗಳ ಸೇರುವಿಕೆ ಅತ್ಯಂತ ವೈಚಿತ್ರ್ಯಪೂರ್ಣ. ಜತೆ ಸಂದರ್ಭದಲ್ಲಿ ಗಂಡುಮಿಡತೆ ಹೆಣ್ಣಿನ ಮೇಲೆ ಅಗತುಕೊಂಡು ಕೂರುತ್ತದೆ. ತಕ್ಷಣವೇ ಹೆಣ್ಣು ಗಂಡಿನ ತಲೆಯನ್ನು ಗಬಕ್ಕನೆ ಹಿಡಿದು ಕಡಿದುಕೊಂಡು ಬಿಡುತ್ತದೆ, ಅಗಿದು ನುಂಗಿಬಿಡು

ತ್ತದೆ. ತಲೆ ಕಳೆದುಕೊಂಡರೆ ಗಂಡು ತನ್ನ ಸಂಭೋಗ ಕ್ರಿಯೆಯನ್ನು ಮುಂದುವರಿಸಿ, ಮುಗಿಸಿ ಸಾವನ್ನಪ್ಪುತ್ತದೆ. ಹೆಣ್ಣು ಗರ್ಭತಳೆದು ಮುಂದಿನ ಸಂತತಿ ಹೊರಬರುತ್ತದೆ. ತಲೆಯನ್ನು ಬೇಟೆಯಾಡಿದ ಹೆಣ್ಣು ಮಿಡತೆಯ ಗರ್ಭದಲ್ಲಿ ಮೊಟ್ಟೆಗಳ ಪೋಷಣೆಗೆ ತಲೆ ಅರಗಿ ದಕ್ಕಿದ ಪ್ರೋಟೀನ್‌ಗಳೇ ಆಧಾರ. ಹೊಲಗಳಿಗೆ ಮಿಡತೆಗಳು ಧಾಳಿ ಇಟ್ಟಾಗ ನೋಡಿ; ಲಕ್ಷಾಂತರ ತಲೆಯಿಲ್ಲದ ಮಿಡತೆಗಳು ಬಿದ್ದಿರುತ್ತವೆ!

ಬಸವನ ಹುಳದ ಸರ್ಕಸ್ ರಹಸ್ಯ :

ಬ್ಲೇಡಿನ ಚೂಪು ತುದಿಯ ಅಂಚಿನ ಮೇಲೆ ಬಸವನ ಹುಳುವನ್ನು ಬಿಡಿ. ಅದು ಆ ಚೂಪು ಅಂಚಿನ ಮೇಲೆಯೇ ತೆವಳಿಕೊಂಡು ಸಾಗಬಲ್ಲದು. ಅದರ ಮೈ ಕೊಂಚವೂ ಊನವಾಗುವುದಿಲ್ಲ. ನಿಧಾನಗಾಮಿ ಬಸವನಹುಳ ನೆಲದ ಮೇಲೆ ತೆವಳಿಕೊಂಡು ಹೋದಾಗ ಗಮನಿಸಿದರೆ, ಅದು ಸಾಗಿದ ಹಾದಿ ಉದ್ದಕ್ಕೂ ಒಂದು ಬಗೆಯ ಬಣ್ಣವಿಲ್ಲದ ಅಂಟುದ್ರವ ಒಸರಿರುವುದು ಕಾಣಬರುತ್ತದೆ. ಈ ಅಂಟುದ್ರವ ಅದರ ಮೈಗೆ ರಕ್ಷಾಕವಚವಾಗಿರುತ್ತದೆ. ಹಾಗಾಗಿಯೇ ಅದು ಬ್ಲೇಡಿನ ಮೇಲೆ ತೆವಳಿದರೂ ಅಪಾಯವಿಲ್ಲ.

ಅಭಿಮನ್ಯು ಮೀನುಗಳು :

ಸಾಗರದಲ್ಲಿನ ಜಲಚರಗಳಲ್ಲಿ ಷಾರ್ಕ್ ಮೀನುಗಳು ಭಯಕಾರಕಗಳು. ಮೀನುಗಾರರು, ನಾವಿಕರು ಹಾಗೂ ಸಾಗರ ತಳದ ಈಜುಗಾರರಿಗೆ ಷಾರ್ಕ್ ಮೀನುಗಳೆಂದರೆ ಸಿಂಹಸ್ವಪ್ನ. ಮಾಂಸಭಕ್ಷಕರಾದ ಈ ಮೀನುಗಳ ದವಡೆಗೆ ಸಿಕ್ಕಿದ ಪ್ರಾಣಿಯ ಕಥೆ ಮುಗಿದಂತೆಯೇ. ಅಟ್ಲಾಂಟಿಕ್ ಸಾಗರ ಕರಾವಳಿಯಲ್ಲಿ ಟೈಗರ್ ಷಾರ್ಕ್, ಹುಲಿಷಾರ್ಕ್ ಎಂಬ ಮೀನೊಂದಿದೆ. ಈ ಮೀನು ಅತ್ಯಂತ ಭಯಂಕರವಾದದ್ದು. ಗರ್ಭದಲ್ಲಿ ಭ್ರೂಣವಾಗಿರುವಾಗಲೇ ಮಾಂಸ ಭಕ್ಷಣೆಗೆ ತಯಾರಿ. ತಾಯಿ ಮೀನಿನ ಗರ್ಭದಲ್ಲಿ ನಾಲ್ಕೈದು ಭ್ರೂಣಗಳಿದ್ದರೆ ಗಟ್ಟಿಮುಟ್ಟಾಗಿ ಶಕ್ತಿಯುತವಾಗಿ ಭ್ರೂಣಮೀನು ದುರ್ಬಲ ಭ್ರೂಣಮೀನನ್ನ ಹಿಡಿದು ಮುಕ್ಕುತ್ತದೆ.

ಬುದ್ಧಿವಂತ ಇಲಿರಾಯ :

ಮಾನವನ ಸಮಾಜ ಹುಟ್ಟಿದಂದಿನಿಂದ ಅವನ ಜೊತೆ ಜೊತೆಗೆ ಇದ್ದು

ಕೊಂಡು ಉಳಿದುಕೊಂಡು ಬರುವ ಅದ್ಭುತ ಸಹಜೀವನ ಸಾಹಸದ ಕಥೆ ಇಲಿಯದು. ಜಾಗತಿಕ ಇಲಿ ಸಂಖ್ಯೆ ಹೆಚ್ಚುಕಡಿಮೆ ಮಾನವ ಜನಸಂಖ್ಯೆಯಷ್ಟೆ ಇದೆ. ಇಲಿಗಳು ಅತ್ಯಂತ ಬುದ್ಧಿವಂತ ಜೀವಿಗಳು. ಪ್ರಯೋಗಗಳ ಮೂಲಕ ಸಾಬೀತಾಗಿರುವುದೇನೆಂದರೆ ಸಮಸ್ಯೆಗಳನ್ನು ಪರಿಹಾರ ಮಾಡುವ ಸಾಮರ್ಥ್ಯ ಅವಕ್ಕಿದೆ.

ಆಹಾರ ಸಂಗ್ರಹಣಾ ತಂತ್ರವನ್ನು ಕಲಿತು ಮುಂದಿನ ಸಂತತಿಗೆ ಕಲಿಸುವ ಸಂಸ್ಕೃತಿಯೂ ಇಲಿ ಸಮುದಾಯದಲ್ಲಿದೆ. ಹರಿಯುವ ನೀರಿನ ಮಗ್ಗುಲಲ್ಲಿ ನಿಂತು ಮುಂಗಾಲುಗಳನ್ನು ನೀರೊಳಗೆ ಅಲ್ಲಾಡಿಸುತ್ತಾ ಮೀನು ಹಿಡಿಯುವ ಮೀನುಗಾರ ಇಲಿಗಳೂ ಇವೆ. ಪಕ್ಷಿ ಬೇಟೆಯಾಡುವ ಬೇಟೆಗಾರ ಇಲಿಗಳೂ ಇವೆ.

ಕಲಿಕೆಯ ಸಾಮರ್ಥ್ಯ ಇರುವ ಇಲಿಯ ಮೂಲಭೂತ ಗುಣ ಎಂದರೆ ಕುತೂಹಲ, ಅನ್ವೇಷಣೆಯ ಹಂಬಲ. ಈ ಕಲಿಕೆಯ ಸಾಮರ್ಥ್ಯ ಇರುವುದರಿಂದಲೇ ವಿಷಪ್ರಾಶಿತ ಆಹಾರವನ್ನು ಮುಟ್ಟದೆ ಹೋಗುವ ಬುದ್ಧಿವಂತಿಕೆ ಬಂದಿರುವುದು. ಇಂಥ ವಿಷಪ್ರಾಶಿತ ಆಹಾರವನ್ನು ಪತ್ತೆಹಚ್ಚಿ ಇಲಿ ಅದರ ಮೇಲೆ ಉಚ್ಚೆಹೊಯ್ದು ಅಥವಾ ಮಲವಿಸರ್ಜನೆ ಮಾಡಿ ಗುರುತು ಹಾಕಿ ಹೋಗುತ್ತದೆ. ನಂತರ ಬರುವ ಇಲಿಗಳು ಗುರುತು ಕಂಡ ಕೂಡಲೆ ಆಹಾರವನ್ನು ಮುಟ್ಟುವುದೇ ಇಲ್ಲ.

ಕುತೂಹಲಿ

ನಿನ್ನನ್ನು ನೀನು ಮೊದಲು ನಂಬಲು ಕಲಿತರೆ ನಂತರ ಜಗತ್ತೇ ನಿನ್ನನ್ನು ನಂಬಲು ಕಲಿಯುತ್ತದೆ.

—[illegible]

ಸತ್ಯ, ಮಾನವಸ್ವಭಾವದಿಂದ ದೂರಾಗುವುದಿಲ್ಲ. ಆದರೆ ಸತ್ಯವೆಂದೇ ಬಗೆಯುವ ಮಾನವ ಸ್ವಭಾವದಿಂದ ದೂರಾದರೆ ಅದನ್ನು ಸತ್ಯವೆಂದು ಬಗೆಯಬೇಕಿಲ್ಲ.

—ಕನ್‌ಫ್ಯೂಷಿಯಸ್

ಹುರುಳಿಲ್ಲದ ಹಳೆಯ ಸತ್ಯಗಳನ್ನು ಅಂಗೀಕರಿಸಿದ ಯಾವ ಸಮಾಜವೂ ಆರೋಗ್ಯಪರವಾದ ಚೇತನ ಜೀವನವನ್ನು ಪಡೆಯಲಾರದು.

—ಇಬ್ಸನ್

ಗಂಡಸರಿಗೆ ವಾಸೆಕ್ಟಮಿ ಎಂದರೆ ಏನು ?

(ವೀರ್ಯನಾಳ ಶಸ್ತ್ರ ಚಿಕಿತ್ಸೆ)

ಕೇವಲ ಮೂವತ್ತು ವರ್ಷಗಳ ಹಿಂದೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯನ್ನು ಯಾಕೆ ಹೊಂದಬೇಕೆಂದು ಬಹಳಷ್ಟು ಜನರಿಗೆ ಅರ್ಥವಾಗಿರಲಿಲ್ಲ. ಮಕ್ಕಳನ್ನು ಪಡೆಯುವ ಶಕ್ತಿಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುವುದು ಎಂಬ ಸಂಗತಿಯೇ ಸಾಮಾನ್ಯ ಜನರಿಗೆ ಪರಮಾಶ್ಚರ್ಯದ ಅತಿರೇಕದ ವಿಷಯವಾಗಿತ್ತು. ಗರ್ಭನಿರೋಧ ಕೇವಲ ಹೆಂಗಸರ ಜವಾಬ್ದಾರಿಯೇ ಹೊರತು ಗಂಡಸರವಲ್ಲ ಎಂಬ ಮನೋಭಾವ; ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ಬಗ್ಗೆ ಜನರಲ್ಲಿದ್ದ ತಪ್ಪು ತಿಳಿವಳಿಕೆ, ಅಲ್ಪಜ್ಞಾನ—ಈ ಕಾರಣಗಳಿಂದಾಗಿ ಇಂಥ ಚಿಕಿತ್ಸೆಯನ್ನು ಜನನ ನಿಯಂತ್ರಣದ ಸಾಧನವಾಗಿ ಯಾರೂ ಒಪ್ಪುತ್ತಿರಲಿಲ್ಲ.

ಭಾರತ ಸರ್ಕಾರದ ಅಧಿಕೃತ ನೀತಿಯನ್ನಾಗಿ ಅನುಸರಿಸಿ, ರಾಷ್ಟ್ರೀಯ ಕುಟುಂಬ ಯೋಜನಾ ಕಾರ್ಯಕ್ರಮದ ಅನ್ವಯ ೧೯೫೦ರ ದಶಕದಲ್ಲಿ ವಾಸೆಕ್ಟಮಿ ಚಿಕಿತ್ಸೆಯನ್ನು ಪ್ರಾರಂಭಿಸಿದಾಗ ಇದನ್ನು ಪುರುಷರು ಹಾಗೂ ಮಹಿಳೆಯರು ಕೂಡಿ ವಿರೋಧಿಸಿದರು. ಆದರೆ ವರ್ಷಗಳು ಕಳೆದಂತೆ ಈ ವಿರೋಧ ಕಡಿಮೆಯಾಗುತ್ತ ಹೋಯಿತು. ಸ್ವಯಂಪ್ರೇರಣೆಯಿಂದ ವಾಸೆಕ್ಟಮಿ ಹೊಂದುವವರಿಗೆ ಹಣಕಾಸಿನ ನೆರವು ನೀಡಿಕೆಯ ಪ್ರೋತ್ಸಾಹ, ಉಚಿತ ಹಾಗೂ ಉತ್ತಮ ಶಸ್ತ್ರಚಿಕಿತ್ಸೆಯ ಸೌಲಭ್ಯ–ಇವುಗಳಿಂದಾಗಿ ವಾಸೆಕ್ಟಮಿ ಹೊಂದಬಯಸುವ ಪುರುಷರ ಸಂಖ್ಯೆ ದಿನೇ ದಿನೇ ವೃದ್ಧಿಸತೊಡಗಿತು. ಇದರ ಫಲಿತಾಂಶವೆಂದರೆ ೧೯೫೦ರ ದಶಕದಲ್ಲಿ ಕೇವಲ ಕೆಲವೇ ಸಾವಿರವಿದ್ದ ವಾಸೆಕ್ಟಮಿಯ ಸಂಖ್ಯೆ ೧೯೬೮ರ ವೇಳೆಗೆ ಒಂದು ಮಿಲಿಯನ್ ಅನ್ನೂ ಮೀರಿತು.

ಸರ್ಕಾರದ ಈ ನೀತಿ ಜನನ ನಿಯಂತ್ರಣದ ಪರಿಣಾಮಕಾರಿ ವ್ಯವಸ್ಥೆಯಾಗಿ ಕೆಲವು ಜನರಿಗೆ ಅನ್ನಿಸಿದರೆ, ಇನ್ನು ಕೆಲವರಿಗೆ ಹಾಗೆ ಅನ್ನಿಸಲಿಲ್ಲ. ೧೯೭೬ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಇಂದಿರಾಗಾಂಧಿ ಸರ್ಕಾರ ಪ್ರಕಟಿಸಿದಂತೆ ೬.೨ ಮಿಲಿಯನ್ ವಾಸೆಕ್ಟಮಿ ಒಂದು ದಾಖಲೆ. ಆದರೆ ಅನೇಕ ಬಲಾತ್ಕಾರ

೧೯೮೩ರ ಜೂನ್ ತಿಂಗಳ ರೀಡರ್ಸ್ ಡೈಜೆಸ್ಟ್ ಪತ್ರಿಕೆಯಲ್ಲಿ ಪ್ರಕಟವಾದ 'ವಾಟ್ ವಾಸೆಕ್ಟಮಿ ಮೀನ್ಸ್ ಟು ಮ್ಯಾನ್ ಅಂಡ್ ಇನ್ ಮ್ಯಾರೇಜ್' ಎಂಬ ಲೇಖನದ ಭಾವಾನುವಾದ.

ಪ್ರಕರಣಗಳೂ ನಡೆದವೆಂದು ಜನರಲ್ಲಿ ಅಸಮಾಧಾನ. ಈ ಅಸಮಾಧಾನವೇ ೧೯೭೭ರ ಚುನಾವಣೆಯಲ್ಲಿ ಇಂಥ ಸರ್ಕಾರ ಪತನವಾಗಲು ಪ್ರಬಲಕಾರಣಗಳಲ್ಲೊಂದಾಯಿತು. ವಾಸೆಕ್ಟಮಿಯ ಬಗೆಗಿದ್ದ ಊಹಾಪೋಹಗಳಿಂದಾಗಿ ಕುಟುಂಬ ಯೋಜನೆಯ ಕಾರ್ಯಕ್ರಮಗಳ ಬಗ್ಗೆ ಹೊಸ ಸರ್ಕಾರ, ಅಂದರೆ ಜನತಾ ಸರ್ಕಾರ ಅಷ್ಟೊಂದು ಗಮನ ಹರಿಸಲಿಲ್ಲ. ಕುಗ್ಗಿದ ಪ್ರೋತ್ಸಾಹದಿಂದಾಗಿ ವಾಸೆಕ್ಟಮಿಯ ಸಂಖ್ಯೆಯು ೧.೯ ಲಕ್ಷಕ್ಕೆ ಇಳಿಯಿತು. ಆದರೆ ೧೯೮೦ರಿಂದ ಈಚೆಗೆ ಈ ಸಂಖ್ಯೆ ಗಮನಾರ್ಹವಾಗಿ ಹೆಚ್ಚಾಗುತ್ತಿದ್ದು, ಈಗ ವರ್ಷಕ್ಕೆ ೫ ಲಕ್ಷದಷ್ಟು ಮಂದಿ ವಾಸೆಕ್ಟಮಿ ಚಿಕಿತ್ಸೆ ಹೊಂದುತ್ತಿದ್ದಾರೆ.

ವಾಸೆಕ್ಟಮಿ ಚಿಕಿತ್ಸೆಯು ಪುರುಷನ ಭಾವನಾತ್ಮಕ ಹಾಗೂ ಮಾನಸಿಕ ಸ್ಥಿತಿಯ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬ ವ್ಯಾಪಕ ಮೂಢ ನಂಬಿಕೆಯೂ ವಾಸೆಕ್ಟಮಿ ಪ್ರಕರಣಗಳ ಸಂಖ್ಯೆ ಇಳಿತಕ್ಕೆ ಪ್ರಬಲಕಾರಣಗಳಲ್ಲೊಂದು. ವಾಸ್ತವವಾಗಿ ವಾಸೆಕ್ಟಮಿ ಚಿಕಿತ್ಸೆ ಪುರುಷನ ಕಾಮಪ್ರವೃತ್ತಿ ಹಾಗೂ ಕಾಮಸಂತೃಪ್ತಿಯ ಮೇಲೆ ಪರಿಣಾಮ ಬೀರುತ್ತದೆಯೇ? ವಾಸೆಕ್ಟಮಿ ಹೊಂದಿದ ಪುರುಷ ತನ್ನ ಸಂಭೋಗ ಶಕ್ತಿ ಕುಂದಿತು, ತಾನು ಪೌರುಷಹೀನನಾಗಿದ್ದೇನೆ ಎಂದು ಯೋಚಿಸುವನೆ?

ಸಂದೇಹ ಮತ್ತು ಭಯ: ಈ ಬಗೆಯ ಸಂದೇಹ ಹಾಗೂ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಲು ದೇಶಾದ್ಯಂತ ವೈದ್ಯರು ಹಾಗೂ ಲೈಂಗಿಕ ತಜ್ಞರು ಜನನ ನಿಯಂತ್ರಣಕ್ಕೆ ವಾಸೆಕ್ಟಮಿ ಚಿಕಿತ್ಸಾ ವಿಧಾನ ಅನುಸರಿಸಿದ ದಂಪತಿಗಳನ್ನು ಸಂದರ್ಶಿಸಿದ್ದಾರೆ. ಈ ಸಂದರ್ಶನಗಳ ವಿವರ ತಿಳಿದು ಬಂದ ಮುಖ್ಯ ಅಂಶವೆಂದರೆ ಅವರಾರಿಗೂ ತಾವು ಕೈಗೊಂಡ, ಅನುಸರಿಸಿದ ಮಾರ್ಗದ ಬಗ್ಗೆ ವಿಷಾದವಿಲ್ಲ; ತೃಪ್ತಿಯಿದೆ. ಮುಂಬಯಿನ ಬ್ಯಾಂಕೊಂದರಲ್ಲಿ ಗುಮಾಸ್ತನಾಗಿ ಕಾರ್ಯನಿರ್ವಹಿಸುತ್ತಿರುವ ಅಶೋಕ್ ರಾವತೆ ಎಂಬ ತರುಣನ ಅಭಿಪ್ರಾಯ ಇದು. "ನಮಗೀಗ ಮೂರು ಮಕ್ಕಳಿವೆ. ಇದಕ್ಕೂ ಹೆಚ್ಚಿನ ಮಕ್ಕಳನ್ನು ಸಾಕಲು ನಮಗೆ ಚೈತನ್ಯವಿಲ್ಲ. ವಾಸೆಕ್ಟಮಿ ನನ್ನ ಲೈಂಗಿಕ ಚಟುವಟಿಕೆಯ ಮೇಲೆ ಪರಿಣಾಮಬೀರಬಹುದೆಂದು ನಾನೂ ಆರಂಭದಲ್ಲಿ ಹೆದರಿದ್ದೆ. ನನ್ನ ಸಹೋದ್ಯೋಗಿಯೊಬ್ಬ ವಾಸೆಕ್ಟಮಿ ಮಾಡಿಸಿಕೊಂಡಿದ್ದು, ಅದರಿಂದ ಅವನಿಗೆ ಏನೂ ತೊಂದರೆಯಾಗಲಿಲ್ಲವೆಂದೂ ವಿನಾಕಾರಣ ಭಯಕ್ಕೆ ಆಸ್ಪದವಿಲ್ಲವೆಂದೂ ವಿವರಿಸಿದ."

ಇಂಥ ಆತಂಕಗಳಿಗೆ ಆಧಾರವಿಲ್ಲ. ವಾಸೆಕ್ಟಮಿ ಚಿಕಿತ್ಸೆಗೊಳಗಾಗುವುದ

ರಿಂದಲೇ ದಂಪತಿಗಳಲ್ಲಿ ಯಾವುದೇ ಹೊಸ ಲೈಂಗಿಕ ಸಮಸ್ಯೆ ಉದ್ಭವವಾಗುವುದಿಲ್ಲ. ಮುಂಬಯಿನ ಲೈಂಗಿಕ ತಜ್ಞರಾದ ಡಾ|| ಪ್ರಕಾಶ್ ಕೊಠಾರಿಯವರು ಹೇಳುತ್ತಾರೆ. "ವಾಸೆಕ್ಟಮಿಯಿಂದ ಗಂಡಸಿನ ಕಾಮಪ್ರವೃತ್ತಿಯಲ್ಲಾಗಲಿ ಸಂಭೋಗಶಕ್ತಿಯಲ್ಲಾಗಲಿ ಯಾವ ಕೊರತೆಯೂ ಉಂಟಾಗುವುದಿಲ್ಲ. ಶಸ್ತ್ರಚಿಕಿತ್ಸೆಯ ನಂತರವೂ ಪುರುಷನ ಲೈಂಗಿಕ ಜೀವನ ಯಾವುದೇ ಬದಲಾವಣೆಗೆ ಒಳಗಾಗದೆ ನಿರಾತಂಕವಾಗಿ ಸಾಗುತ್ತದೆ." ಎಷ್ಟೋ ವೇಳೆ, ಜನನ ನಿಯಂತ್ರಣದ ಬಗೆಗಿನ ಚಿಂತೆ ಹಾಗೂ ಗರ್ಭನಿರೋಧಕಗಳನ್ನು ಬಳಸುವುದರಿಂದ ಉಂಟಾಗುವ ದುಷ್ಪರಿಣಾಮಗಳ ಚಿಂತೆ ದೂರವಾಗುವುದರಿಂದ ಎಷ್ಟೋ ದಂಪತಿಗಳಿಗೆ ತಮ್ಮ ಲೈಂಗಿಕ ಸಂಬಂಧ ಸುಧಾರಿಸಿದೆ ಅನ್ನಿಸಿದೆ. ಬಹಳಷ್ಟು ಪ್ರಕರಣಗಳಲ್ಲಿ ಲೈಂಗಿಕ ಸಂತೃಪ್ತಿ, ಪದೇಪದೇ ಸಂಭೋಗದಲ್ಲಿ ತೊಡಗುವ ಆಸಕ್ತಿ ಹೆಚ್ಚಾಗುತ್ತದೆ.

ವಾಸೆಕ್ಟಮಿ ಚಿಕಿತ್ಸೆಗೊಳಗಾದ ವ್ಯಕ್ತಿ ಮಾನಸಿಕ ಚಿಂತೆಯನ್ನು ದೂರಮಾಡಬೇಕೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ಮುಂಬಯಿನ ಲೈಂಗಿಕ ತಜ್ಞರೂ ಭಾರತ ಕುಟುಂಬ ಯೋಜನಾ ಸಂಘದ ಸಲಹೆಗಾರರೂ ಆದ ಡಾ|| ಮಹೀಂದರ್ ವತ್ಸಾ ಹೇಳುತ್ತಾರೆ. "ವಾಸೆಕ್ಟಮಿ ಹೊಂದುವ ಮುನ್ನ, ಈ ಚಿಕಿತ್ಸೆಹೊಂದುವ ವ್ಯಕ್ತಿಗೆ ಅದರ ಸಾಧಕಬಾಧಕಗಳ ಬಗ್ಗೆ ಪೂರ್ಣ ತಿಳಿವಳಿಕೆ ಹೊಂದುವ ವ್ಯವಸ್ಥೆಯಿದ್ದರೆ ಉತ್ತಮ. ಈ ಬಗೆಯ ತಿಳಿವಳಿಕೆಯ ವ್ಯವಸ್ಥೆಯಿಂದ ವಾಸೆಕ್ಟಮಿ ಬಗೆಗಿನ ಆತಂಕ, ಭಯಗಳನ್ನು ನಿವಾರಿಸಬಹುದು." ಹೆಂಡತಿಯ ಪ್ರಬಲ ವಿರೋಧವಿದ್ದರೆ ವಾಸೆಕ್ಟಮಿಯು ಅರ್ಥಪೂರ್ಣಮಾರ್ಗವಲ್ಲ.

ಶಸ್ತ್ರಕ್ರಿಯೆಯಿಂದ ಉಂಟಾಗಬಹುದಾದ ನೋವು, ಇಂಥ ಸಂದರ್ಭದಲ್ಲಿ ನಡೆಯಬಹುದಾದ ಆಕಸ್ಮಿಕ—ಇವುಗಳನ್ನು ನೆನೆದು ಶಸ್ತ್ರಚಿಕಿತ್ಸೆಗೊಳಗಾಗುವ ವ್ಯಕ್ತಿ ಭಯಗ್ರಸ್ತನಾಗುವುದು ಸಹಜವೇ. ವಾಸ್ತವ ಸಂಗತಿಯೆಂದರೆ ಇತ್ತೀಚಿನ ದಿನಗಳಲ್ಲಿ ವಾಸೆಕ್ಟಮಿಯು ಹಲ್ಲು ಕೀಳಿಸುವ ಶಸ್ತ್ರಚಿಕಿತ್ಸೆಗಿಂತಲೂ ಸುಲಭವು ಎಂದು ಪರಿಗಣಿಸಲಾಗಿದೆ.

ಶಸ್ತ್ರಚಿಕಿತ್ಸಾ ಕ್ರಮ: ಈ ಸಂದರ್ಭದಲ್ಲಿ ಸಂಕ್ಷಿಪ್ತವಾಗಿ ನಡೆಯುವ ಸಂಗತಿ ಇಷ್ಟು. ಮೊದಲಿಗೆ ಶಸ್ತ್ರಚಿಕಿತ್ಸಕ ತೊಡೆಯ ಮೇಲುಭಾಗದಲ್ಲಿರುವ ಅಂಡಕೋಶದ ಮೇಲುಭಾಗದಲ್ಲಿ ನೋವು ಕಾಣದಂತೆ ಚುಚ್ಚುಮದ್ದು ಕೊಟ್ಟು ಚರ್ಮದ ಮೇಲೆ ಅದರ ಕೆಳಗಿನ ಪದರವನ್ನು ಚಾಕುವಿನಿಂದ ಒಂದು ಇಂಚಿನಷ್ಟು ಕೊಯ್ದು, ಬೀಜನಾಳವನ್ನು ಅದರ ಜೊತೆಗಿರುವ ರಕ್ತನಾಳ, ನರಗಳಿಂದ ಬಿಡಿಸಿಕೊಂಡು ಚಿಮುಟದಲ್ಲಿ ಅದುಮಿ ಹಿಡಿದು, ಎರಡು ಇಂಚು ಉದ್ದ ಕತ್ತರಿಸಿ

ಹಾರೆ. ಎರಡು ಕೊನೆಗಳನ್ನು ಕಟ್ಟಿ, ಒಳಕ್ಕೆ ಸೇರಿಸಿ, ಮೇಲೆ ಚರ್ಮ ಹೊಲಿಯುತ್ತಾರೆ. ಹೀಗೆ ಮಾಡುವುದರಿಂದ ಅಂಡಾಶಯದಲ್ಲಿ ಸಿದ್ಧವಾಗುತ್ತಿರುವ ವೀರ್ಯಾಣುಗಳು ವೀರ್ಯನಾಳಗಳ ಮೂಲಕ ಮುಂದೆ ಬರಲಾಗದಂತಾಗುತ್ತದೆ. ಹಾಗಾಗಿ ವೀರ್ಯಾಣುಗಳ ಸೃಷ್ಟಿಯೇ ನಿಂತು ಹೋಗುವುದು. ಆದರೆ ವೀರ್ಯಾಶಯ ಕೂಪರ್ಸ್ ಗ್ರಂಥಿ, ಪ್ರಾಸ್ಟೇಟ್ ಗ್ರಂಥಿಗಳ ರಸಗಳು ಯಥಾಪ್ರಕಾರ ಸ್ರವಿಸುವುದರಿಂದ ಸಂಭೋಗದಲ್ಲಿ ಸುಖ ಮತ್ತು ವೀರ್ಯಸ್ಖಲನದ ತೃಪ್ತಿ ಒದಗುವುದು.

ಶಸ್ತ್ರಚಿಕಿತ್ಸೆಯ ಅನಂತರ ಎರಡು ಮೂರು ದಿನಗಳು ನೋವು ತಾಳಿಕೊಳ್ಳಬೇಕು. ನೋವಿಗೆ ಪರಿಹಾರವೆಂದರೆ ಆಸ್ಪಿರಿನ್ ಮಾತ್ರೆಗಳು ಹಾಗೂ ಒಂದು ಪ್ಯಾಕ್ ಮಂಜುಗಡ್ಡೆ. ಒಮ್ಮೊಮ್ಮೆ ಮಾತ್ರ ನೋವು, ಊತ, ನಂಜಾಗುವುದು, ಶಸ್ತ್ರಕ್ರಿಯೆ ನಡೆಸಿದ ಭಾಗದಲ್ಲಿ ರಕ್ತ ಹೆಪ್ಪುಗಟ್ಟುವುದು, ವೃಷಣಕೋಶದಲ್ಲಿ ದ್ರವಸಂಗ್ರಹಗೊಳ್ಳುವುದು ಇಂಥ ದುಷ್ಪರಿಣಾಮಗಳು ಕಾಣಿಸಿಕೊಳ್ಳಬಹುದು. ಆದರೆ ಈ ಎಲ್ಲ ಬಗೆಯ ರೋಗವನ್ನು ಸುಲಭವಾಗಿ ಗುಣಪಡಿಸಬಹುದು. ೪–೫ ದಿನಗಳ ವಿರಾಮದ ಅನಂತರ ವ್ಯಕ್ತಿ ತನ್ನ ದೈನಂದಿನ ಚಟುವಟಿಕೆಗಳಲ್ಲಿ ಮಗ್ನವಾಗಬಹುದು. ಗಾಯಗುಣವಾದ ಬಳಿಕ, ೮–೧೦ ದಿನಗಳಲ್ಲಿ ಸ್ತ್ರೀಸಂಗ ಮಾಡಬಹುದು. ಸಂತತಿ ನಿರೋಧ ಚಿಕಿತ್ಸೆಯಲ್ಲಿ ವೀರ್ಯನಾಳದಲ್ಲಿ ಪ್ರವಹಿಸುವ ವೀರ್ಯ ಪೂರ್ಣವಾಗಿ ಖಾಲಿಯಾಗುವವರೆಗೆ ಪುರುಷರು ಯಾವುದಾದರೂ ಗರ್ಭನಿರೋಧ ಸಾಧನ ಬಳಸುವುದು ಉತ್ತಮ. ಇಲ್ಲವಾದರೆ ಗರ್ಭಧಾರಣೆಯಾಗುವ ಸಂಭವ ಕೂಡ ಇರುತ್ತದೆ. ೨-೩ ತಿಂಗಳು ತಡೆದು ಸಂಭೋಗಿಸಿದರೆ ಉತ್ತಮ. ಏಕೆಂದರೆ ಈ ವೇಳೆಗಾಗಲೇ ಈ ಶೇಖರಣೆಗೊಂಡ ವೀರ್ಯ ಬರಿದಾಗಿರುತ್ತದೆ.

ಚಿಕಿತ್ಸಾ ಕೇಂದ್ರ ಅಥವಾ ಆಸ್ಪತ್ರೆಯ ದರ್ಜೆಗೆ ಅನುಗುಣವಾಗಿ ಯಾವುದೇ ಕಡೆ ವಾಸೆಕ್ಟಮಿಗೆ ಮುನ್ನೂರು ರೂಪಾಯಿಗಳಿಂದ ಸಾವಿರ ರೂಪಾಯಿಗಳ ಖರ್ಚು ತಗುಲಬಹುದು. ಸಾರ್ವಜನಿಕ ಆರೋಗ್ಯ ಸೇವೆಯು ಈ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸುತ್ತದೆ.

ವೀರ್ಯಶಕ್ತಿ ಪುನಃ ಸ್ಥಾಪನ ವ್ಯವಸ್ಥೆ : ವಾಸೆಕ್ಟಮಿ ಮಾಡಿಸಿಕೊಂಡು ಬಹುದಿನಗಳ ಆದ ಅನಂತರ ಮತ್ತೆ ಆ ವ್ಯಕ್ತಿಗೆ ಮಕ್ಕಳನ್ನು ಪಡೆಯಬೇಕೆಂಬ ಇಚ್ಛೆಯಾದರೆ ಏನುಮಾಡುವುದು ? ತಮಗೆ ಇನ್ನು ಮಕ್ಕಳು ಬೇಡವೇ ಬೇಡ ಎಂದು ತೀರ್ಮಾನಿಸಿದವರು ಮಾತ್ರ ವಾಸೆಕ್ಟಮಿ ಚಿಕಿತ್ಸೆಪಡೆಯಬೇಕೆಂದು ವೈದ್ಯರು ಒತ್ತಿಹೇಳುತ್ತಾರೆ. ಮುಂಬಯಿನ ಮೂತ್ರವಿಜ್ಞಾನಿ ಹಾಗೂ ಸರ್ಜನ್

ಅದ ಡಾ॥ ಫರ್ದೂನ್ ಸೂನಾವಾಲ ಅವರ ಅಭಿಪ್ರಾಯವಿದು "ಗ್ರಾಮೀಣ ಪರಿಸರಗಳಲ್ಲಿ, ಮಕ್ಕಳ ಸಾವಿನ ಸಂಖ್ಯೆ ಅಧಿಕವಾಗಿರುವ ಭಾರತದಂತ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವಾಸೆಕ್ಟಮಿಗೊಳಗಾದ ವ್ಯಕ್ತಿ ತನ್ನ ಪುರುಷಶಕ್ತಿಯನ್ನು ಪುನಃ ಹೊಂದಲು ಇಚ್ಛಿಸಬಹುದು. ಅದೃಷ್ಟವಶಾತ್ ಇಂಥ ವೀರ್ಯಶಕ್ತಿ ಪುನಃಸ್ಥಾಪನೆ ವ್ಯವಸ್ಥೆಯ ಸಾಧ್ಯತೆಗಳು ದಿನೇದಿನೇ ಹೆಚ್ಚಾಗುತ್ತಿದೆ. ಆಧುನಿಕ ಸೂಕ್ಷ್ಮ ಶಸ್ತ್ರಚಿಕಿತ್ಸಾ ವಿಧಾನದಿಂದ ಇದು ಸಾಧ್ಯ. ಇದುವರೆಗೆ ಇಂಥ ೨೦೦ ಪ್ರಯೋಗಗಳನ್ನು ಮಾಡಿರುವ ಡಾ॥ ಸೂನಾವಲ ಅವರು ವಾಸೆಕ್ಟಮಿ ಚಿಕಿತ್ಸೆ ಪಡೆದ ಹತ್ತು ವರ್ಷಗಳ ಒಳಗೆ ಈ ಬಗೆಯ ಚಿಕಿತ್ಸೆ ನಡೆಸಿದರೆ ಹತ್ತರಲ್ಲಿ ಒಂಬತ್ತು ಪ್ರಕರಣಗಳಲ್ಲಿ ಯಶಸ್ಸು ದೊರೆಯುತ್ತದೆ" ಎಂಬ ಅಭಿಪ್ರಾಯ ಪಡುತ್ತಾರೆ.

ಇಂಥ ಸಾಧ್ಯತೆಯೇನೇ ಇದ್ದರೂ ಇದಕ್ಕೆ ತಗಲುವ ಖರ್ಚು ದುಬಾರಿ, ದೀರ್ಘಕಾಲ ಬೇಕಾಗುತ್ತದೆ. ಭಾರತದಲ್ಲಿ ಕೆಲವೇ ಮಂದಿ ವೈದ್ಯರು ಮಾತ್ರ ಇಂಥ ಚಿಕಿತ್ಸೆಯಲ್ಲಿ ತಜ್ಞರಾಗಿದ್ದಾರೆ. ಯಶಸ್ಸಿನ ಸಾಧ್ಯತೆಯೂ ಅಷ್ಟೇನೂ ಗ್ಯಾರಂಟಿಯಲ್ಲ. ದಂಪತಿಗಳ ವಯಸ್ಸು, ಶಸ್ತ್ರಚಿಕಿತ್ಸಕನ ನಿಪುಣತೆ ಈ ಚಿಕಿತ್ಸೆಯಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ವಾಸೆಕ್ಟಮಿಯಾದ ಐದು ವರ್ಷಗಳ ಒಳಗೆ ಇಂಥ ಚಿಕಿತ್ಸೆ ಪಡೆದರೆ ವೀರ್ಯಾಣುಗಳ ಶೀಘ್ರ ಅಭಿವೃದ್ಧಿಯ ಸಾಧ್ಯತೆ ಹೆಚ್ಚು. ಹಾಗೆಯೇ ಗರ್ಭಧಾರಣೆಯ ಸಾಧ್ಯತೆಯೂ ಅಧಿಕ. ಈ ಎರಡೂ ಚಿಕಿತ್ಸೆಗಳ ನಡುವಣ ಅವಧಿ ಹತ್ತುವರ್ಷಗಳಿಗೂ ಹೆಚ್ಚಾಗಿದ್ದರೆ ಈ ಬಗೆಯ ಕ್ರಿಯೆ ಬಹಳ ಮಂದಗತಿಯಲ್ಲಿ ನಡೆಯುವುದು; ಅಷ್ಟೇ ಅಲ್ಲ, ಫಲಕಾರಿಯಾಗುವ ಸಾಧ್ಯತೆಯೂ ಕಡಿಮೆ; ಫಲಕಾರಿಯಾಗದೆಯೂ ಹೋಗಬಹುದು" ಎನ್ನುತ್ತಾರೆ. ಡಾ॥ ಸೂನವಾಲ. ವೃಷಣದಲ್ಲಿ ಉತ್ಪತ್ತಿಯಾಗುವ ವೀರ್ಯಾಣುಗಳನ್ನು ಸಂಗ್ರಹಿಸಿ ಕೊಂಡೊಯ್ಯುವ ನಾಳ ಉಂಟು. ಈ ನಾಳ ಹೇರಳವಾಗಿ ಸುಲಿದುಕೊಂಡು ವೃಷಣಕೋಶದಲ್ಲಿಯೇ ವೃಷಣವನ್ನು ಆವರಿಸಿಕೊಂಡಿದೆ. ಈ ಭಾಗಕ್ಕೆ ಎಪಿಡಿಡೈಮಿಸ್ ಎಂದು ಹೆಸರು. ಈ ಎಪಿಡಿಡೈಮಿಸ್ ಕೆಲವು ಬದಲಾವಣೆಗಳಿಗೆ ಒಳಗಾಗಿಬಿಟ್ಟರೆ ಇದು ವೀರ್ಯದ ಫಲತ್ವದ ಮೇಲೆ ಪರಿಣಾಮ ಬೀರಿ ಶಸ್ತ್ರಚಿಕಿತ್ಸೆಯ ನಂತರವೂ ವ್ಯಕ್ತಿಯು ಪುರುಷತ್ವವನ್ನು ಪುನಃ ಪಡೆಯದೇ ಹೋಗಬಹುದು ಎಂಬ ಅಭಿಪ್ರಾಯವನ್ನು ಮುಂಬಯಿನ ಕೆ.ಇ.ಎಂ. ಆಸ್ಪತ್ರೆಯ ಮೂತ್ರವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕರೂ ಇಲಾಖಾ ಮುಖ್ಯರೂ ಆದ ಡಾ॥ ದೇಶ್‌ಪಾಂಡೆ ವ್ಯಕ್ತಪಡಿಸಿದ್ದಾರೆ.

ಮುಂಬಯಿ ನಗರಸಭೆಯ ಕುಟುಂಬ ಕಲ್ಯಾಣ ವಿಭಾಗದ ಕಾರ್ಯನಿರತ ವಿಶೇಷಾಧಿಕಾರಿಯಾದ ಡಾ|| ದತ್ತ ಪೈ ಅವರು ಹೇಳುತ್ತಾರೆ: "ವಾಸೆಕ್ಟಮಿಯ ಬಗ್ಗೆ ಬಹುವಾಗಿ ವಿರೋಧ ಕಂಡುಬಂದರೂ ನಾವು ನಮ್ಮ ಪುರುಷ ಸಮಾಜಕ್ಕೆ ಈ ಬಗ್ಗೆ ಸರಿಯಾದ ತಿಳಿವಳಿಕೆ ನೀಡುವುದು ಸಾಧ್ಯವಾದರೆ ಇದು ಜನನ ನಿಯಂತ್ರಣದ ಸ್ವೀಕಾರಾರ್ಹ ವಿಧಾನವಾಗಿ ಅಭಿವೃದ್ಧಿ ಹೊಂದುವ ಸಾಧ್ಯತೆ ಇದೆ." ಸಂಪೂರ್ಣಜ್ಞಾನ, ತಿಳಿವಳಿಕೆ, ಉತ್ತಮ ಶಸ್ತ್ರಚಿಕಿತ್ಸಾ ಕ್ರಮ, ಮುನ್ಸೂಚನೆಗಳ ಆಧಾರದ ಮೇಲೆ ವಾಸೆಕ್ಟಮಿ ಚಿಕಿತ್ಸೆ ನಡೆಸಿದರೆ ಇದು ಪುರುಷನ ಮೇಲೆ ಹಾಗೂ ಅವನ ವೈವಾಹಿಕ ಜೀವನದ ಮೇಲೆ ಒಳ್ಳೆಯ ಪ್ರಭಾವ ಬೀರಬಹುದು.

ಕೃಷ್ಣ ದಾಸನ



ಜಗಳಗಳೆಲ್ಲ ವ್ಯರ್ಥಕಾರಣಗಳಿಂದ, ಹುಟ್ಟಿಕೊಳ್ಳುತ್ತವೆ. ಇವುಗಳಲ್ಲಿ ಸತ್ಯಕ್ಕೆ ಸ್ಥಾನವೇ ಇರುವುದಿಲ್ಲ.

—ಸ್ಟೈರನ್

ಜೀವನದ ದಾರಿಯಲ್ಲಿ ನಡೆಯುತ್ತ ಸಾಯುವುದೂ ಬದುಕೇ ಆಗಿರುವುದು. ದಾನವನ ದಾರಿಯಲ್ಲಿ ನಡೆಯುತ್ತ ಬದುಕಿರುವುದೂ ಸಾವೇ ಆಗಿರುವುದು.

—ವಿನೋಬಾ

ಸುಖಗಳು ಶಾಶ್ವತವಾದವುಗಳಲ್ಲ. ಆದರೆ ಕಳೆದುಹೋದ ಸುಖದ ದಿನಗಳನ್ನು ನೆನೆದುಕೊಳ್ಳುವುದೇ ದುಃಖದ ಮೂಲ.

—ಟೆನಿಸನ್

ಪುಸ್ತಕ ವಿಮರ್ಶೆ

ಸ್ವಂತ ವೈದ್ಯ ಅಪಾಯಕಾರಿ—ಲೇಖಕರು : ಡಾ॥ ಆರ್. ಸಿ. ಅಗಡಿ, ಪ್ರಕಾಶಕರು: ಕಿರಣ ಪ್ರಕಾಶನ, ಸಂಶಿ, ಪುಟಗಳು : ೭೨, ಬೆಲೆ : ನಾಲ್ಕು ರೂಪಾಯಿ.

ಇತ್ತೀಚೆಗೆ ಕನ್ನಡದಲ್ಲಿಯೂ ವೈದ್ಯ ವಿಜ್ಞಾನ ಶಾಸ್ತ್ರ ಭರದಿಂದ ಬೆಳೆಯುತ್ತಿರುವುದು ಸಂತೋಷದ ಸಂಗತಿ. ಈ ದಿಸೆಯಲ್ಲಿ ಡಾ॥ ಅಗಡಿಯವರು ಶ್ಲಾಘನೀಯ ಸೇವೆ ಸಲ್ಲಿಸುತ್ತಿದ್ದಾರೆ. ಈಗಾಗಲೇ ಐದಾರು ಕೃತಿಗಳನ್ನೂ ರಚಿಸಿರುವುದೇ ಮೇಲಿನ ಮಾತಿಗೆ ಸಾಕ್ಷಿ. ಅವುಗಳಲ್ಲಿ ಇದೊಂದು, ಆರೋಗ್ಯ ಭಾಗ್ಯಕ್ಕಿಂತ ಹೆಚ್ಚಿನ ಭಾಗ್ಯ ಇನ್ನೊಂದಿಲ್ಲ. ಅದು ಸರಿಯಾಗಿದ್ದರೇನೇ ಉಳಿದ ವೆಲ್ಲವೂ ಚೆನ್ನು. ಆರೋಗ್ಯ ರಕ್ಷಣೆ—ಪೋಷಣೆ ಮಾಡಿಕೊಳ್ಳುವುದು ಪ್ರತಿಯೊಂದು ಜೀವಿಯ ಆದ್ಯ ಕರ್ತವ್ಯವಾಗಿದೆ. ಇದೀಗ ದಿನಬೆಳಗಾದರೆ ಅನೇಕ ಔಷಧಿಗಳು ಹೊರಬರುತ್ತಿವೆ. ಅವುಗಳ ಸರಿಯಾದ ಪ್ರಯೋಜನ ಪಡೆಯಲು ವೈದ್ಯರ ಸಲಹೆ ಸೂಚನೆಗಳು ಅತ್ಯವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. ಈ ದೃಷ್ಟಿಯಿಂದ 'ಸ್ವಂತ ವೈದ್ಯ ಅಪಾಯಕಾರಿ' ಎಂಬ ಕೃತಿ ಬಹು ಉಪಯುಕ್ತವಾಗಿದೆ. ಸಾವು ಒಂದು ; ಬರೆ ಇನ್ನೊಂದಾದರೆ ಮಾನವನು ಪಡಬಾರದ ಬವಣೆಯನ್ನು ಅನುಭವಿಸಬೇಕಾಗುತ್ತದೆ. ಔಷಧಗಳ ಸರಿಯಾದ ಬಳಕೆಯಾದರೆ ಅಮೃತ, ಇಲ್ಲವಾದರೆ ವಿಷ. ಅಪಾಯದ ಗಂಟೆ ಸದಾ ಬಾರಿಸುತ್ತದೆ. ಬಹು ಎಚ್ಚರಿಕೆಯಿಂದ ಅವುಗಳ ಸರಿಯಾದ ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಈ ಕೃತಿಯಲ್ಲಿ ಸಾಮಾನ್ಯ ರೋಗಗಳಾದ ತಲೆನೋವು, ಹೊಟ್ಟೆನೋವು, ಮಲಬದ್ಧತೆ, ನೆಗಡಿಗಳ ಉಪಶಮನಕ್ಕಾಗಿ ವೈದ್ಯರ ಸಲಹೆ ಪಡೆಯದೆ ಪೇಟೆಯಲ್ಲಿ ಸುಲಭವಾಗಿ ದೊರೆಯುವ ಔಷಧಗಳನ್ನು ಸೇವಿಸುವದು ಬಹು ಅಪಾಯಕಾರಿ ಎಂಬುದನ್ನು ವಿವರಿಸಲಾಗಿದೆ. ಮಲಬದ್ಧತೆಗೆ ಸೋಡಾ ಕುಡಿಯುವುದಾಗಲೀ ಔಡಲಎಣ್ಣೆಯನ್ನು ತೆಗೆದುಕೊಳ್ಳುವದಾಗಲೀ ಪರಮೋಪಾಯವಲ್ಲ. ವೈದ್ಯರಿಂದ ಚಿಕಿತ್ಸೆ ಮಾಡಿಸಿಕೊಂಡು ಸರಿಯಾದ ಔಷಧೋಪಚಾರ ಪಡೆಯಬೇಕು. ಇಲ್ಲವಾದರೆ ಕರುಳಿನ ಕ್ಷಯ, ಕರುಳಿನ ಕ್ಯಾನ್ಸರ್, ಕಾಮಾಲೆ ರೋಗ, ಪಿತ್ತಜನಕಾಂಗದ ರೋಗ, ಯಕೃತ್ತಿನ ರೋಗ, ಕರುಳಬಾಲದ ಉರಿತ ಮುಂತಾದವುಗಳಿಗೆ ಬಲಿಯಾಗಬೇಕಾಗುತ್ತದೆಂಬುದನ್ನು ಸೂಚಿಸಿದ್ದಾರೆ.

ಬೇರೆ ಬೇರೆ ಔಷಧಿಯ ಪರಿಣಾಮವು ಬೇರೆ ಬೇರೆ ವ್ಯಕ್ತಿಗಳ ಮೇಲೆ ಬೇರೆ ಬೇರೆ ರೀತಿಯದಾಗಿರುತ್ತದೆ. ಅದು ವ್ಯಕ್ತಿಯ ತೂಕ, ವಯಸ್ಸು, ಉದ್ಯೋಗ, ದೇಹದ ಪ್ರತಿರೋಧಕ ಶಕ್ತಿ ಮುಂತಾದ ಅಂಶಗಳನ್ನು ಅವಲಂಬಿಸಿರುತ್ತದೆಂಬುದರ ಬಗೆಗೆ ಇಲ್ಲಿ ವಿವರಣೆ ಕಾಣುತ್ತೇವೆ. ಮಾರ್ಫಿನ್, ಪೆಥಿಡಿನ್, ಎಲ್.ಎಸ್.ಡಿ ಮೊದಲಾದವುಗಳನ್ನು ಸೇವಿಸಿದ ಮೇಲೆ ಸೇವಿಸಬೇಕೆನಿಸುತ್ತದೆ. ಇವುಗಳಿಂದ ದೂರವಿದ್ದಷ್ಟು ಕ್ಷೇಮಕರವೆಂಬ ಮಹತ್ತ್ವದ ವಿಷಯವನ್ನು ಎತ್ತಿತೋರಿಸಿರುವುದು ಗಮನಾರ್ಹ! ಔಷಧಿಯ ಮೇಲೆ ಔಷಧಿ ಸೇವಿಸಿದರೆ ಆಗುವ ಪರಿಣಾಮವನ್ನು ಚೆನ್ನಾಗಿ ತಿಳಿಸಲಾಗಿದೆ. ಸೋಡಾ ಕುಡಿಯುವ ಹವ್ಯಾಸವಿದ್ದವರ ಮೂತ್ರಪಿಂಡಗಳಿಗೆ ಹೆಚ್ಚಿನ ಕಾರ್ಯ ಬೀಳುತ್ತದೆಯೆಂಬುದನ್ನೂ ಜಠರದ ಹುಣ್ಣು ಬೆಳೆಯುವ ಸಂಭವ ಹೆಚ್ಚೆಂಬುದನ್ನೂ ವಿಶ್ಲೇಷಿಸಲಾಗಿದೆ. ಯುವ ಜನಾಂಗದಲ್ಲಿ ಇತ್ತೀಚೆಗೆ ಮಾದಕ ಪದಾರ್ಥಗಳ ಸೇವನೆ ಹೆಚ್ಚುತ್ತಿರುವ ಬಗೆಗೆ ವಿಷಾದಿಸಿ ಅದರಿಂದ ದೂರವಿರುವ ಪ್ರಯತ್ನ ಸಾಧ್ಯವಿದೆಯೆಂಬುದನ್ನು ಅನೇಕ ಅಂಶಗಳಿಂದ ಸ್ಪಷ್ಟೀಕರಿಸಿದ್ದಾರೆ.

ಇಂದಿಗೂ ನಮ್ಮ ಜನತೆಯಲ್ಲಿ ಅಜ್ಞಾನ, ಮೂಢನಂಬಿಕೆಗಳು ಮನೆಮಾಡಿ ಕೊಂಡಿವೆ. ಹಳ್ಳಿಗಳಲ್ಲಿ ಗಾಯಗಳಾದರೆ ಮಣ್ಣು, ಬೂದಿ, ಸಗಣಿಗಳನ್ನು ಹಚ್ಚುವ ರೂಢಿಯಿದೆ. ಇವುಗಳಲ್ಲಿ ಧನುರ್ವಾಯು ತರುವ ರೋಗಾಣುಗಳಿರುತ್ತವೆಯೆಂಬುದನ್ನು ಇಲ್ಲಿ ಎತ್ತಿತೋರಿಸಲಾಗಿದೆ. ಮಕ್ಕಳಿಗೆ ರೋಗಗಳು ಬಂದಾಗ ಮಂತ್ರಯಂತ್ರಗಳಿಂದ ರೋಗ ನಿದಾನ ಮಾಡಿಸದೆ ಸಮರ್ಥ ವೈದ್ಯರಿಂದ ಔಷಧೋಪಚಾರ ಮಾಡಿಸುವುದೇ ಸೂಕ್ತವೆಂಬ ಅಭಿಪ್ರಾಯವನ್ನು ಅನೇಕ ಉದಾಹರಣೆಗಳ ಮೂಲಕ ದೃಢೀಕರಿಸಲಾಗಿದೆ. ಹಾಗೆಯೇ ಔಷಧಿಗಳು ಮಕ್ಕಳ ಕೈಗೆ ನಿಲುಕದಂತೆ ರಕ್ಷಿಸುವುದರ ಬಗೆಗೆ ಎಚ್ಚರಿಕೆಯ ಕ್ರಮಗಳನ್ನು ಕೊಡಲು ಮರೆತಿಲ್ಲ. ಇತ್ತೀಚೆಗಂತೂ ನಕಲಿ ವೈದ್ಯರೂ ಹೆಚ್ಚಾಗಿದ್ದಾರೆ. ಇಂಥವರ ಕೈಗೆ ಸಿಕ್ಕಿದ ರೋಗಿಯ ಪಾಡು ಹೇಳಲಸದಳ. ಆದುದರಿಂದ ಅವಸರವಾದರೆ ತಜ್ಞ ಅನುಭವಿ ವೈದ್ಯರ ಕಡೆಗೆ ಉಪಚಾರ ಪಡೆಯುವುದು ಶ್ರೇಯಸ್ಕರ. ತಡವಾದರೂ ಚಿಂತೆಯಿಲ್ಲ. ಎಲ್ಲವನ್ನು ಸರಿಯಾಗಿ ಪರೀಕ್ಷಿಸಿ ರೋಗಕ್ಕೆ ತಕ್ಕಮದ್ದು ಸೂಚಿಸುವವನು ಎಂಬ ಅಭಿಪ್ರಾಯವನ್ನು ಸಾಧಾರವಾಗಿ ಪ್ರತಿಪಾದಿಸಿರುವುದು ಸಮುಚಿತವಾಗಿದೆ. ಇಪ್ಪತ್ತೊಂದನೆಯ ಶೀರ್ಷಿಕೆ ಔಷಧಿ ಸೇವಿಸುವವರಿಗೊಂದು ಕಿವಿಮಾತು ಅತ್ಯಂತ ಉಪಯುಕ್ತವಾಗಿದೆ. ಹದಿನೆಂಟು ಸೂಕ್ತ ಸಲಹೆಗಳನ್ನು ಸದಾ ನೆನಪಿನಲ್ಲಿಡುವಂತಹವುಗಳಾಗಿವೆ. ಇವ

ರೋಗಿಗೆ ಮೂಢನಂಬಿಕೆ ಸ್ವಂತ ವೈದ್ಯರಷ್ಟೇ ಅಪಾಯಕಾರಿ ಎಂಬುದನ್ನು ಮನದಟ್ಟಾಗುವಂತೆ ವಿವರಿಸಲಾಗಿದೆ. ಮಕ್ಕಳ ಹಲ್ಲು ಬರುವುದಕ್ಕೂ ಭೇದಿಗೂ ಯಾವ ಸಂಬಂಧವಿಲ್ಲವೆಂಬುದನ್ನು ಪ್ರತಿಪಾದಿಸಿರುವ ಮಾತುಗಳು ಮನನೀಯ ವಾಗಿವೆ. ಹೀಗೆ ಇದೊಂದು ಪ್ರಯೋಜನಕಾರಿ ಕೃತಿ. ದಿನಕ್ಕೊಂದು ಒಂದ ರಂತೆ ಸಾವಿರಾರು ಔಷಧಿಗಳು ಮಾರುಕಟ್ಟೆಗೆ ಬಂದು ಬೀಳುತ್ತವೆ. ತಜ್ಞ ವೈದ್ಯರ ಸಲಹೆ ಇಲ್ಲದೆ ಸಿಕ್ಕ ಔಷಧಿ ಸೇವಿಸಿ ಮರಣದ ದವಡೆಗೆ ಸಿಕ್ಕಿಹಾಕಿ ಕೊಳ್ಳುವುದು ತರವಲ್ಲವೆಂಬುದನ್ನು ಈ ಕೃತಿಯಿಂದ ಚನ್ನಾಗಿ ಪ್ರತಿಪಾದಿಸ ಲಾಗಿದೆ. ಈ ದಿಸೆಯಲ್ಲಿ ಇದೊಂದು ಕೈಪಿಡಿ ಇದ್ದಂತೆ ಇದೆ. ಡಾ|| ಆರ್. ಸಿ. ಅಗಡಿಯವರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಈ ಕೃತಿಯನ್ನು ರಚಿಸಿರುವುದ ರಿಂದ ಇದಕ್ಕೊಂದು ಬೆಲೆ ಬಂದಿದೆ. ಡಾ|| ಕೆ. ಎಚ್. ಜಿತೂರಿಯವರು ಈ ಕೃತಿಯ ಉಪಯುಕ್ತತೆಯನ್ನು ಎತ್ತಿ ತೋರಿಸುವ ಸೊಗಸಾದ ಮುನ್ನುಡಿ ಯನ್ನು ಬರೆದಿದ್ದಾರೆ. ಮುಖಪುಟ ಸಾಂಕೇತಿಕವಾಗಿದೆ. ಬೆಲೆ ಮಾತ್ರ ಹೆಚ್ಚಾಯಿತು. ಸಾಮಾನ್ಯ ಜನರಿಗೂ ನಿಲುಕುವಂತಿದ್ದರೆ ಇನ್ನೂ ಉತ್ತಮ ವೆಂದು ಹೇಳದಿರಲಾರೆ.

ಎಸ್. ಎಸ್. ಭೂಸರಡ್ಡಿ

* * *

ಸಂಗ್ರಾಮ—(ಖಂಡ ಕಾವ್ಯ) ಕವಿ: ಹೆಚ್. ಸೂರ್ಯದೇವ, ಪ್ರಕಾಶಕರು: ರವೀಂದ್ರ ಪ್ರಕಾಶನ: ಅಥಣಿ, ಪುಟಗಳು ೬೫, ಬೆಲೆ ೫ ರೂ.

ಕವಿ ಶ್ರೀ ಹೆಚ್. ಸೂರ್ಯದೇವರ 'ಸಂಗ್ರಾಮ' ಖಂಡ ಕಾವ್ಯ. ಇವರ 'ಮಧುಮಿಲನ' ಕವನ ಸಂಕಲನದ ತರುವಾಯ ಹೊರಬಂದ ಎರಡನೆಯ ಕೃತಿ.

ಮಧು ಕೈಟಭರಂತಹ ಉದ್ದಂಡ ಪ್ರಚಂಡ ರಾಕ್ಷಸ ಶಕ್ತಿಯನ್ನು ಚಂಡಿ ಚಾಮುಂಡಿಯಾಗಿ ಆದಿಶಕ್ತಿ ಜಗದಂಬೆ ವಿಧ್ವಂಸಗೊಳಿಸಿದಳು ಜಗದಾದಿಯಲ್ಲಿ. ಅಂದಿನಿಂದಲೂ ದುಷ್ಟತ್ವವನ್ನು ಸಂಹರಿಸಿ ಶಿಷ್ಟತ್ವವನ್ನು ಪ್ರತಿಷ್ಠಾಪಿಸುವ ಸಂಗ್ರಾಮ ನಡೆದೇ ಇದೆ. "ಶತ ಶತಮಾನಗಳಿಂದ ತುಳಿಯಲ್ಪಟ್ಟ ದೀನ ದಲಿತರ ಉಸಿರುಗಳಿಗೆ ಉದ್ಗಾರಗಳಿಗೆ ಹೊಸ ದನಿಯ ಕೊಡಲು ತಾಯಿ ಭಾರತಿ ಇಂದು ಸಂಗ್ರಾಮದ ಸನ್ನದ್ಧತೆಯಲ್ಲಿ ತನ್ಮಯಳಾಗಿದ್ದಾಳೆ" ಎಂಬ ಅಂಶವನ್ನು ಈ 'ಸಂಗ್ರಾಮ' ಖಂಡ ಕಾವ್ಯದಲ್ಲಿ ಕಂಡುಕೊಳ್ಳಬಹುದಾಗಿದೆ.

ಸೂರ್ಯದೇವರ 'ಸಂಗ್ರಾಮ' ವನ್ನೋದುತ್ತಿದ್ದಂತೆ "ಸತ್ತ ಎತ್ತಿನ ಚರ್ಮದಿಂದ ಮಾಡಿದ ತಿದಿಯು ಉಸಿರುಗರೆದರೆ ಕಬ್ಬಿಣ ಸುಟ್ಟು ರಸವಾಗಿಬಿಡುತ್ತದೆ. ಜೀವಂತವಿರುವ ದೀನದಲಿತರು ಉಸಿರು ಹಾಕಿದರೆ ಅದರ ಗತಿ ಏನಾದೀತು?" ಎಂಬರ್ಥದ ಹಿಂದೀ ದೋಹಾದ ನೆನಪು ಬರುತ್ತದೆ.

ಕವಿ ಈ ಖಂಡಕಾವ್ಯದ ಮುಖಾಂತರ ತಮ್ಮ ಹೃದಯದ ಭಾರತದಲ್ಲಿ ರಾಷ್ಟ್ರ ಭಕ್ತಿ ಜ್ಯೋತಿಯ ಬೆಳಕಿನಲ್ಲಿ ದೀನ ದಲಿತರ ಗೆಲುವಿನ ಚೆಲುಮೊಗದ ಕಳೆಯನ್ನು ಕಾಣಲು ತವಕಿಸಿದ್ದಾರೆ. ಅಂತೆಯೇ

ದಿಕ್ಕುಸರಿಯದ ದೀನ ಜನರೆಲ್ಲ ರಸವೀಂಚಿ
ಹೆತ್ತವರ ನೆನಪಳಿದು ನಲಿದರವ್ವ!
ದೀನ ದಲಿತರನಪ್ಪಿ ಮುದಿ ಮುದ್ದೆ ಬಗೆಯು
ಜಗದೊಡತಿಯಿತ್ತ ಚೆಲುವೆ ಮದರ್ ಕೃತಿಯು!

ಎಂದು ದೀನ ದಲಿತರ ತಾಯಿ ಥೆರೇಸಾಗೆ ಇದನ್ನು ಅರ್ಪಿಸಿದ್ದಾರೆ.

ಸ್ವಾತಂತ್ರ್ಯ ನಂತರದ ಭಾರತದಲ್ಲಿ ಕವಿಯು ಹೇಳುವಂತೆ:

ಈ ಜಗದ ತೃಣ ತೃಣದಿ
ಅನ್ನದಾ ಋಣವಿಹುದು
ವಸುಮದ ಸಂಚಯದಿ
ನರುಗಂಪು ತುಂಬಿಹುದು

ಆದರೇನು? ದೀನ ದಲಿತರು

ತಲೆತಲಾಂತರದಿಂದ ವೇದನೆಯ ಸಹಿಸಿಹರು
ದೂರ ಸರಿಯಿರಿ ಎಂಬ ಕೂಗನಾಲಿಸುತಿಹರು!

ಭಯ ಭೀತಿ ಅಭಿಮಾನ ಶೂನ್ಯತೆ ಬೆಳೆದಿದೆ. ಅಂತೆಯೇ ಪ್ರಪಂಚದ ದಲಿತೋದ್ಧಾರ ನೀತಿ ನಿರ್ಮಾಣವಾಯಿತು. ದಲಿತರುದ್ಧಾರಕ್ಕಾಗಿ ಲಿಂಕನ್‌ನ ಕೊಲೆಯಾಯಿತಯ್ಯೊ, ಕ್ರಿಸ್ತ ಶಿಲುಬೆಗೇರಿದ, ಗಾಂಧಿಗೆ ಗುಂಡು ಬಡಿಯಿತಯ್ಯೊ, ಎಂದು ಕವಿಯ ಆತ್ಮ ಚಿಟ್ಟನೆ ಚೀರಿದೆ.

ಇರುವೆಗೂ ಈ ಜಗದಿ ಜೀವವಿಹುದು
ಕಪ್ಪೆಗೂ ಈ ಜಗದೊಳನ್ನವಿಹುದು
ಪಡೆದವ್ವ ಕೂಸಿಂಗೆ ತಾ ಹಾಲನುಣಿಸಳೇ?

ಎಂಬ ಸಮಾಧಾನದ ನಿಟ್ಟುಸಿರು ಹಾಕಿದ್ದಾರೆ.

ವಿಶ್ವದ ದಲಿತವರ್ಗಕ್ಕೆ ಕರೆ ನೀಡುತ್ತ ಶ್ರೀ ಸಾಮಾನ್ಯರು

ನುಚ್ಚು ನುಂಗುತ ಬಾಳ ನೂಕುವರು
ಹೊಟ್ಟೆಗಿಲ್ಲದೆ ಬೀದಿಯಲೆಯುವರು
ಹಾಸಲಿಲ್ಲದೆ ನೆಲವನಾಶ್ರಯಿಸಿದವರು
ಶತಮಾನಗಳ ನೋವು ನುಂಗಿದವರು
ನೀವಲ್ಲರನ್ಯರೋ ನೀವು ಸೋದರರು
ಒಂದೆ ತಾಯ್ ಮಕ್ಕಳು

ಎಂದು ಹುರಿದುಂಬಿಸುತ್ತಾರೆ.

ನಮ್ಮ ತೋಳ್ ಬಲವೆ ನಮ್ಮ ಭಾಗ್ಯದ ನಿಧಿಯು
ನಿಮ್ಮ ಧನ ದೌಲತ್ತು ನಿಮ್ಮ ಪಾಲಿಗಿರಲಿ
ಚೂರಾದ ಚಾಪೆಗಳು ನಮ್ಮ ಪಾಲಿಗಿರಲಿ
ತುಪ್ಪ ಸಕ್ಕರೆಯುಂಡ ಪಿಂಡಾಂಡ ನಿಮಗಿರಲಿ
ನುಚ್ಚು, ನೀರುಂಡ ಸಂತೃಪ್ತಿ ನಮಗಿರಲಿ

ಎಂಬ ದೀನ ದಲಿತರ ಹೃದಯ ಶ್ರೀಮಂತಿಕೆಯನ್ನು ಪ್ರದರ್ಶಿಸುತ್ತಾರೆ.

ಮೂಡಣದಿ ಮೂಡುವಾ ಚೆಲುವ ದಿನಮಣಿಯೆ
ನಮ್ಮೆದೆವನೆಯ ಕತ್ತಲೆಯ ಪ್ರೇತವ ಕೊಲ್ಲು !
ಪಡುವಣದಿ ಮುಳುಗುವಾ ಪರನು ದಿನಕರನೆ
ಹೊಂಬಣ್ಣದಾ ಚೆಂಬೆಳಕ ನಮ್ಮೆಡೆ ಚೆಲ್ಲು !

ಎಂದು ಪ್ರಾರ್ಥಿಸಿ ಹಗಲು ರಾತ್ರಿಗಳು ಕೂಡ ಹೇಗೆ ದೀನ ದಲಿತರ ಬಾಳಿಗೆ ವರದಾನವಾಗಿ ಬರುತಲಿವೆಯೆಂಬುದನ್ನು ರಮಣೀಯವಾಗಿ ಚಿತ್ರಿಸಿದ್ದಾರೆ.

ಸುರಿಸುತಿದೆ ಕಣ್ಣೀರು ಕವಿಮನದ ರೋಷ
ಮೈದಾಳಿ ಬಾರನೇ ನವಯುಗದ ಪುರುಷ !

ಎಂದು ಪ್ರಶ್ನಿಸಿ

ನಿನ್ನ ಗುಡಿಯಂಗಳದಿ ಸಡಗರದಿ ಬಂದಿಹೆವು
ಬೆಳಕಿನಾರತಿಯೊಡನೆ ಓ ತಾಯಿ ಭಾರತಿಯೆ
ಸತ್‌ಶೀಲ ಸದ್ವಚನಗಳ ಬೆಳಕನು ಸುರಿಸು

ಎಂದು ವಂದಿಸಿ ಮುಗಿಸುತ್ತಾರೆ.

ಮಾನವ ಲೋಕದ ಸಹೃದಯತೆಯ ಭಂಡಾರದ ಔದಾರ್ಯದ ಔನ್ನತ್ಯಗಳ ಮುತ್ತು ರತ್ನಗಳನ್ನು ದೀನ ದಲಿತರ ಜೀವನಕ್ಕಾಗಿ ಸೂರೆ ಮಾಡಿದ ಶ್ರೀಮಂತ

ನಿಧಿ ನಿಧಾನವೀ ಖಂಡಕಾವ್ಯ. ಈ ಕಾವ್ಯ ಸೃಷ್ಟಿಯ ಸಂಗ್ರಾಮದಲ್ಲಿ ಸಂಪೂರ್ಣ ವಿಜಯಿಗಳಾಗಿದ್ದಾರೆ ಕವಿ ಶ್ರೀ ಸೂರ್ಯದೇವರು.

ಪಾಂಡಿತ್ಯ ಪ್ರಭಾಕರ, ವಿದ್ವನ್ಮಣಿ, ಕವಿ ಶ್ರೀ ವ್ಹಿ. ಕೆ. ಗೋಕಾಕ ಅವರು ಮುನ್ನುಡಿಯಲ್ಲಿ "ಇಲ್ಲಿಯ ಅಂತಃಕರುಣ, ನೈಜತೆ ಹಾಗೂ ಹುಮ್ಮಸ್ಸು ನೇರವಾದದ್ದು. ದಲಿತ ವಾಙ್ಮಯದ ಸಂಧಿಕಾಲದಲ್ಲಿ ಅನುಭವ ಸಿದ್ಧವಾಗಿ ಈ ಕಾವ್ಯವು ಹುಟ್ಟಿಕೊಂಡಿದೆ" ಎಂದು ಹೇಳಿರುವುದು ಯಥಾರ್ಥವಾದುದು.

'ದೀನರೆದೆಯ ವೀಣೆಯ ಮಿಡಿತ ನಿಮ್ಮೆದೆಯ ತಲುಪಿದರೆ ಸಾಕು!' ಎಂದು ಹಾರಯಿಸಿದ ಕವಿಯ ತಪಸ್ಸು ಫಲಿಸಿದೆ ಎಂದು ಹೇಳಬಹುದು.

'ಉಳುವೀಶ' ಸ್ವಾಮಿ ಹುಲೆಪ್ಪನವರ ಮಠ



ಪೆರವರನ್ನು ಅಯೋಗ್ಯರೆನ್ನುವುದಕ್ಕಿಂತ ಯೋಗ್ಯರೆಂದು ತಿಳಿದುಕೊಳ್ಳುವುದು, ನಿಮ್ಮ ಯೋಗ್ಯತೆಯನ್ನು ಕೂಡಾ ಹೆಚ್ಚಿಸುವುದು. ಪೆರವರನ್ನು ಅಯೋಗ್ಯರೆಂದು ತಿಳಿದು ನಿನ್ನ ಯೋಗ್ಯತೆಯು ಹೆಚ್ಚಿಂದುಕೊಳ್ಳುತ್ತ ಹೋದರೆ, ನಿನ್ನ ಯೋಗ್ಯತೆ ಕಡಿಮೆಯಾಗಿ ಅವರ ಯೋಗ್ಯತೆ ಹೆಚ್ಚಾಗುವುದು.

—ಪರಮಹಂಸ

ಜ್ಞಾನವನ್ನು ಪೇಟೆಯಲ್ಲಿ ಕೊಳ್ಳಬಹುದು. ನಡತೆಯನ್ನು ಮಾತ್ರ ದೇವರಿಂದಲೇ ಪಡೆಯಬೇಕು.

—ಎ. ಎಚ್. ಕ್ಲಾಫ್

ಸಮುದ್ರದ ಜಲಸಂಪತ್ತು ಅಗಾಧವಾದುದು. ಅದನ್ನು ನೋಡಿ ನಿನ್ನ ಚಿಕ್ಕ ನಾಲಿಗೆಯ ತೃಷೆಯನ್ನು ತಣಿಸಿಕೊಳ್ಳಲು ಆ ಕಡೆಗೆ ಕಣ್ಣೆತ್ತಿ ಕೂಡ ನೋಡಬೇಡ.

—ಲಿವ್ಹಿ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ :: ಮೈಸೂರು - ೪

Reg. No. KRNN. 29 / WPP 6 | LICENSE No. 21 LICENSED TO POST WITHOUT PREPAYMENT

ನೀವು ಓದಲೇಬೇಕಾದ ಪುಸ್ತಕಗಳು.....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಾಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyengar Manager at Karnataka State Adult Education Council Press Mnd Published by Karnataka State Adult Education Council Mysore city (India)